ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 29 ಸೋಮವಾರ 2024

ಸಂಪುಟ: 45 | ಸಂಚಿಕೆ: 14 | ಪುಟಗಳು: 10

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com, website: www.mysurumithra.com

ಬರ ಪರಿಹಾರದಲ್ಲಿ ಅನ್ಯಾಯ; ಕೇಂದ್ರದ ವಿರುದ್ಧ

ಕಾಂಗ್ರೆಸ್ ಪ್ರತಿಭಟನೆ

ಸಿಎಂ–ಡಿಸಿಎಂ ಸೇರಿ ಕಾಂಗ್ರೆಸ್ ನಾಯಕರಿಂದ ಪ್ರತಿಭಟನೆ



ಬರ ಪರಿಹಾರ ವಿತರಣೆಯಲ್ಲಿ ಕೇಂದ್ರ ಸರ್ಕಾರ ಅನ್ಯಾಯ ಮಾಡಿದೆ ಎಂದು ಆರೋಪಿಸಿ ವಿಧಾನಸೌಧ ಮುಂಭಾಗದ ಗಾಂಧಿ ಪ್ರತಿಮೆ ಬಳಿ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು ಪ್ರತಿಭಟನೆ ನಡೆಸಿದರು.

ಬೆಂಗಳೂರು, ಏ.28– ರಾಜ್ಯದ ಬರ ಪರಿಹಾರ ವಿತರಣೆಗೆ ಸರ್ಕಾರ ಮಾಡಿದ್ದ ಬೇಡಿಕೆಗೆ ಅನುಸಾರವಾಗಿ ಕೇಂದ್ರ ಸರ್ಕಾರ 3,454 ಕೋಟಿ ರೂಪಾಯಿ ಬರ ಪರಿಹಾರ ಬಿಡುಗಡೆ ಮಾಡಿದೆ. ಆದರೆ ರಾಜ್ಯದ ಬೇಡಿಕೆಯನ್ನು ಪೂರೈಸಲು ಈ ಪರಿಹಾರ ಮೊತ್ತ ಸಾಕಾಗುವುದಿಲ್ಲ. ಆನೆಂಯ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆಯಂತೆ ಕೇಂದ್ರ ಸರ್ಕಾರ ಅನ್ಯಾಯ ಮಾಡುತ್ತಿದೆ ಎಂದು ಆರೋಪಿಸಿ ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು ವಿಧಾನಸೌಧದ ಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಿದರು.

ಬರ ಪರಿಹಾರ ಮೊತ್ತ ಬಿಡುಗಡೆಯಲ್ಲಿ ಕರ್ನಾಟಕ ಜನತೆಗೆ ಮೋಸ ಮಾಡಿದ ಬಿಜೆಪಿಗೆ ಧಿಕ್ಕಾರ...ಧಿಕ್ಕಾರ, ರೈತರಿಗೆ ಕಡಿಮೆ ಪರಿಹಾರ ಕೊಟ್ಟ ಬಿಜೆಪಿಗೆ ಧಿಕ್ಕಾರ ಎಂದು ಭಿತ್ತಿ ಫಲಕಗಳನ್ನು ಪ್ರದರ್ಶಿಸಿ, ಚೊಂಬು ಕೈಯಲ್ಲಿ ಹಿಡಿದು ಘೋಷಣೆ ಕೂಗಿದರು. ಗೋ ಬ್ಯಾಕ್...ಗೋ ಬ್ಯಾಕ್ ಮೋದಿ ಗೋ ಬ್ಯಾಕ್ ಎಂದು ಕೂಗಿದರು. ಬಿಜೆಪಿ ಸುಳ್ಳಿನ ಲೂಟಿ ಸರ್ಕಾರ ಎಂದರು.

ಈ ವೇಳೆ ಕೈಯಲ್ಲಿ ಚೊಂಬು ಹಿಡಿದು ಮಾತನಾಡಿದ ಸಿಎಂ ಸಿದ್ದರಾಮಯ್ಯ, ಬರ ಪರಿಹಾರ ಬಿಡುಗಡೆಗೆ ಮನವಿ ಸಲ್ಲಿಸಿದ ಒಂದು ವಾರದಲ್ಲಿ ಕೇಂದ್ರದ ತಂಡ ಬರಬೇಕು, ವೀಕ್ಷಣೆ ಮಾಡಿ ವರದಿ ಕೊಡಬೇಕು, ವರದಿ ಕೊಟ್ಟ ನಂತರ ಒಂದು ತಿಂಗಳಲ್ಲಿ ಪರಿಹಾರ ಬಿಡುಗಡೆ ಮಾಡಬೇಕು ಎಂದು ಕಾನೂನಿನಲ್ಲಿದೆ. ನಾವು ಅನಿವಾರ್ಯವಾಗಿ ಕೇಂದ್ರದ ವಿಳಂಬ ನೀತಿ ಕಂಡು ಸುಪ್ರೀಂಕೋರ್ಟ್‌ಗೆ ಹೋಗಬೇಕಾಯಿತು.

● 8ನೇ ಪುಟಕ್ಕೆ

ನ್ಯಾಯಕ್ಕಾಗಿ ಮರಳಿ 'ಸುಪ್ರೀಂ' ಮೊರೆ ಹೋಗುತ್ತೇವೆ

ದಾವಣಗೆರೆ, ಏ.28– ಬರ ಪರಿಹಾರ ರೂಪದಲ್ಲಿ ರಾಜ್ಯಕ್ಕೆ ನೀಡಬೇಕಾದ 18,174 ಕೋಟಿ ರೂ ಹಣದಲ್ಲಿ 3454 ಕೋಟಿ ರೂ. ಮಾತ್ರ ಕೇಂದ್ರ ಬಿಡುಗಡೆ ಮಾಡಿದೆ. ಇನ್ನೂ ಬಾಕಿ ಉಳಿದ 14,718 ಕೋಟಿ ರೂ. ಬರ ಪರಿಹಾರದ ಹಣ ನೀಡಲು ಮೋದಿ ಸರ್ಕಾರ ನಿರಾಕರಿಸಿದೆ. ಇದನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಮತ್ತೊಮ್ಮೆ ಸುಪ್ರೀಂ ಕೋರ್ಟ್‌ಗೆ ಮೊರೆ ಹೋಗಲಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕರ್ನಾಟಕದ ರೈತರ 18,172 ಕೋಟಿ ರೂ. ಬರ ಬರ ಪರಿಹಾರ ನಿರಾಕರಿಸಿ, ಸೇಡಿನ ರಾಜಕಾರಣಕ್ಕೆ ಬಿಜೆಪಿ ಸರ್ಕಾರ ಮುಂದಾಗಿದೆ. ನರೇಂದ್ರ ಮೋದಿ ನೇತೃತ್ವದ ಡಿಎನ್‌ಎ ಕರ್ನಾಟಕ ಮತ್ತು ಕನ್ನಡ ವಿರೋಧಿ ಎಂಬುದಂತೂ ಇದರಿಂದಲೇ ಸ್ಪಷ್ಟವಾಗಿದೆ. ಕರ್ನಾಟಕಕ್ಕೆ ಬರಬೇಕಾದ ಬಾಕಿ ಬರ ಪರಿಹಾರದ ಹಣಕ್ಕಾಗಿ ಕಾಂಗ್ರೆಸ್ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಿದೆ. ರಾಜ್ಯಕ್ಕೆ ಬರ ಪರಿಹಾರದ ನ್ಯಾಯವನ್ನು ನ್ಯಾಯಾಲಯದಿಂದಲೇ ಪಡೆಯಲಿದೆ ಎಂದು ಕೇಂದ್ರಕ್ಕೆ ಎಚ್ಚರಿಸಿದರು. ಕರ್ನಾಟಕಕ್ಕೆ ನ್ಯಾಯವಾಗಿ ಬರಬೇಕಾದ

● 8ನೇ ಪುಟಕ್ಕೆ

ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ–2

ಬೆಂಗಳೂರು, ಏ.28– ಪ್ರತಿ ವರ್ಷ ಗ್ರಾಮೀಣ ಭಾಗದ ವಿದ್ಯಾರ್ಥಿಗಳೇ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಫೇಲ್ ಆಗಿ ಕಲಿಕೆ ಮುಂದುವರೆಸುತ್ತಿರಲಿಲ್ಲ. ಹೀಗಾಗಿ ಅವರು ಉನ್ನತ್ತ ಶಿಕ್ಷಣ ಪಡೆಯುತ್ತಿರಲಿಲ್ಲ. ಇದರಿಂದ ಈ ವರ್ಷ ಪಿಯುಸಿ ವಿದ್ಯಾರ್ಥಿಗಳಿಗೆ ಒಂದಲ್ಲ ಎರಡು ಬಂಪರ್ ಆಫರ್ ನೀಡಿದ ಪರೀಕ್ಷಾ ಮತ್ತು ಮೌಲ್ಯ ನಿರ್ಣಯ ಮಂಡಳಿ ಫಲಿತಾಂಶ ಹೆಚ್ಚಿಸಲು ಮೂರು ಪರೀಕ್ಷೆ ನಡೆಸಲು ಮುಂದಾಗಿದೆ. ಕಳೆದ ತಿಂಗಳಷ್ಟೇ ಪಿಯುಸಿ ಪರೀಕ್ಷೆ ನಡೆಸಿದ್ದು ಫಲಿತಾಂಶ ಕೂಡ ಪ್ರಕಟಿಸಿದೆ. ಫಲಿತಾಂಶ ಪ್ರಕಟಿಸಿ ಎರಡು ವಾರದ ಬಳಿಕ ಈಗ ಪಿಯುಸಿ ಪರೀಕ್ಷೆ–2 ನಡೆಸಲು ಮುಂದಾಗಿದೆ.


29–04–29 ರಿಂದ 16–05–2024 ರವರೆಗೆ ಪಿಯುಸಿ ಪರೀಕ್ಷೆ–2 ನಡೆಯಲಿದ್ದು, ದಾಖಲೆಯ ಪ್ರಮಾಣದಲ್ಲಿ ಪಿಯು ವಿದ್ಯಾರ್ಥಿಗಳ ನೊಂದಣಿ ಮಾಡಿಕೊಂಡಿದ್ದಾರೆ. ವಿಶೇಷ ಅಂದರೆ ಪಿಯುಸಿ ಮೊದಲ ಪರೀಕ್ಷೆಯಲ್ಲಿ ಪಾಸ್ ಆಗಿದ್ದರೂ ಕೂಡಾ ಹಳೆಯ ಫಲಿತಾಂಶ ಚಾಲೆಂಜ್ ಮಾಡಲು 32 ಸಾವಿರ ವಿದ್ಯಾರ್ಥಿಗಳು ಮತ್ತೊಮ್ಮೆ ಪರೀಕ್ಷೆ ಬರೆಯಲು ಮುಂದಾಗಿದ್ದಾರೆ. ಸೋಮುವಾರದಿಂದ ಶುರುವಾಗುವ ದ್ವಿತೀಯ ಪಿಯುಸಿ–2 ಪರೀಕ್ಷೆಗೆ ರಾಜ್ಯದಲ್ಲಿ ಒಟ್ಟು 1,49,300 ವಿದ್ಯಾರ್ಥಿಗಳು ನೊಂದಣಿ ಮಾಡಿಕೊಂಡಿದ್ದಾರೆ. ಪ್ರತಿಯೊಂದು ವಿಷಯದ ಪರೀಕ್ಷೆಯು ಮಧ್ಯಾಹ್ನ 2–15 ರಿಂದ ಸಂಜೆ 4–30 ಗಂಟೆವರೆಗೆ ನಡೆಯಲಿದೆ. ಒಟ್ಟಿನಲ್ಲಿ ಈಗಾಗಲೆ ದ್ವಿತೀಯ ಪಿಯುಸಿ ಪರೀಕ್ಷೆಗೆ ದಿನಾಂಕ ಕೂಡಾ ನಿಗಧಿಯಾಗಿದ್ದು ಹಾಲ್ ಟಿಕೆಟ್ ಕೂಡಾ ಡೌನ್ ಲೋಡ್ ಮಾಡಲು ಇಲಾಖೆ ಅವಕಾಶ ನೀಡಿದ್ದು ಅತ್ಯಂತ ಕಡಿಮೆ ಅವಧಿಯಲ್ಲಿ ಈ ಎರಡನೇ ಪರೀಕ್ಷೆ ನಡೆಯುತ್ತಿದ್ದು ವಿದ್ಯಾರ್ಥಿಗಳು ಈ ಅವಕಾಶ ಸರಿಯಾದ ಸದುಪಯೋಗಪಡಿಸಿಕೊಳ್ಳಬೇಕಿದೆ.

ಪರೀಕ್ಷಾ ವೇಳಾಪಟ್ಟಿ

29–04–2024– ಕನ್ನಡ, ಅರೇಬಿಕ್
30–04–2024– ಇತಿಹಾಸ/ಭೌತಶಾಸ್ತ್ರ
02–05–2024– ಇಂಗ್ಲಿಷ್
03–05–2024– ರಾಜ್ಯಶಾಸ್ತ್ರ, ಸಂಖ್ಯಾಶಾಸ್ತ್ರ
04–05–2024– ಭೂಗೋಳಶಾಸ್ತ್ರ, ಮನಃಶಾಸ್ತ್ರ, ರಸಾಯನಶಾಸ್ತ್ರ, ಗೃಹವಿಜ್ಞಾನ, ಮೂಲಗಣಿತ
09–05–2024– ತರ್ಕಶಾಸ್ತ್ರ, ವ್ಯವಹಾರ ಅಧ್ಯಯನ, ಗಣಿತ, ಶಿಕ್ಷಣಶಾಸ್ತ್ರ
11–05–2024– ಸಮಾಜಶಾಸ್ತ್ರ, ಭೂಗರ್ಭಶಾಸ್ತ್ರ, ಜೀವಶಾಸ್ತ್ರ, ವಿದ್ಯುನ್ಮಾನ ಶಾಸ್ತ್ರ, ಗಣಕ ವಿಜ್ಞಾನ
13–05–2024– ಅರ್ಥಶಾಸ್ತ್ರ
14–05–2024– ಐಚ್ಛಿಕ ಕನ್ನಡ, ಲೆಕ್ಕಶಾಸ್ತ್ರ
15–05–2024– ಹಿಂದಿ
16–05–2024– ತಮಿಳು, ತೆಲುಗು, ಮಲಯಾಳಂ, ಮರಾಠಿ, ಉರ್ದು, ಸಂಸ್ಕೃತ, ಅರೇಬಿಕ್, ಫ್ರೆಂಚ್
16–05–2024– ಹಿಂದೂಸ್ತಾನಿ ಸಂಗೀತ, ಮಾಹಿತಿ ತಂತ್ರಜ್ಞಾನ, ಬ್ಯೂಟಿ ಅಂಡ್ವೆಲ್‌ನೆಸ್, ಆಟೋ ಮೊಬೈಲ್, ರೀಟೈಲ್

ಎಸ್ಸಿ, ಎಸ್ಟಿ ಸಮುದಾಯಗಳಿಗೆ ಸೇರಬೇಕಿದ್ದ 11,000 ಕೋಟಿಯನ್ನು ಕಾಂಗ್ರೆಸ್ ನುಂಗಿ ನೀರು ಕುಡಿದಿದೆ

ಪ್ರಧಾನಿ ಮೋದಿ ಆಕ್ರೋಶ



ದಾವಣಗೆರೆ, ಏ.28– ಬಡವರಿಗೆ ತಲುಪಿಸಬೇಕಾದ ಯೋಜನೆಗಳು ಮತ್ತು ಎಸ್ಸಿ–ಎಸ್ಟಿ ಯೋಜನೆಯೇ ಕಾಂಗ್ರೆಸ್‌ನವರ ಭ್ರಷ್ಟಾಚಾರದ ಮೂಲವಾಗಿತ್ತು. ಕರ್ನಾಟಕದಲ್ಲಿಯೂ ಎಸ್ಸಿ–ಎಸ್ಟಿ ಸಮುದಾಯಗಳಿಗೆ ಸೇರಬೇಕಾದ 11,000 ಕೋಟಿ ರೂ.ಗಳನ್ನು ಕಾಂಗ್ರೆಸ್ ನುಂಗಿ ನೀರು ಕುಡಿದಿದೆ ಎಂದು ಪ್ರಧಾನಿ ಮೋದಿ ಗಂಭೀರ ಆರೋಪ ಮಾಡಿದ್ದಾರೆ.

ದಾವಣಗೆರೆಯಲ್ಲಿಂದು ನಡೆದ ಬೃಹತ್ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಅವರು, ಈ ಹಿಂದೆ ಕಾಂಗ್ರೆಸ್‌ನ ಮಾಜಿ ಪ್ರಧಾನಿಯೇ ಹೇಳಿದ್ದರು, 100 ಕೊಟ್ಟರೆ 15 ಪೈಸೆ ಮಾತ್ರ ಫಲಾನುಭವಿಗಳಿಗೆ ತಲುಪುತ್ತದೆ ಅಂತ. ಅಂದರೆ 85 ಪೈಸೆ ಯಾರು ಹೊಡೆಯುತ್ತಿದ್ದರು? ಬಡವರ ಯೋಜನೆಗಳು, ಎಸ್ಸಿ–ಎಸ್ಟಿ ಸಮುದಾಯಕ್ಕೆ ತಲುಪಿಸಬೇಕಾದ ಯೋಜನೆಗಳ ಹೆಸರಲ್ಲಿ ಸಾವಿರಾರು ಕೋಟಿ ರೂ. ಬಿಡುಗಡೆ ಮಾಡಿ ಕಾಂಗ್ರೆಸ್‌ನವರು ಭ್ರಷ್ಟಾಚಾರ ಮಾಡುತ್ತಿದ್ದರು. ನಿಮ್ಮ ಮೋದಿ ಬಂದ ಬಳಿಕ ನೇರವಾಗಿ ಅವರವರ ಖಾತೆಗೆ ಹೋಗತೊಡಗಿತು ಎಂದು ಕಿಡಿ ಹೇಳಿದ್ದಾರೆ.

ಕರ್ನಾಟಕದಲ್ಲಿ ಸಿಎಂ–ಡಿಸಿಎಂ ಮುಸುಕಿನ ಗುದ್ದಾಟ ನಡೆದಿದೆ. ಇಬ್ಬರು ಪರಸ್ಪರ ಕಾಲೆಳೆಯುತ್ತಿದ್ದಾರೆಯೇ ಹೊರತು, ರಾಜ್ಯದ ಅಭಿವೃದ್ಧಿಗೆ ದುಡಿಯುತ್ತಿಲ್ಲ. ಇಂಡಿಯಾ ಒಕ್ಕೂಟ ಅಧಿಕಾರಕ್ಕೆ

● 8ನೇ ಪುಟಕ್ಕೆ

ಕೆಆರ್‌ಎಸ್ ಸಂಗೀತ ಕಾರಂಜಿ ಸಿಬ್ಬಂದಿ ಮೇಲೆ ಪ್ರವಾಸಿಗರ ಹಲ್ಲೆ



ಸಿಬ್ಬಂದಿ ಮೇಲೆ ಪ್ರವಾಸಿಗರು ಹಲ್ಲೆ ನಡೆಸುತ್ತಿರುವುದು.

ಕೆಆರ್‌ಎಸ್, ಏ.28(ಎಂಟಿವೈ)– ಮನ ಬಂದಂತೆ ಸಂಗೀತ ಕಾರಂಜಿ ಆನ್ ಮಾಡುವ ಸಿಬ್ಬಂದಿಗಳ ವರ್ತನೆಯಿಂದ ಬೇಸತ್ತ ಪ್ರವಾಸಿಗರು ಸಿಬ್ಬಂದಿಗಳ ಮೇಲೆ ಹಲ್ಲೆ ನಡೆಸಿ ಅಸಮಾಧಾನ ವ್ಯಕ್ತಪಡಿಸಿರುವ ಘಟನೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್‌ನಲ್ಲಿ ಶನಿವಾರ ರಾತ್ರಿ ನಡೆದಿದೆ

ಪ್ರವಾಸಿಗರ ಆಕರ್ಷಣೆಗಾಗಿ ನಿರ್ಮಿಸಿರುವ ಸಂಗೀತ ಕಾರಂಜಿಯನ್ನು ಅಲ್ಲಿನ ಸಿಬ್ಬಂದಿಗಳು ಮನ ಬಂದಂತೆ ಆನ್ ಮಾಡುತ್ತಿದ್ದು, ಇದರಿಂದ ಪ್ರವಾಸಿ ಗರು ಪರದಾಡುವಂತಹ ಸ್ಥಿತಿ ನಿರ್ಮಾಣ ವಾಗಿದೆ. ಈ ಹಿನ್ನೆಲೆಯಲ್ಲಿ ವಾರಾಂತ್ಯ ರಜೆಯಲ್ಲಿ (ಶನಿವಾರ) ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಕೆಆರ್‌ಎಸ್ ಉದ್ಯಾನವನಕ್ಕೆ ಆಗಮಿಸಿದ್ದ ಪ್ರವಾಸಿಗರು ಸಂಗೀತ ಕಾರಂಜಿ ವೀಕ್ಷಣೆಗೆ ಕಾತರದಿಂದ ಕಾಯುತ್ತಿದ್ದರು. ಈ ವೇಳೆ ಸಿಬ್ಬಂದಿಗಳು ನಿಗದಿತ ಸಮಯಕ್ಕೆ ಸಂಗೀತ ಕಾರಂಜಿಯನ್ನು ಆನ್ ಮಾಡದೆ, ಪ್ರವಾಸಿಗರು ಕಾಯುವಂತೆ ಮಾಡಿದ್ದರು. ಇದರಿಂದ ಸಾಕಷ್ಟು ಮಂದಿ ಬೇಸರಗೊಂಡಿದ್ದರು. ಮತ್ತೊಂದು ಶೋನಲ್ಲಿಯೂ ಉದ್ಯಾನವನದಲ್ಲಿದ್ದ ವಿದ್ಯುದ್ದೀಪಗಳನ್ನು ಆಫ್ ಮಾಡಿ 15 ನಿಮಿಷದ ನಂತರ ಸಂಗೀತ ಕಾರಂಜಿಯನ್ನು ಆನ್ ಮಾಡಿದರು. ಅಷ್ಟರಲ್ಲಾಗಲೇ ಬೇಸತ್ತಿದ್ದ ಪ್ರವಾಸಿಗರು ಕೆಆರ್‌ಎಸ್ ಮುಖ್ಯ ದ್ವಾರಕ್ಕೆ ಬಂದು ಪ್ರವೇಶ ಶುಲ್ಕವನ್ನು ಹಿಂದಿರುಗಿಸುವಂತೆ ಒತ್ತಾಯಿಸಿ ಸಿಬ್ಬಂದಿಗಳೊಂದಿಗೆ ಮಾತಿನ ಚಕಮಕಿ ನಡೆಸಿದರು. ಈ ವೇಳೆ ಟಿಕೆಟ್ ನೀಡುವ ಸಿಬ್ಬಂದಿಯೊಂದಿಗೆ ಮಾತಿನ ಚಕಮಕಿಯಲ್ಲಿ ತೊಡಗಿದ್ದ ಪ್ರವಾಸಿಗರಲ್ಲಿ ಕೆಲವರು ನಿಂದಿಸಿದ್ದಾರೆ. ಇದರಿಂದ ಕುಪಿತಗೊಂಡ ಸಿಬ್ಬಂದಿ ಹಣ ಹಿಂತಿರುಗಿಸುವಂತೆ ಒತ್ತಾಯಿಸುತ್ತಿದ್ದ ಪ್ರವಾಸಿಗರೊಂದಿಗೆ ಮಾತಿನ ಚಕಮಕಿಗಿಳಿದಿದ್ದು, ಈ ವೇಳೆ ಕೆಲವರು ಟಿಕೆಟ್ ನೀಡುತ್ತಿದ್ದ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಬಂದ ಕೆಆರ್‌ಎಸ್ ಪೊಲೀಸರು ಹಲ್ಲೆಗೆ ಒಳಗಾಗುತ್ತಿದ್ದ ಸಿಬ್ಬಂದಿಯನ್ನು ರಕ್ಷಿಸಿದ್ದಾರೆ.

ನಿರ್ವಹಣೆ ಸರಿ ಇಲ್ಲ: ಸ್ಥಳೀಯರ ಆರೋಪ

ಕೆಆರ್‌ಎಸ್ ಉದ್ಯಾನದಲ್ಲಿನ ಸಂಗೀತ ಕಾರಂಜಿಯ ನಿರ್ವಹಣೆ ಜವಾಬ್ದಾರಿ ಹೊತ್ತಿರುವವರು ಸರಿಯಾದ ರೀತಿಯಲ್ಲಿ ಕೆಲಸ ನಿರ್ವಹಿಸದೇ ಇರುವುದರಿಂದ ಪ್ರವಾಸಿಗರು ತೊಂದರೆಗೀಡಾಗಿದ್ದಾರೆ. ಅಲ್ಲದೇ ಸಮಯ ಪರಿಪಾಲನೆ ಮಾಡದೇ ಬೇಕಾಬಿಟ್ಟಿ ವರ್ತಿಸುತ್ತಿದ್ದಾರೆ. ಈ ಹಿಂದೆ ಸಂಜೆ 6.30ಕ್ಕೆ ಸಂಗೀತ ಕಾರಂಜಿಯನ್ನು ಆನ್ ಮಾಡಲಾಗುತ್ತಿತ್ತು. 10 ನಿಮಿಷ ಶೋ ನಡೆಸಿದ ನಂತರ 5 ನಿಮಿಷ ವಿಶ್ರಾಂತಿ ನೀಡಲಾಗುತ್ತಿತ್ತು. ಆ ಬಳಿಕ ಮತ್ತೆ ಸಂಗೀತ ಕಾರಂಜಿ ಆನ್ ಮಾಡಲಾಗುತ್ತಿತ್ತು ಆದರೆ ಇತ್ತೀಚೆಗೆ 15 ನಿಮಿಷ ಶೋ ನಡೆಸಿದ ಬಳಿಕ ಮತ್ತೆ 15 ನಿಮಿಷ ವಿಶ್ರಾಂತಿ ನೀಡಲಾಗುತ್ತಿದೆ. ಇದರಿಂದ ಸಂಗೀತ ಕಾರಂಜಿ ಸ್ಥಳದಲ್ಲಿ ಜನ ಜಂಗುಳಿ ಹೆಚ್ಚಾಗಿ ಪಿಕ್ ಪಾಕೆಟ್ ಸೇರಿದಂತೆ ಇನ್ನಿತರ ಕೃತ್ಯಗಳು ನಡೆಯುತ್ತಿವೆ. ಈ ಹಿನ್ನೆಲೆಯಲ್ಲಿ ಈ ಹಿಂದೆ ಕಾರ್ಯಾಚರಿಸುತ್ತಿದ್ದಂತೆ ಸಂಗೀತ ಕಾರಂಜಿಯ ಸಮಯವನ್ನು ಮಾರ್ಪಡಿಸಬೇಕು. ಒಂದು ಶೋ ಮುಗಿದ ನಂತರ ವಿಶ್ರಾಂತಿ ನೀಡಿ, ಮತ್ತೆ ಶೋ ಪುನರಾರಂಭಿಸಬೇಕು. ಅಲ್ಲದೇ ಸಂಗೀತಕ್ಕೆ ಅನುಗುಣವಾಗಿ ಈ ಹಿಂದೆ ನಡೆಸುತ್ತಿದ್ದ ಫೈರಿಂಗ್ ಅನ್ನು ಮುಂದುವರೆಸಬೇಕು. ಕೆಆರ್‌ಎಸ್‌ಗೆ ಬರುವ ಪ್ರವಾಸಿಗರಿಗೆ ಜನಸ್ನೇಹಿ ವಾತಾವರಣವನ್ನು ನಿರ್ಮಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಶ್ರೀಲಂಕಾದಲ್ಲಿ ಸೀತಾಮಾತೆ ದೇಗುಲ ಪ್ರತಿಷ್ಠಾಪನೆಗೆ ಭಾರತದ ಪವಿತ್ರ ಸರಯೂ ನದಿ ನೀರು ಪೂರೈಕೆ!



ಸರಯೂ ನದಿ

ನವದೆಹಲಿ, ಏ.28– ಭಾರತದಲ್ಲಿ ಅಯೋಧ್ಯೆ ರಾಮಮಂದಿರ ನಿರ್ಮಾಣದ ಬೆನ್ನಲ್ಲೇ ರಾಮಾಯಣದ ಪ್ರಮುಖ ಭಾಗವಾಗಿರುವ ಶ್ರೀಲಂಕಾದಲ್ಲೂ ಸೀತಾಮಾತೆ ದೇಗುಲ ನಿರ್ಮಾಣವಾಗುತ್ತಿದ್ದು, ಈ ದೇಗುಲಕ್ಕೆ ಭಾರತದ ಸರಯೂ ನದಿಯಿಂದ ಪವಿತ್ರ ನೀರನ್ನು ರವಾನೆ ಮಾಡಲಾಗಿದೆ.

ಸೀತಾ ದೇವಿಗೆ ಸಮರ್ಪಿತವಾಗಿರುವ ಸೀತಾ ಅಮ್ಮನ ದೇವಾಲಯದ ಪವಿತ್ರ ಕಾರ್ಯಕ್ರಮಕ್ಕಾಗಿ ಶ್ರೀಲಂಕಾಕ್ಕೆ ಪವಿತ್ರ ಸರಯೂ ನದಿ ನೀರನ್ನು ಕಳುಹಿಸುವ ಪ್ರಕ್ರಿಯೆಯನ್ನು ಭಾರತ ಪ್ರಾರಂಭಿಸಿದೆ. ಮೇ 19 ರಂದು ಸೀತಾ ಅಮ್ಮನವರ ದೇವಸ್ಥಾನದ ಮಹಾ ಮಸ್ತಕಾಭಿಷೇಕ ಕಾರ್ಯಕ್ರಮ ನಡೆಯಲಿದ್ದು, ಶ್ರೀಲಂಕಾದ ಪ್ರತಿನಿಧಿಗಳು ಉತ್ತರ ಪ್ರದೇಶ ಸರ್ಕಾರಕ್ಕೆ ಬರೆದ ಪತ್ರದ ನಂತರ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಈ ಧಾರ್ಮಿಕ ಸಮಾರಂಭಗಳಿಗೆ ಸರಯೂ ನದಿ ನೀರು ಮತ್ತು ದೇವಾಲಯದಲ್ಲಿ ಸೀತಾ ದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸಲು ವಿನಂತಿಸಲಾಗಿದೆ. ಉತ್ತರ ಪ್ರದೇಶ ಸರ್ಕಾರದ ನಿರ್ದೇಶನದ ಮೇರೆಗೆ ಪ್ರವಾಸೋದ್ಯಮ ಇಲಾಖೆಗೆ ಪವಿತ್ರ ಜಲವನ್ನು ಸಾಗಿಸುವ ಜವಾಬ್ದಾರಿಯನ್ನು ನೀಡಲಾಗಿದೆ ಎಂದು ಅವರು ಮಾಹಿತಿ ನೀಡಿದರು. ಶ್ರೀಲಂಕಾ ಮತ್ತು ಉತ್ತರ ಪ್ರದೇಶ

● 8ನೇ ಪುಟಕ್ಕೆ

ಹೆಚ್ಚಿದ ತಾಪಮಾನ

ಕುಕ್ಕರಹಳ್ಳಿ ಕೆರೆಯಲ್ಲಿ ಮೀನುಗಳ ಸಾವು

ಪರಿಸರವಾದಿಗಳಲ್ಲಿ ಹೆಚ್ಚಿದ ಆತಂಕ



ಮೈಸೂರಿನ ಕುಕ್ಕರಹಳ್ಳಿಯಲ್ಲಿ ತೇಲುತ್ತಿರುವ ಸತ್ತ ಮೀನುಗಳು.

ಮೈಸೂರು,ಏ.28(ಎಂಟಿವೈ)– ಹವಾಮಾನ ವೈಪರಿತ್ಯದಿಂದಾಗಿ ಕಳೆದ ಕೆಲವು ದಿನಗಳಿಂದ ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಬಿಸಿಲಿನ ಬೇಗೆ ಹೆಚ್ಚಾಗಿದ್ದು, ಜಲಚರಗಳ ಮೇಲೂ ದುಷ್ಪರಿಣಾಮ ಬೀರುತ್ತಿದೆ. ಮೈಸೂರಿನ ಕುಕ್ಕರಹಳ್ಳಿ ಕೆರೆಯಲ್ಲಿ ಬಿಸಿಲಿನ ಬೇಗೆಗೆ ಮೀನುಗಳು ಸಾವನಪ್ಪುತ್ತಿದ್ದು, ಪರಿಸರ ವಾದಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಇತಿಹಾಸದಲ್ಲಿಯೇ ಈ ಬಾರಿ ಮೈಸೂರಿನ ತಾಪಮಾನ 40 ಡಿಗ್ರಿ ದಾಖಲಾಗಿದ್ದು, ಜನ ಜೀವನದೊಂದಿಗೆ ಪ್ರಾಣಿ, ಪಕ್ಷಿ ಹಾಗೂ ಜಲಚರಗಳ ಮೇಲೂ ದುಷ್ಪರಿಣಾಮ ಬೀರುತ್ತಿದೆ. ಮೈಸೂರಿನ ಹೃದಯ ಭಾಗದಲ್ಲಿರುವ ಕುಕ್ಕರಹಳ್ಳಿ ಕೆರೆಯಲ್ಲಿ ಕಳೆದ ಒಂದು ವಾರದಿಂದ ಬಿಸಿಲಿನ ಬೇಗೆಗೆ ಜಲಚರಗಳು ತತ್ತರಿಸುತ್ತಿದ್ದು, ಮೀನುಗಳು ಸಾವನ್ನಪ್ಪುತ್ತಿದೆ. ಪ್ರತಿದಿನ ಹತ್ತಾರು ಮೀನುಗಳು ಸಾವನ್ನಪ್ಪಿ ಕೆರೆ ದಡಕ್ಕೆ ತೇಲಿಕೊಂಡು ಬರುತ್ತಿವೆ.

ಕಳೆದ ಎರಡು ದಿನಗಳಿಂದ ಕುಕ್ಕರಹಳ್ಳಿ ಕೆರೆಯಲ್ಲಿ ಮೃತಪಡುತ್ತಿರುವ ಮೀನುಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಶನಿವಾರ ರಾತ್ರಿ ಸಾಕಷ್ಟು ಮೀನುಗಳು ಜೀವ ತೆತ್ತಿವೆ. ಇದರಿಂದ ಭಾನುವಾರ ಮುಂಜಾನೆ ವಾಯುವಿಹಾರಕ್ಕಾಗಿ ಕುಕ್ಕರಹಳ್ಳಿ ಕೆರೆಗೆ ಬಂದ ವಾಯುವಿಹಾರಿ ಗಳಿಗೆ ಕೆರೆಯಲ್ಲಿ ಸತ್ತು ತೇಲುತ್ತಿರುವ ಮೀನುಗಳು ಕಂಡಿವೆ. ಅಲ್ಲದೆ, ಸತ್ತ ಮೀನುಗಳು ಕೊಳೆಯಲಾರಂಭಿಸಿದ್ದು, ಕೆರೆ ಪರಿಸರ ಹದಗೆಡುತ್ತಿದೆ.

● 8ನೇ ಪುಟಕ್ಕೆ

> ಕಳೆದ ಕೆಲವು ದಿನಗಳಿಂದ ಬಿಸಿಲಿನ ಪ್ರಮಾಣ ಹೆಚ್ಚಾಗಿರುವುದರಿಂದ ಕೆರೆಯಲ್ಲಿ ಮೀನುಗಳು ಸಾವನ್ನಪ್ಪುತ್ತಿವೆ. ಈ ಹಿಂದೆ ದಿನಕ್ಕೆ 5–10 ಮೀನುಗಳು ಮೃತಪಡುತ್ತಿದ್ದವು. ಅವುಗಳನ್ನು ತೆರವುಗೊಳಿಸಲಾಗುತ್ತಿತ್ತು. ಇಂದು ಬೆಳಗ್ಗೆ ಕೆರೆಯಲ್ಲಿ ಸತ್ತ ಮೀನುಗಳು ತೇಲುತ್ತಿರುವ ವಿಷಯ ತಿಳಿದು ತೆಪ್ಪದ ಮೂಲಕ ಅವುಗಳನ್ನು ತೆರವುಗೊಳಿಸಲಾಗಿದೆ.
>
> – ಮುಜಾವರ್,
> ಸಹಾಯಕ ನಿರ್ದೇಶಕ, ತೋಟಗಾರಿಕಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ

ಸಂಸದ ಶ್ರೀನಿವಾಸಪ್ರಸಾದ್ ಆರೋಗ್ಯ ವಿಚಾರಿಸಿದ ಸಚಿವ ಡಾ.ಮಹದೇವಪ್ಪ



ಮೈಸೂರು, ಏ.28(ಬಿಎಲ್‌ಯು)– ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರು ಭಾನುವಾರ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ಭೇಟಿ ನೀಡಿ ಹಿರಿಯ ರಾಜಕಾರಣಿ, ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರ ಆರೋಗ್ಯ ವಿಚಾರಿಸಿದರು.

ಸುಮಾರು ಒಂದು ಗಂಟೆ ಕಾಲ ಆಸ್ಪತ್ರೆಯಲ್ಲೇ ಇದ್ದ ಅವರು, ಪ್ರಸಾದ್ ಅವರಿಗೆ ಚಿಕಿತ್ಸೆ ನೀಡುತ್ತಿರುವ ವೈದ್ಯರಿಂದ ಮಾಹಿತಿ ಪಡೆದರು. ಪ್ರಸಾದ್ ಕುಟುಂಬದ ಸದಸ್ಯರೊಂದಿಗೆ ಸಮಾಲೋಚನೆ ನಡೆಸಿದ ನಂತರ ಅವರು, ನಿರ್ಗಮಿಸಿದರು.

ಪ್ರಸಾದ್ ಆರೋಗ್ಯದಲ್ಲಿ ಚೇತರಿಕೆ



ಬಹು ಅಂಗಾಂಗ ವೈಫಲ್ಯದ ಕಾರಣ ಏಪ್ರಿಲ್ 22ರಂದು ಶ್ರೀನಿವಾಸ ಪ್ರಸಾದ್ ಅವರನ್ನು ಬೆಂಗಳೂರಿನ ಏರ್‌ಪೋರ್ಟ್ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು ಕಳೆದ 2 ದಿನ ಪ್ರಸಾದ್ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿತ್ತು. ಆದರೆ ಇಂದು ಅವರ ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಚೇತರಿಕೆ ಕಂಡುಬಂದಿದ್ದು, ಚಿಕಿತ್ಸೆಗೆ ಸ್ಪಂದಿಸುತ್ತಿರುವ ಅವರು, ಕುಟುಂಬಸ್ಥರ ಜೊತೆ ಮಾತನಾಡಲು ಪ್ರಯತ್ನಿಸಿದರು ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

ಇಂದಿನಿಂದ ಮೇ 25ರವರೆಗೆ ಹೈಕೋರ್ಟ್‌ಗೆ ರಜೆ



ಬೆಂಗಳೂರು: ಹೈಕೋರ್ಟ್‌ಗೆ ಏ.29ರಿಂದ ಮೇ 25ರವರೆಗೆ ಬೇಸಿಗೆ ರಜೆ ಇರಲಿದೆ. ತುರ್ತು ಪ್ರಕರಣಗಳ ವಿಚಾರಣೆ ನಡೆಸಲು ಬೆಂಗಳೂರಿನ ಪ್ರಧಾನ ಪೀಠ, ಧಾರವಾಡ ಮತ್ತು ಕಲಬುರಗಿಯಲ್ಲಿ ವಿಭಾಗೀಯ ಮತ್ತು ಏಕಸದಸ್ಯ ನ್ಯಾಯಮೂರ್ತಿಗಳನ್ನು ಒಳಗೊಂಡ ರಜಾಕಾಲದ ಪೀಠಗಳನ್ನು ರಚಿಸಲಾಗಿದೆ.

ರಜಾ ಸಂದರ್ಭದಲ್ಲಿ ಪ್ರಧಾನ ಪೀಠದಲ್ಲಿ ಒಟ್ಟು ಎಂಟು ದಿನ, ಧಾರವಾಡ ಮತ್ತು ಕಲಬುರ್ಗಿ ಪೀಠಗಳಲ್ಲಿ ಏಳು ದಿನ ವಿಚಾರಣೆ ನಡೆಯಲಿದೆ. ತಡೆಯಾಜ್ಞೆ, ಮಧ್ಯಂತರ ನಿರ್ದೇಶನ ಮತ್ತು ತಾತ್ಕಾಲಿಕ ಪ್ರತಿಬಂಧಕಾದೇಶ ಇತ್ಯಾದಿ ಪ್ರಕರಣಗಳ ವಿಚಾರಣೆಯನ್ನು ಮಾತ್ರ ಈ ಅವಧಿಯಲ್ಲಿ ನಡೆಸಲಾಗುತ್ತದೆ. ಮೇಲ್ಮನವಿ, ಕ್ರಿಮಿನಲ್ ಮೇಲ್ಮನವಿ, ಕ್ರಿಮಿನಲ್ ಅರ್ಜಿ, ಸಿವಿಲ್ ರೂಪದ ಅರ್ಜಿಗಳ ವಿಚಾರಣೆ ಇರುವುದಿಲ್ಲ. ಇ–ಫೈಲಿಂಗ್ ಪೋರ್ಟಲ್ ಮೂಲಕ ಇ–ಫೈಲಿಂಗ್ ಮಾಡಬಹುದಾಗಿದೆ ಎಂದು ರಿಜಿಸ್ಟ್ರಾರ್ ಎಂ ಚಂದ್ರಶೇಖರರೆಡ್ಡಿ ತಿಳಿಸಿದ್ದಾರೆ.

ಕಾಂಗ್ರೆಸ್‌ಗೆ ನೇಮಕ



ಮೈಸೂರು: ನಗರ (ಜಿಲ್ಲಾ) ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗಗಳ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿಯನ್ನಾಗಿ ಬೋಗಾದಿ 2ನೇ ಹಂತ (ದಕ್ಷಿಣ)ದ ನಿವಾಸಿ ಸಿ.ವಿಶ್ವನಾಥ್ ಅವರನ್ನು ನೇಮಕ ಮಾಡಲಾಗಿದೆ.

ಡಿವೈಎಸ್‌ಪಿ ಹೆಚ್.ಎಂ.ಮಹದೇವಪ್ಪ ಇನ್ನಿಲ್ಲ



ಬೆಂಗಳೂರು, ಏ.28– ಕರ್ನಾಟಕ ರಾಜ್ಯ ಗುಪ್ತ ವಾರ್ತೆ ಡಿವೈಎಸ್‌ಪಿ ಹೆಚ್.ಎಂ.ಮಹದೇವಪ್ಪ(52) ಅವರು ಭಾನುವಾರ ಮುಂಜಾನೆ ನಿಧನರಾದರು. ಇವರು ಮೈಸೂರಿನ ಮೇಟಗಳ್ಳಿ ಪೊಲೀಸ್ ಠಾಣೆ, ಹುಣಸೂರು, ಚಾಮರಾಜನಗರ ಮುಂತಾದೆಡೆ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಸೇವೆ ಸಲ್ಲಿಸಿದ್ದರು.


ಮಹದೇವಪ್ಪ ಅವರು ಪತ್ನಿ, ಪುತ್ರಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಬೆಂಗಳೂರಿನ ಬಾಣಸವಾಡಿ ನಿವಾಸಿಯಾಗಿದ್ದ ಇವರ ಅಂತ್ಯಕ್ರಿಯೆಯನ್ನು ಸ್ವಗ್ರಾಮ ಕನಕಪುರ ತಾಲೂಕು ಕೋಡಿಹಳ್ಳಿ ಬಳಿಯ ಹಣಕಡಗೂರಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮಹದೇವಪ್ಪ ಅವರ ನಿಧನಕ್ಕೆ ಕರ್ನಾಟಕ ರಾಜ್ಯ ನಿವೃತ್ತ ಪೊಲೀಸ್ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘ ಸಂತಾಪ ವ್ಯಕ್ತಪಡಿಸಿದೆ.

ವಿ.ಶಿವಣ್ಣ ನಿಧನ



ಮೈಸೂರು, ಏ.28– ಮೈಸೂರು ರಾಮಾನುಜಂ ನಿವಾಸಿ ಹಾಗೂ ದಿ.ವೀರಭದ್ರಪ್ಪ ಅವರ ಪುತ್ರ ವಿ.ಶಿವಣ್ಣ(84) ಶನಿವಾರ ತಡರಾತ್ರಿ ನಿಧನರಾದರು. ಮೃತರು, ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂದು–ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯು ವಿದ್ಯಾರಣ್ಯಪುರಂನಲ್ಲಿರುವ ಲಿಂಗಾಯತ ರುದ್ರಭೂಮಿಯಲ್ಲಿ ಭಾನುವಾರ ಮಧ್ಯಾಹ್ನ ನೆರವೇರಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

29.04.2024 ಸೋಮವಾರ, ಮಳೆ ನಕ್ಷತ್ರ: ಭರಣಿ 27.04.2024ರಿಂದ 10.05.2024 ಕ್ರೋಧಿ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಪೂರ್ವಾಷಾಢ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7ರವರೆಗೆ
- **ಜೆಎಸ್‌ಎಸ್ ಮಹಿಳಾ ಕಾಲೇಜು (ಸ್ವಾಯತ್ತ)** : 16ನೇ ಪದವೀಧರರ ದಿನಾಚರಣೆ, ದಿವ್ಯ ಸಾನಿಧ್ಯ: ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು: ವಾಣಿಜ್ಯ ತೆರಿಗೆಗಳ ಇಲಾಖೆ (ಬೆಂಗಳೂರು) ಆಯುಕ್ತೆ ಶ್ರೀಮತಿ ಸಿ.ಶಿಖಾ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ಸ್ಥಳ: ನವಜ್ಯೋತಿ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 11 ಗಂಟೆಗೆ.
- **ನಂದು ಅಸೋಸಿಯೇಟ್ಸ್, ನೃತ್ಯಗಿರಿ:** ಭಾವಸ್ಫೂರ್ತಿ ಕಾರ್ಯಕ್ರಮ, ಸುಗಮ ಸಂಗೀತ, ಜೀ ಸರಿಗಮಪ ಖ್ಯಾತಿಯ ಶುಭಾ ರಾಘವೇಂದ್ರ ಹಾಗೂ ತನುಶ್ರೀ ಆರ್. ಅವರಿಂದ 'ಸ್ವರಾಮೃತ' ಸ್ಥಳ: ವೀಣೆ ಶೇಷಣ್ಣ ಭವನ, ಗಾನಭಾರತೀ, ಕುವೆಂಪುನಗರ, ಸಂಜೆ 6.30ಕ್ಕೆ.
- **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** ಶ್ರೀ ಕ್ರೋಧಿನಾಮ ಸಂವತ್ಸರದ 134ನೇ ವರ್ಷದ ಶ್ರೀ ರಾಮೋತ್ಸವ, ಹನುಮಂತೋತ್ಸವ, ಸಂಜೆ 6.30ಕ್ಕೆ ರಾಜಬೀದಿಗಳಲ್ಲಿ ಮೆರವಣಿಗೆ, ಸ॥ ವಿ॥ ಶ್ರೀ ಪಾರ್ಥಸಾರಥಿ ಮತ್ತು ವೃಂದದವರಿಂದ ನಾದಸ್ವರ ವಾದನ, ರಾತ್ರಿ 8 ಗಂಟೆಗೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಸಭಾದ ಆವರಣ, ಶ್ರೀರಾಮಪೇಟೆ.

ಮೈಸೂರು ಆಕಾಶವಾಣಿ



ಬೆಳಗ್ಗೆ 6.10–ಚಿಂತನ, 6.15–ಗೀತಾರಾಧನ, 6.35. / 6.10 'ವಿಶ್ವ ವಿಖ್ಯಾತ ವಿಜ್ಞಾನಿಗಳು' ಬಾನುಲಿ ಸರಣಿ ಪ್ರಸ್ತುತಿ–ಶ್ರೀನಿವಾಸ ಪ್ರಸಾದ್, 6.40–ಪದಸಂಸ್ಕೃತಿ–ಪ್ರಸ್ತುತಿ–ಡಾ.ಟಿ.ವಿ. ಸತ್ಯನಾರಾಯಣ, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು, 9.05–ನೆನಪಿನಂಗಳ (ಧ್ವನಿ ಭಂಡಾರದಿಂದ), 10.00–ಶಾಸ್ತ್ರೀಯ ಸಂಗೀತ–ಆರ್.ಹರಿಣಿ–ಹಾಡುಗಾರಿಕೆ, 11.00–ಮಿಶ್ರ ಮಾಧುರ್ಯ, 12.30–ದೇವರನಾಮ, 12.45 ನಮ್ಮ ಆರೋಗ್ಯ–"ರಾಷ್ಟ್ರೀಯ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ" ಕುರಿತು ಮೈಸೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆರ್‌ಸಿಹೆಚ್ ಅಧಿಕಾರಿ ಡಾ.ಜಯಂತ್ ಎಂ.ಎಸ್. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.00–ಚಿತ್ರಗೀತೆಗಳು, 1.20–ಭಾವಗೀತೆಗಳು 4.00–ಮಹಿಳಾರಂಗ ಡಾಕ್ಟರ್ ಸಮಯ" ಮಧ್ಯವಯಸ್ಸಿನ ನಂತರ ಆಹಾರ ಹಾಗೂ ಜೀವನ ಶೈಲಿ ಭಾಗವಹಿಸುವ ವೈದ್ಯರು: ಆಹಾರ ಹಾಗೂ ಪೋಷಕ ತಜ್ಞರಾದ ಡಾ.ಸಿ.ಅನಿತಾ ಪ್ರಸ್ತುತಿ: ಕೆ.ಬಿ.ಮೀನಾ, 4.45–ಹಿಂದಿ ಪಾಠ– ಪ್ರಸ್ತುತಿ–ಡಾ.ಜಯಂತಿ ಪ್ರಸಾದ್ ನೌಟಿಯಾಲ್ 6.50 ಕೃಷಿರಂಗ ಹಣ್ಣು ಹೊನ್ನು ತೋಟಗಾರಿಕಾ ಬೆಳೆಗಳ ಸಮಗ್ರ ಬೇಸಾಯ ವಿಧಾನ ಕುರಿತ ಬಾನುಲಿ ಸರಣಿ–ಹನಿ ನೀರಾವರಿ ಹಾಗೂ ರಸಾವರಿ ತಾಂತ್ರಿಕತೆಗಳನ್ನು ಕುರಿತು ಮೈಸೂರು ತಾಲೂಕು ಎಲಚನಹಳ್ಳಿಯ ತೋಟಗಾರಿಕಾ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ.ಜಿ.ಜನಾರ್ಧನ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್.ಕೇಶವಮೂರ್ತಿ, 10.30–ಸವಿನೆನಪು

ಮೈಸೂರಲ್ಲಿ ಆಕರ್ಷಕ ಶ್ವಾನ ಪ್ರದರ್ಶನ: 80ಕ್ಕೂ ಹೆಚ್ಚು ಶ್ವಾನಗಳು ಭಾಗಿ

●25 ವಿದೇಶಿ ತಳಿಯ ಶ್ವಾನಗಳು ಹೈಲೈಟ್ ●ಒಂದಕ್ಕಿಂತ ಒಂದು ವಿಭಿನ್ನ ●ಗಮನ ಸೆಳೆದ ಮಿನಿಯೇಚರ್ ಪಿನ್ಸರ್





ಮೈಸೂರಿನ ಹಾರ್ಡ್ವಿಕ್ ಶಾಲೆಯಲ್ಲಿ ಭಾನುವಾರ ಮೈಸೂರು ರಾಯಲ್ ಕೆನೆನ್ ಕ್ಲಬ್ ಆಯೋಜಿಸಿದ್ದ ಶ್ವಾನ ಪ್ರದರ್ಶನವನ್ನು ಕೆ.ಆರ್. ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸಿದರು.(ಎಡಚಿತ್ರ). ಶ್ವಾನ ಪ್ರದರ್ಶನದಲ್ಲಿ ಅತ್ಯಾಕರ್ಷಿಸಿದ ಮಿನಿಯೇಚರ್ ಪಿನ್ಸರ್ ಶ್ವಾನವನ್ನು(ಬಲಚಿತ್ರ) ಕಾಣಬಹುದು.

ಮೈಸೂರು, ಏ.28(ಬಿಎಲ್‌ಯು)– ಮೈಸೂರಿನ ಹಾರ್ಡ್ವಿಕ್ ಶಾಲೆ ಆವರಣದಲ್ಲಿ ಇಂದು ಆಕರ್ಷಕ ಶ್ವಾನ ಪ್ರದರ್ಶನ ನಡೆಯಿತು. ಮೈಸೂರು ರಾಯಲ್ ಕೆನೆನ್ ಕ್ಲಬ್ ಆಯೋಜಿಸಿದ್ದ ಶ್ವಾನ ಪ್ರದರ್ಶನದಲ್ಲಿ ಮೈಸೂರು, ಬೆಂಗಳೂರು, ಊಟಿ ಸೇರಿದಂತೆ ವಿವಿದೆಡೆಯ ವಿಶಿಷ್ಟ ತಳಿಯ ಶ್ವಾನಗಳು ಪ್ರದರ್ಶನದಲ್ಲಿ ಭಾಗವಹಿಸಿದ್ದವು.

ಮೈಸೂರು ರಾಯಲ್ ಕೆನೆನ್ ಕ್ಲಬ್ ಇದೇ ಮೊದಲ ಬಾರಿಗೆ ಶ್ವಾನ ಪ್ರದರ್ಶನ ಆಯೋಜಿಸಿತ್ತು. ಶ್ವಾನ ಪ್ರಿಯರು ತಾವು ಮುದ್ದಾಗಿ ಸಾಕಿದ್ದ ಶ್ವಾನಗಳನ್ನು ಪ್ರದರ್ಶಿಸಿ ಬಹುಮಾನ ಗಳಿಸಿದರು. ಶಾಸಕ ಟಿ.ಎಸ್.ಶ್ರೀವತ್ಸ ಶ್ವಾನ ಪ್ರದರ್ಶನವನ್ನು ಉದ್ಘಾಟಿಸಿದರು.

ಕನಿಷ್ಠ 20 ಸಾವಿರದಿಂದ ಲಕ್ಷ ರೂ.ತನಕ ಬೆಲೆಬಾಳುವ ದೇಶ–ವಿದೇಶಿ ತಳಿಯ ಶ್ವಾನಗಳು ಅತ್ಯಾಕರ್ಷಿಸಿದವು. ಒಂದಕ್ಕಿಂತ ಒಂದು ಭಿನ್ನವಾಗಿತ್ತು. ದೃಢಕಾಯದ ಮೈಕಟ್ಟು, ರಕ್ಷಣಾತ್ಮಕ ಗುಣ ಸೇರಿದಂತೆ ವಿಶಿಷ್ಟ ರೀತಿಯ ಗುಣಗಳು ಒಂದೊಂದು ಶ್ವಾನದಲ್ಲೂ ಕಂಡುಬಂತು.

ಸೈಬಿರಿಯನ್ ದೇಶದ ರಾಟ್ ವೀಲರ್ ಶ್ವಾನ ಆಕರ್ಷಕವಾಗಿತ್ತು. ರಾಟ್ ವೀಲರ್ ಶ್ವಾನ ಪ್ರಿಯರ ಪ್ರತಿಷ್ಠೆಯ ಶ್ವಾನವಾಗಿದೆ. ಹೆಚ್ಚು ಗಂಭೀರ ಎನಿಸುವ ರಾಟ್ ವೀಲರ್ ಅಪಾಯಕಾರಿಯಾಗಿದ್ದರೂ ತನ್ನನ್ನು ಸಾಕುವ ಯಜಮಾನನಿಗೆ ಅತಿ ವಿಧೇಯಕವಾಗಿರುತ್ತದೆ. ಜಾಗರೂಕ ಬುದ್ಧಿ ಇರುವ ರಾಟ್ ವೀಲರ್ ಯಜಮಾನನಿಗೆ ಆಪ್ತ ರಕ್ಷಕ ಶ್ವಾನವಾಗಿದೆ. ಅಪಾಯಕಾರಿಯಾದ ಈ ಶ್ವಾನದಲ್ಲಿ ಪಂಚಿಂಗ್ ಫೇಸ್ ಇತ್ತು. ದೃಢಕಾಯವಾದ ಈ ಶ್ವಾನ ನೋಡಲು ಭಯವೆನಿಸಿದರೂ ಮನೆಯವರಿಗೆ ಪಾಲಿಗೆ ಸ್ನೇಹಮಯವಾಗಿರುತ್ತದೆ.

ಮಿನಿಯೇಚರ್ ಪಿನ್ಸರ್ ಎಂಬ ಶ್ವಾನ ಎಲ್ಲಾ ಶ್ವಾನಕ್ಕಿಂತ ಬಹಳ ವಿಭಿನ್ನವಾಗಿತ್ತು. ಇದು ಎಷ್ಟೆ ವಯಸ್ಸಾದರೂ ಗರಿಷ್ಟ ಒಂದು ಅಡಿಗಿಂತ ಹೆಚ್ಚು ಎತ್ತರ ಬೆಳೆಯುವುದಿಲ್ಲ. ಮಿನಿಯೇಚರ್ ಪಿನ್ಸರ್ ಮಗುವಿನಂತೆ ಕಂಕುಳಲ್ಲಿ ಹೊತ್ತು ಎಲ್ಲಾದರೂ ಹೋಗವಂತಹ ಸಣ್ಣ ಗಾತ್ರದ ಶ್ವಾನವಾಗಿದೆ. ವಿದೇಶದಲ್ಲಿ ಮೊಲಗಳನ್ನು ಬೇಟೆಯಾಡಲು ಇದನ್ನು ಸಾಕಲಾಗುತ್ತದೆ. ಬೇಸಿಗೆ, ಚಳಿ ಹಾಗೂ ಮಳೆಗಾಲದ ಎಲ್ಲಾ ರೀತಿಯ ಹವಾಗುಣಕ್ಕೆ ಹೊಂದಿಕೊಳ್ಳುವುದು ಮಿನಿಯೇಚರ್ ಪಿನ್ಸರ್ ಶ್ವಾನದ ವಿಭಿನ್ನವಾಗಿತ್ತು.

ಅಮೇರಿಕನ್ ಬುಲ್ಲಿ ಅಮೇರಿಕಾ ದೇಶದ ತಳಿಯ ಶ್ವಾನವಾಗಿದೆ. ಸೌಮ್ಯ, ದಯೆ, ಮೃದು ವ್ಯಕ್ತಿತ್ವದ ಈ ಶ್ವಾನಕ್ಕೆ ತರಬೇತಿ ನೀಡುವುದು ಬಹಳ ಸುಲಭವಾಗಿದೆ. ಸಾಕುವ ವ್ಯಕ್ತಿಯನ್ನು ಸುಲಭವಾಗಿ ಒಗ್ಗಿಕೊಳ್ಳುವ ಅಮೇರಿಕನ್ ಬುಲ್ಲಿ ನೋಡಲು ಅಪಾಯಕಾರಿ ಎನಿಸಿದರೂ ಸ್ನೇಹಮಹಿ ಶ್ವಾನವಾಗಿದೆ.

ಶ್ವಾನ ಪ್ರದರ್ಶನದಲ್ಲಿ ಆಕರ್ಷಿಸಿದ ಮತ್ತೊಂದು ಶ್ವಾನವೆಂದರೆ ಅದು ಬೆಲ್ಜಿಯನ್ ಮೆಲ್ ನಾಯ್ಸ್, ಅಮೇರಿಕಾ ದೇಶದ ತಳಿಯಾದ ಇದನ್ನು ಅಮೇರಿಕಾ ಸೇನಾ ಪಡೆಯಲ್ಲಿ ಸಾಕಲಾಗುತ್ತದೆ. 10 ರಿಂದ 12 ಅಡಿ ಎತ್ತರ ನೆಗೆಯುವ ಬೆಲ್ಜಿಯನ್ ಮೆಲ್ ನಾಯ್ಸ್ ಭಾರತದ ಸೇನಾ ಪಡೆಯಲ್ಲಿಯೂ ಬಳಕೆಯಲ್ಲಿದೆ.

ಚೀನಾ ದೇಶದ ತಳಿ ಚೌ ಚೌ ಎಂಬ ಶ್ವಾನ ನೋಡಲು ಬಹಳ ಮುದ್ದಾಗಿದೆ. ಯಜಮಾನನಿಗೆ ರಕ್ಷಕನಾಗಿರುವ ಈ ಶ್ವಾನದ ನಾಲಿಗೆ ಪೂರ್ಣ ಪ್ರಮಾಣದಲ್ಲಿ ಕಪ್ಪಾಗಿರುತ್ತದೆ. ನೋಡಲು ಆಕರ್ಷಕವಾಗಿರುವ ಚೌ ಚೌ ಅಪಾಯಕಾರಿ ಯಾದ ಶ್ವಾನವಾಗಿದೆ. ಇವಲ್ಲದೆ ಗೋಲ್ಡನ್ ರಿಟ್ರಿವರ್, ಸೈಬಿರಿಯನ್ ಹಸ್ಕಿ, ಸೈಂಟ್ ಬರ್ನಾಡ್ ಸೇರಿದಂತೆ ವಿಶಿಷ್ಟ ತಳಿಯ ಶ್ವಾನಗಳು ಪ್ರದರ್ಶನದಲ್ಲಿ ಪಾಲ್ಗೊಂಡಿದ್ದವು.

ದೇಶ ವಿದೇಶದ 25 ತಳಿಯ 80ಕ್ಕೂ ಹೆಚ್ಚು ಶ್ವಾನಗಳು ಪ್ರದರ್ಶನದಲ್ಲಿ ಭಾಗಿಯಾಗಿದ್ದವು. ಶ್ವಾನ ಪ್ರದರ್ಶನದ ಅಂತರಾಷ್ಟ್ರೀಯ ಮಟ್ಟದ ತೀರ್ಪುಗಾರ ತಮಿಳುನಾಡು ಮೂಲದ ಡಾ.ಎ.ಎಸ್.ರವಿ ಶ್ವಾನಗಳಿಗೆ ಅಂಕ ನೀಡಿದರು.

ಶ್ವಾನಗಳು ಕೂಲ್ ಆಗಲು ಕೂಲರ್

ಬಹಳಷ್ಟು ಜನರಿಗೆ ಶ್ವಾನಗಳೆಂದರೆ ಅಚ್ಚುಮೆಚ್ಚು. ತಮ್ಮ ಮಕ್ಕಳಿಗಿಂತ ಹೆಚ್ಚು ಪ್ರೀತಿಯಿಂದ ಶ್ವಾನ ಸಾಕುತ್ತಾರೆ. ಬೇಸಿಗೆ ಬಿಸಿಲಿನ ತಾಪದಿಂದ ಶ್ವಾನಕ್ಕೆ ತೊಂದರೆ ಆಗದಂತೆ ಕೆಲವು ಶ್ವಾನ ಪಾಲಕರು ಕೂಲರ್ ತಂದಿದ್ದರು.

ಶ್ವಾನಗಳು ಬಿಸಿಲಿನ ತಾಪ ತಡೆಯದ ಕಾರಣ ಶ್ವಾನಗಳಿಗೆ ಆಯೋಜಕರು ಐಸ್‌ಗಳನ್ನು ವಿತರಣೆ ಮಾಡಿದರು. ಬಿಲಿಸಿನ ತಾಪಕ್ಕೆ ತಮಗೆ ತೊಂದರೆ ಆದರೂ ಸರಿ, ಆದರೆ ತಮ್ಮ ಶ್ವಾನಕ್ಕೆ ತೊಂದರೆ ಆಗದಂತೆ ಶ್ವಾನ ಪಾಲಕರು ಎಚ್ಚರಿಕೆ ವಹಿಸಿದ್ದರು. ಪೆಂಡಾಲ್ ಹಾಕಿದ್ದರೂ ಬಿಸಿಲಿನ ಕಾವು ಶ್ವಾನಕ್ಕೆ ತಾಗಬಾರೆಂದು ಬಹಳಷ್ಟು ಪಾಲಕರು ಶ್ವಾನಗಳನ್ನು ಮರದ ನೆರಳಿನಲ್ಲಿ ಕೂರಿಸಿದ್ದರು.

ಪ್ರದರ್ಶನದಲ್ಲಿ ತಮ್ಮ ಶ್ವಾನ ಅತ್ಯಾಕರ್ಷಕವಾಗಿ ಕಾಣುವ ಮೂಲಕ ಬಹುಮಾನ ಗಳಿಸಲೆಂದು ಪಾಲಕರು ಅವುಗಳ ಕೂದಲು ಬಾಚುವುದು, ಕೆಳಗೆ ಹೊರಳಾಡದಂತೆ ನಿಯಂತ್ರಿಸುವುದು ಸೇರಿದಂತೆ ಹಲವು ಕಸರತ್ತುಗಳನ್ನು ಮಾಡುತ್ತಿದ್ದರು.

ಶ್ವಾನಗಳ ಹಲ್ಲು, ದೇಹದಾರ್ಢ್ಯತೆ, ಆರೋಗ್ಯ, ವರ್ತನೆ ಸೇರಿದಂತೆ ಹಲವು ಅಂಶಗಳನ್ನು ಆಧರಿಸಿ ತೀರ್ಪು ನೀಡಿದರು. ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಪ್ರತಿಯೊಬ್ಬ ಶ್ವಾನ ಪಾಲಕರಿಗೆ ಪದಕ ನೀಡಲಾಯಿತು. ಜೊತೆಗೆ ಶ್ವಾನ ಪ್ರದರ್ಶನದ ಅತ್ಯುತ್ತಮ ಶ್ವಾನಕ್ಕೆ ಟ್ರೋಫಿ ನೀಡಲಾಯಿತು. ಜೊತೆಗೆ ಹೆಚ್ಚು ಅಂಕ ಗಳಿಸಿದ ಶ್ವಾನಕ್ಕೆ ಚಾಂಪಿಯನ್ ಟ್ರೋಫಿ ಕೂಡ ನೀಡಲಾಯಿತು.

ಶ್ರೀಧರ್ ದೀಕ್ಷಿತರಿಗೆ 'ಸ್ವಾನಂದ ಸೇವಾರತ್ನ' ಪ್ರಶಸ್ತಿ ಪ್ರದಾನ



ಸದ್ಗುರು ಶ್ರೀ ಶ್ರೀಧರ ಸ್ವಾಮಿ ಅವರ 51ನೇ ಆರಾಧನಾ ಮಹೋತ್ಸವದ ಅಂಗವಾಗಿ ಸಂಸ್ಕೃತಿ ಚಿಂತಕ ಎನ್.ಶ್ರೀಧರ್ ದೀಕ್ಷಿತ್‌ರಿಗೆ 'ಸ್ವಾನಂದ ಸೇವಾರತ್ನ' ಪ್ರಶಸ್ತಿ ಪ್ರದಾನ

ಮೈಸೂರು, ಏ.28(ಎಸ್‌ಪಿಎನ್)– ಪ್ರಸ್ತುತ ಜಗತ್ತಿಗೆ ಮಹಾತ್ಮ ಗಾಂಧೀಜಿಯವರ ತತ್ವಾದರ್ಶಗಳ ಅನುಸರಣೆ ಅಗತ್ಯವಿದ್ದು, ಪ್ರಸ್ತುತ ಯುವಕರು ಅಹಿಂಸಾ ತತ್ವದಡಿ ಜೀವನ ರೂಪಿಸಿಕೊಳ್ಳುವುದು ಅವಶ್ಯ ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಸಲಹೆ ನೀಡಿದರು.

ಮೈಸೂರು ಕುವೆಂಪುನಗರ ಸ್ವಾನಂದ ಯೋಗಶಾಲಾ ಆವರಣದಲ್ಲಿ ಸ್ವಾನಂದ ಯೋಗಶಾಲಾ ಮತ್ತು ವೆಲ್‌ನೆಸ್ ಸೆಂಟರ್, ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್ ಸಹಯೋಗದೊಂದಿಗೆ ಆಯೋಜಿಸಿದ್ದ ಸದ್ಗುರು ಶ್ರೀ ಶ್ರೀಧರ ಸ್ವಾಮಿ ಅವರ 51ನೇ ಆರಾಧನಾ ಮಹೋತ್ಸವದ ಅಂಗವಾಗಿ ಸಂಸ್ಕೃತಿ ಚಿಂತಕ ಎನ್.ಶ್ರೀಧರ್ ದೀಕ್ಷಿತ್ ಅವರಿಗೆ 'ಸ್ವಾನಂದ ಸೇವಾರತ್ನ' ಪ್ರಶಸ್ತಿಯನ್ನು ಪ್ರಧಾನ ಮಾಡಿ ಮಾತನಾಡಿದರು.

ಇತ್ತೀಚೆಗೆ ರಷ್ಯಾ–ಉಕ್ರೇನ್ ಯುದ್ಧ ನಡೆಯುತ್ತಿರುವಾಗ ರಷ್ಯಾ ಸೇನೆ ಬೃಹತ್ ಗಾತ್ರದ ಬಾಂಬ್ ಅನ್ನು ಶಿಶುವಿಹಾರದ ಮೇಲೆ ಹಾಕಿದಾಗ ಹಲವು ಮಕ್ಕಳು ಸಾವನ್ನಪ್ಪಿ ಪೋಷಕರಿಬ್ಬರು ಮೃತಪಟ್ಟಿದ್ದರು. ರಷ್ಯಾದ ಈ ನಡೆಯನ್ನು ವಿಶ್ವಸಂಸ್ಥೆ ಹಾಗೂ ಹಲವು ರಾಷ್ಟ್ರಗಳು ಖಂಡಿಸಿದ್ದವು. ಈ ಸಂದರ್ಭದಲ್ಲಿ ಭಾರತೀಯ ಪರಂಪರೆ ಹಾಗೂ ಮಹಾತ್ಮ ಗಾಂಧಿ ಯವರ ಅಹಿಂಸಾತ್ಮಕ ಹೋರಾಟವನ್ನು ವಿಶ್ವಸಂಸ್ಥೆ ಉಲ್ಲೇಖಿಸಿದೆ. ಮಹಾತ್ಮ ಗಾಂಧೀಜಿ ಅವರು ಸ್ವಾತಂತ್ರ್ಯ ಹೋರಾಟಕ್ಕೆ ಅನುಸರಿಸಿದ ಅಹಿಂಸಾ ತತ್ವ, ಪ್ರಸ್ತುತ ಜಗತ್ತಿಗೆ ಅವಶ್ಯಕತೆ ಇದೆ. ಗಾಂಧಿ ಈಗ ಬದುಕಿದ್ದರೆ, ಅವರ ನೇತೃತ್ವದಲ್ಲಿ ಹೋರಾಟ ನಡೆಸಿ, ಯುದ್ಧ ನಿಲ್ಲಿಸಲು ಪ್ರಯತ್ನಿಸುತ್ತಿದ್ದರು. ಯುದ್ಧದಿಂದ ಯಾವ ರಾಷ್ಟ್ರಕ್ಕೂ ಒಳ್ಳೆಯದಾಗುವುದಿಲ್ಲ. ಕೊನೆಯ ಆಯ್ಕೆಯಾಗಬೇಕಿದ್ದ ಯುದ್ಧ, ಇಂದು ಮೊದಲ ಆಯ್ಕೆಯಾಗುತ್ತಿರುವುದು ಬೇಸರದ ಸಂಗತಿ ಎಂದರು.

ಯೋಗ, ಆಧ್ಯಾತ್ಮಿಕ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಭಾರತ, ಪ್ರಸ್ತುತ ಜಗತ್ತಿನಲ್ಲಿ ವಿಶ್ವಗುರುವಾಗಿ ಗುರುತಿಸಿಕೊಳ್ಳುತ್ತಿದೆ. ಇದರಲ್ಲಿ ಯೋಗ ಕ್ಷೇತ್ರದ ಕೊಡುಗೆಯೂ ಇದೆ. ಹಾಗಾಗಿ ಪ್ರತಿಯೊಬ್ಬರು ಯೋಗ ಕಲಿಕೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಆಗ ಮಾತ್ರ ಸಮಾಜದಲ್ಲಿನ ಪರಸ್ಪರ ದ್ವೇಷ, ಅಸೂಯೆಯಿಂದ ಮುಕ್ತವಾಗಲು ಸಾಧ್ಯವಿದೆ. ಅಲ್ಲದೆ, ಸ್ವಾನಂದ ಸೇವಾರತ್ನ ಪ್ರಶಸ್ತಿಯನ್ನು ಸಮಾಜ ಸೇವಕ ಎನ್.ಶ್ರೀಧರ್ ದೀಕ್ಷಿತ್ ಅವರಿಗೆ ನೀಡಿ ಗೌರವಿಸುತ್ತಿರುವುದು ಉತ್ತಮ ಸಂಗತಿ ಎಂದರು. ಈ ವೇಳೆ ಹಿರಿಯ ಲೇಖಕಿ ಡಾ.ಕೆ.ಲೀಲಾ ಪ್ರಕಾಶ್, ವಿಪ್ರ ಮುಖಂಡ ಕೆ.ರಘುರಾಂ ವಾಜಪೇಯಿ, ಸ್ವಾನಂದ ಯೋಗಶಾಲಾ ಸಂಸ್ಥೆ ಅಧ್ಯಕ್ಷೆ ಪೂರ್ಣಿಮಾ ಸಂದೀಪ್, ಟ್ರಸ್ಟಿ ಉಮಾ ಪಾರ್ಥನಾಥ್, ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್ ಕುಮಾರ್, ಆರೋಗ್ಯ ತಜ್ಞೆ ಡಾ.ನಂದಿನಿ ಮೂರ್ತಿ, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತ, ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್ ಅಧ್ಯಕ್ಷ ಎಂ.ವಿ. ನಾಗೇಂದ್ರಬಾಬು, ಸಾಮಾಜಿಕ ಹೋರಾಟಗಾರ ರಾಕೇಶ್ ಭಟ್ ಉಪಸ್ಥಿತರಿದ್ದರು.

ಮೇ 5, ಬೇಸಿಗೆ ಬಂಡಿ

ಚಿಣ್ಣರಿಗಾಗಿ ಕವಿಗೋಷ್ಠಿ, ವಿವಿಧ ಸ್ಪರ್ಧೆಗಳು

ಮೈಸೂರು: ಸೂರ್ಯಸಖಿ ವಿದ್ಯಾನಿಧಿ ಯೋಜನೆ ಅಂಗವಾಗಿ ಸಖಿ ಫೌಂಡೇಶನ್, ಸೂರ್ಯ ಚಾರಿಟಬಲ್ ಟ್ರಸ್ಟ್‌ನಿಂದ 8ನೇ ತರಗತಿಯ ಒಳಗಿನ ಮಕ್ಕಳಿಗಾಗಿ ಬೇಸಿಗೆ ಬಂಡಿ ಆಯೋಜಿಸಿದೆ.

ಸ್ವರಚಿತ ಕವನ ವಾಚನದ ಜೊತೆಗೆ ಭಗವದ್ಗೀತಾ ಕಂಠಪಾಠ ಸ್ಪರ್ಧೆ, ಮಹಾಭಾರತದ ಮೂವತ್ತು ಲಿಖಿತ ರಸಪ್ರಶ್ನೆಗಳು, ಜಡೆಹೆಣೆಯುವ ಸ್ಪರ್ಧೆ, ಹೂ ಕಟ್ಟುವ ಸ್ಪರ್ಧೆಗಳೂ ಸಹ ನಡೆಯಲಿವೆ.

ಮೇ 5ರಂದು ರಾಮಕೃಷ್ಣನಗರದ ಜಯಲಕ್ಷ್ಮೀದೇವಿ ಪದವಿಪೂರ್ವ ಕಾಲೇಜಿನಲ್ಲಿ ಬೆಳಗ್ಗೆ 9.30ರಿಂದ ಎತ್ತಿನ ಬಂಡಿಯಲ್ಲಿ ಸುತ್ತು ಹಾಕುವ ಮೂಲಕ ಪ್ರಾರಂಭವಾಗಲಿದೆ. ಆಸಕ್ತರು ಮೇ 4ರ ಒಳಗೆ ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಮೊ. 9964790442, 8310306882 ಸಂಪರ್ಕಿಸಬಹುದು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ವಿಶ್ವ ಪುಸ್ತಕ ದಿನಾಚರಣೆ ಕಾರ್ಯಕ್ರಮ

ದಸರೆಯಲ್ಲಿ ಪುಸ್ತಕ ಪ್ರೇಮಿಗಳನ್ನು ಆಕರ್ಷಿಸಲು ಕಾರ್ಯಕ್ರಮ

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಅಭಿಮತ



ವಿಶ್ವ ಪುಸ್ತಕ ದಿನಾಚರಣೆ ಕಾರ್ಯಕ್ರಮದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಏ.28(ಎಂಟಿವೈ)– ಜ್ಞಾನದ ಸಂಕೇತವಾಗಿರುವ ಪುಸ್ತಕಗಳನ್ನು ಕೊಂಡು ಓದುವ ಹವ್ಯಾಸ ಹೆಚ್ಚಿಸುವುದರೊಂದಿಗೆ ದಸರಾ ಸಂದರ್ಭದಲ್ಲಿ ಆಯೋಜಿಸುವ ಪುಸ್ತಕ ಮೇಳಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪುಸ್ತಕ ಪ್ರೇಮಿಗಳನ್ನು ಆಕರ್ಷಿಸಲು ಕಾರ್ಯಕ್ರಮ ರೂಪಿಸಲು ಉದ್ದೇಶಿಸಲಾಗಿದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ತಿಳಿಸಿದ್ದಾರೆ.

ಮೈಸೂರಿನ ವಿಜಯನಗರದಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಭಾನುವಾರ ಅಖಿಲ ಕರ್ನಾಟಕ ಲೇಖಕರ ಮತ್ತು ಪ್ರಕಾಶಕರ ಸಂಘ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸಂವಹನ ಪ್ರಕಾಶನದ ವತಿಯಿಂದ ಏರ್ಪಡಿಸಿದ್ದ 'ವಿಶ್ವ ಪುಸ್ತಕ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಪುಸ್ತಕಗಳನ್ನು ಕೊಂಡು ಓದುವವರ ಸಂಖ್ಯೆ ಕ್ಷೀಣಿಸುತ್ತಿದೆ. ಪುಸ್ತಕ ಮೇಳಗಳಿಗೆ ಬರುವವರ ಸಂಖ್ಯೆಯೂ ಕಡಿಮೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರವು ಮುಂಬರುವ ದಸರೆ ಸಂದರ್ಭದಲ್ಲಿ ಆಯೋಜಿಸುವ ಪುಸ್ತಕ ಮೇಳಕ್ಕೆ ಓದುಗರು ಬರುವಂತೆ ಪ್ರೇರೇಪಿಸಲು ಉದ್ದೇಶಿಸಲಾಗಿದೆ. ಅದಕ್ಕಾಗಿ ವ್ಯಾಪಕ ಪ್ರಚಾರ ಮಾಡಲು ಪ್ರಕಾಶಕರು ಸಲಹೆ ನೀಡಿದ್ದಾರೆ ಎಂದರು.

ಪ್ರತಿಯೊಬ್ಬರೂ ಪುಸ್ತಕ ಖರೀದಿಸಿ, ಮನೆಗಳಲ್ಲಿ ಇಡಬೇಕು. ಇದರಿಂದ ಬೇರೆಯವರು ನಿಮ್ಮನ್ನು ನೋಡುವ ರೀತಿಯೇ ಬದಲಾಗುತ್ತದೆ. ಆ ನಂತರ ಸಾಧ್ಯವಾದರೆ ಆ ಪುಸ್ತಕಗಳನ್ನು ತೆರೆದು ನೋಡಿ, ನಿದ್ದೆ ಮಾತ್ರೆ ತೆಗೆದುಕೊಳ್ಳುವ ಹವ್ಯಾಸ ದೂರ ಮಾಡಲು ಪುಸ್ತಕ ಓದುವುದನ್ನು ರೂಢಿಸಿಕೊಳ್ಳಿ. ಆಗ ನಿದ್ದೆ ಚೆನ್ನಾಗಿ ಬರುತ್ತದೆ. ಅದರಿಂದ ಆರೋಗ್ಯ ಕಾಪಾಡಿಕೊಳ್ಳಬಹುದಾಗಿದೆ. ಪುಸ್ತಕ ಜ್ಞಾನದ ಸಂಕೇತ. ರಾಷ್ಟ್ರಕವಿ ರವೀಂದ್ರನಾಥ್ ಟ್ಯಾಗೋರ್ ಹೇಳಿರುವಂತೆ ಸೂರ್ಯಕಿರಣಗಳು ಬದುಕಿಗೆ ಆಸರೆಯಾದರೆ ಜ್ಞಾನಕ್ಕೆ ಪುಸ್ತಕಗಳೇ ಬುನಾದಿ. ವೇದ, ಉಪನಿಷತ್ತುಗಳ ಕಾಲದಿಂದಲೂ ಜ್ಞಾನ ಕೃತಿ ರೂಪದಲ್ಲಿ ದಾಖಲಾಗಿದೆ. ಈ ಹಿಂದೆ ಶಿಲಾಶಾಸನ, ತಾಳೆಗರಿಯಲ್ಲಿ ದಾಖಲಾಗುತ್ತಿದ್ದರೆ ನಂತರ ಪುಸ್ತಕ ರೂಪದಲ್ಲಿ ಬಂದವು ಎಂದರು.

ಎಲ್ಲಿವರೆಗೆ ಚಿಂತನೆಗಳು ಅಸ್ತಿತ್ವ ದಲ್ಲಿರುತ್ತವೋ, ಅಲ್ಲಿವರೆಗೆ ಪುಸ್ತಕಗಳಿಗೆ ಅಳಿವಿಲ್ಲ. ಆದರೆ ಅವು ರೂಪಾಂತರಗೊಳ್ಳಬಹುದು. ಪ್ರಸ್ತುತ ಸಂದರ್ಭದಲ್ಲಿ ಪುಸ್ತಕ ಮುದ್ರಣ ಉದ್ಯಮವಾಗಿ ಮಾರ್ಪಟ್ಟಿದೆ. ಮಾಧ್ಯಮವೇ ಉದ್ಯಮವಾದಾಗ ಮುದ್ರಣವೂ ಸಹಜ ಉದ್ಯಮವಾಗಿದೆ ಎಂದರು.

ರಾಷ್ಟ್ರಕವಿ ಕುವೆಂಪು ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಬಂದು ಸಯ್ಯಾಜಿರಾವ್ ರಸ್ತೆಯಲ್ಲಿರುವ ಸಾರ್ವಜನಿಕ ಗ್ರಂಥಾಲಯಕ್ಕೆ ಭೇಟಿ ನೀಡುತ್ತಿದ್ದರು. ಅವರು ಕೂರುತ್ತಿದ್ದ ಕುರ್ಚಿಗೆ ಕುವೆಂಪು ಅವರ ಬಳಸುತ್ತಿದ್ದ ಕುರ್ಚಿ ಎಂದು ಫಲಕ ಹಾಕಲಾಗಿತ್ತು. ನಾನು ಅಲ್ಲಿಗೆ ಹೋದರೆ ಅದನ್ನು ಮುಟ್ಟಿ ನೋಡುತ್ತಿದ್ದೆ, ನಮಸ್ಕರಿಸುತ್ತಿದ್ದೆ. ಕುವೆಂಪು ಅವರ ಮಲೆಗಳಲ್ಲಿ ಮದುಮಗಳು, ಕಾನೂರು ಸುಬ್ಬಮ್ಮ ಹೆಗ್ಗಡತಿ ಬೇರೆ ಭಾಷೆಗಳಿಗೆ ಅನುವಾದವಾಗಿದ್ದರೆ ಯಾವತ್ತೋ ನೋಬೆಲ್ ಪುರಸ್ಕಾರ ಸಿಗುತ್ತಿತ್ತು ಎಂದು ತಿಳಿಸಿದರು.

ಇದೇ ವೇಳೆ ಮಾನಸ ಅವನ್ನು ಸನ್ಮಾನಿಸಲಾಯಿತು. ರಂಗಕರ್ಮಿ ರಾಜಶೇಖರ ಕದಂಬ, ಹಿರಿಯ ಸಾಹಿತಿ ಡಾ.ಸಿಪಿಕೆ, ರಾಮಶೇಷ್, ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಂಜುಳಾ ಮಾನಸ, ಪ್ರಕಾಶಕ ಡಿ.ಎನ್.ಲೋಕಪ್ಪ, ಯು.ಎಸ್. ಮಹೇಶ್, ಜೀನಹಳ್ಳಿ ಸಿದ್ದಲಿಂಗಪ್ಪ ಮೈನಾ ಲೋಕೇಶ್, ತ್ಯಾಗರಾಜ್, ಲತಾ ಮೋಹನ್ ಇದ್ದರು.

ಕುಸಿಯುತ್ತಿರುವ ಪುಸ್ತಕ ಸಂಸ್ಕೃತಿ ಪುನಶ್ಚೇತನಗೊಳಿಸಬೇಕು

ಹಿರಿಯ ಸಾಹಿತಿ ಸಿಪಿಕೆ ಅಭಿಮತ



ಡಾ.ಸಿಪಿಕೆ ಅವರ ಪುಸ್ತಕ ಸಂಸ್ಕೃತಿ ಭುವನದ ಭಾಗ್ಯ ಕೃತಿಯನ್ನು ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಬಿಡುಗಡೆ ಮಾಡಿದರು.

ಮೈಸೂರು, ಏ.28(ಎಂಟಿವೈ)– ಕುಸಿಯುತ್ತಿರುವ ಪುಸ್ತಕ ಸಂಸ್ಕೃತಿಯನ್ನು ಪುನಶ್ಚೇತನಗೊಳಿಸುವ ಕೆಲಸ ಆಗಬೇಕು ಎಂದು ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ವಿಶ್ವ ಪುಸ್ತಕ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪುಸ್ತಕಗಳನ್ನು ಖರೀದಿಸಲು ಎಲ್ಲರೂ ಮುಂದಾಗಬೇಕು. ಇಲ್ಲದಿದ್ದರೆ ಸಾಲ ಮಾಡಿಯಾದರೂ ಪುಸ್ತಕ ಖರೀದಿಸಬೇಕು. ಆ ಮೂಲಕ ಪುಸ್ತಕ ಓದುವ ಹವ್ಯಾಸ ರೂಢಿ ಮಾಡಿಕೊಳ್ಳಬೇಕು. ನಾನು ಚಿಕ್ಕಂದಿನಿಂದಲೂ ಪುಸ್ತಕಗಳನ್ನು ಕಳವು ಮಾಡಿ ಓದುತ್ತಿದ್ದೆ. ಈಗ ನನ್ನ ಮನೆಯಲ್ಲಿರುವ ಪುಸ್ತಕಗಳನ್ನು ಯಾರಾ ದರೂ ಬಂದು ಕದಿಯಲಿ ಎಂದು ಕಾಯುತ್ತಿದ್ದೇನೆ ಎಂದು ಹಾಸ್ಯ ಚಟಾಕಿ ಹಾರಿಸಿದರು.

ಸಂವಹನ ಪ್ರಕಾಶನ ಪ್ರಕಟಿಸಿರುವ ಡಾ.ಸಿಪಿಕೆ ಅವರ ಪುಸ್ತಕ 'ಸಂಸ್ಕೃತಿ ಭುವನದ ಭಾಗ್ಯ' ಕೃತಿಯನ್ನು ಬಿಡುಗಡೆ ಮಾಡಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಸಾಹಿತಿ ಸಿಪಿಕೆ ಅವರು ಈ ಕೃತಿಯನ್ನು ರಚಿಸಿ ವಿಶ್ವರೂಪ ದಿಗ್ದರ್ಶನಕ್ಕೆ ಯತ್ನಿಸಿದ್ದಾರೆ. ಸದಾ ಅಪಾಯದಲ್ಲಿರುವ ವಾಚನ ಸಂಸ್ಕೃತಿಯನ್ನು ಉಳಿಸಿ, ಬೆಳೆಸಬೇಕು ಎಂದು ಕಳಕಳಿ ತೋರಿಸಿದ್ದಾರೆ ಆ ಮೂಲಕ ಪುಸ್ತಕ ಪ್ರೀತಿಯನ್ನು ಪ್ರಚೋದಿಸಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಯಾಗಿದ್ದ ಮೈವಿವಿ ನಿವೃತ್ತ ಗ್ರಂಥಪಾಲಕ ಡಾ.ಸಿ.ಪಿ. ರಾಮಶೇಷ್ ಮಾತನಾಡಿ, ತಲಸ್ಪರ್ಶಿ ಅಧ್ಯಯನಕ್ಕೆ ಮುದ್ರಿತ ಪುಸ್ತಕಗಳು ಬೇಕು. ಇತ್ತೀಚಿನ ವಿದ್ಯಮಾನಗಳನ್ನು ತಿಳಿಯಲು ಇ– ಪುಸ್ತಕಗಳು, ವೆಬ್‌ಸೈಟ್‌ಗಳಲ್ಲಿರುವ ಮಾಹಿತಿ ಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಮಾತನಾಡಿ, ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಯಾಗಿದ್ದಾಗ ಕುವೆಂಪು ಭಾಷಾ ಭಾರತಿ ರಚಿಸಿದರು. ಹೀಗಾಗಿ ಇಂದು ಕುವೆಂಪು ಸೇರಿದಂತೆ ಕನ್ನಡದ ಹಲವಾರು ಲೇಖಕರ ಕೃತಿಗಳು ಬೇರೆ ಬೇರೆ ಭಾಷೆಗಳಿಗೆ ಅನುವಾದವಾಗಿವೆ. ರಷ್ಯಾ– ಉಕ್ರೇನ್ ಯುದ್ಧಕ್ಕೂ ನಮಗೂ ಸಂಬಂಧವಿಲ್ಲ ಎಂಬಂತೆ ಅಕ್ಕಪಕ್ಕ ದೇಶಗಳು ಸೇರಿದಂತೆ ಎಲ್ಲರೂ ಇದ್ದಾರೆ. ಸಾಹಿತ್ಯ, ಸಂಸ್ಕೃತಿ, ಕಲೆ, ನಾಟಕದಿಂದ ಈ ಯುದ್ಧವನ್ನು ಯಾಕೆ ತಡೆಯಲು ಸಾಧ್ಯವಾಗುತ್ತಿಲ್ಲ. ಯುದ್ಧ ಯಾರಿಗೂ ಬೇಕಾಗಿಲ್ಲ. ಆದರೂ ದೊಡ್ಡಣ್ಣ, ಚಿಕ್ಕಣ್ಣ ಎಂದು ಹಾರಾಡುತ್ತಾ ಮಕ್ಕಳ ಮೇಲೂ ಬಾಂಬ್ ದಾಳಿ ಮಾಡಲಾಗುತ್ತಿದೆ ಎಂದರು.

ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ಪೆನ್‌ಡ್ರೈವ್ ಪ್ರಕರಣ

ಪ್ರಜ್ವಲ್ ಜೊತೆಗೆ ತಂದೆ ಹೆಚ್.ಡಿ. ರೇವಣ್ಣ ವಿರುದ್ಧವೂ ಎಫ್‌ಐಆರ್

ಹಾಸನ, ಏ.28– ಸಂಸದ ಪ್ರಜ್ವಲ್ ರೇವಣ್ಣರದ್ದು ಎನ್ನಲಾದ ಅಶ್ಲೀಲ ವಿಡಿಯೋ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಲೈಂಗಿಕ ದೌರ್ಜನ್ಯ ಆರೋಪದಲ್ಲಿ ಪ್ರಜ್ವಲ್ ರೇವಣ್ಣ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಇದೀಗ ತಂದೆ ಹೆಚ್.ಡಿ. ರೇವಣ್ಣ ವಿರುದ್ಧವೂ ಹೊಳೆನರಸೀಪುರ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಪ್ರಕರಣದ ಎ1 ಆರೋಪಿ ಹೆಚ್.ಡಿ.ರೇವಣ್ಣ, ಎ2 ಪ್ರಜ್ವಲ್ ರೇವಣ್ಣ ಆಗಿದ್ದು, ಈ ಹಿಂದೆ ರೇವಣ್ಣ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಸಂತ್ರಸ್ತ ಮಹಿಳೆ ದೂರು ಆಧರಿಸಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಐಪಿಸಿ ಸೆಕ್ಷನ್ 354A (ಲೈಂಗಿಕ ಕಿರುಕುಳ ಆರೋಪ), 354D (ಮಹಿಳೆಗೆ ಮುಜುಗರ ಆಗುವಂತೆ ಮಾಡುವುದು), 506 (ಬೆದರಿಕೆ), 509 (ಮಹಿಳೆ



ಮಾನಕ್ಕೆ ಹಾನಿ) ರಡಿ FIR ದಾಖಲಿಸಲಾಗಿದೆ. ಹಲವು ಮಹಿಳೆಯರ ಮೇಲೆ ದೌರ್ಜನ್ಯವೆಸಗಿದ ದೃಶ್ಯಗಳು ಸಾಮಾಜಿಕ ಜಾಲ ತಾಣದಲ್ಲಿ ಹರಿದಾಡಿದ್ದವು. ಹೀಗಾಗಿ ಹೊಳೆನರಸೀಪುರ ನಗರ ಪೊಲೀಸ್ ಠಾಣೆಗೆ ಸಂತ್ರಸ್ತ ಮಹಿಳೆ ದೂರು ನೀಡಿದ್ದಾರೆ.

ದೂರಿನಲ್ಲಿ ಲೈಂಗಿಕ ದೌರ್ಜನ್ಯ ಬಗ್ಗೆ ಎಳೆಎಳೆಯಾಗಿ ಬಿಚ್ಚಿಟ್ಟ ಸಂತ್ರಸ್ತೆ: ನಮ್ಮ ಪತಿಗೆ ಹೆಚ್.ಡಿ.ರೇವಣ್ಣ ತಮ್ಮ ಡೇರಿಯಲ್ಲಿ ಕೆಲಸ ಕೊಡಿಸಿದ್ದರು. ಬಳಿಕ 2015ರಲ್ಲಿ ಹಾಸ್ಟೆಲ್‌ವೊಂದರಲ್ಲಿ ಅಡುಗೆ ಕೆಲಸಕ್ಕೆ ಸೇರಿಸಿದ್ದರು. ನಂತರ ತಮ್ಮ ಮನೆಯಲ್ಲಿ ಅಡುಗೆ ಕೆಲಸಕ್ಕೆ ಬರುವಂತೆ ರೇವಣ್ಣ ಹೇಳಿದ್ದರು. ಅಡುಗೆ ಕೆಲಸಕ್ಕೆ ಸೇರಿಕೊಂಡ ಬಳಿಕ ಭವಾನಿ ರೇವಣ್ಣ ಮನೆಯಲ್ಲಿಲ್ಲದ ವೇಳೆ ಮೈಕೈ ಮುಟ್ಟಿ ಲೈಂಗಿಕ ದೌರ್ಜನ್ಯವೆಸಗಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಕೊಠಡಿಯಲ್ಲಿದ್ದಾಗ ಹಣ್ಣು ನೀಡುವ ನೆಪದಲ್ಲಿ ಸೀರೆ ಹಿಡಿದು ಎಳೆದಾಡಿದ್ದಾರೆ. ಅಡುಗೆ ಮನೆಗೆ ಬಂದು ಪ್ರಜ್ವಲ್ ಸಹ ಲೈಂಗಿಕ ದೌರ್ಜನ್ಯವೆಸಗಿದ್ದಾರೆ. ಪ್ರಜ್ವಲ್ ರೇವಣ್ಣ ಅಸಭ್ಯವಾಗಿ ವರ್ತಿಸಿದ್ದಾರೆ. ಮೈಗೆ ಎಣ್ಣೆ ಹಚ್ಚಬೇಕೆಂದು ನನ್ನನ್ನು ಕರೆಸಿ ಲೈಂಗಿಕ ದೌರ್ಜನ್ಯವೆಸಗಿದ್ದಾರೆ ನನ್ನ ಮಗಳಿಗೂ ವಿಡಿಯೋ ಕಾಲ್ ಮಾಡಿ ಅಸಭ್ಯವಾಗಿ ವರ್ತಿಸಿದ್ದಾರೆ. ಪದೇ ಪದೆ ಕಾಲ್ ಮಾಡಿದ್ದಕ್ಕೆ ಪುತ್ರಿ ಪ್ರಜ್ವಲ್ ನಂಬರ್ ಬ್ಲಾಕ್ ಮಾಡಿದ್ದರು. ಲೈಂಗಿಕ ಕಿರುಕುಳ ಹೆಚ್ಚಾದಾಗ ಕೆಲಸ ಬಿಟ್ಟು ಹೋಗಿದ್ದಾಗಿ ಸಂತ್ರಸ್ತೆ ಹೇಳಿದ್ದು, ಅಶ್ಲೀಲ ವಿಡಿಯೋ ವೈರಲ್ ಆದ ಬಳಿಕ ಆತಂಕಗೊಂಡು ದೂರು ನೀಡಿದ್ದೇನೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಪ್ರಕರಣದ ಗಂಭೀರ ಸ್ವರೂಪ ಅರಿತ ರಾಜ್ಯ ಮಹಿಳಾ ಆಯೋಗ ತನಿಖೆಗೆ ವಿಶೇಷ ತಂಡ ರಚನೆ ಮಾಡಿ ಎಂದು ಮೂರು ದಿನಗಳ ಹಿಂದೆಯೇ ಪತ್ರ ಬರೆದಿತ್ತು ನಿನ್ನೆ ಟ್ವೀಟ್ ಮೂಲಕ ಮಾಹಿತಿ ಹಂಚಿಕೊಂಡಿದ್ದ ಸಿಎಂ ಎಸ್.ಐ.ಟಿ ರಚನೆ ಬಗ್ಗೆ ಮಾಹಿತಿ ನೀಡಿದ್ದು ಈ ಬೆಳವಣಿಗೆ ಬೆನ್ನಲ್ಲೇ ಹಾಸನ ಜಿಲ್ಲೆಯ ಹೊಳೆನರಸೀಪುರದ ನಗರ ಠಾಣೆಯಲ್ಲಿ ಮಹಿಳೆಯೊಬ್ಬರು ನೀಡಿದ ದೂರು ಆಧರಿಸಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಲೈಂಗಿಕ ಕಿರುಕುಳ, ಬೆದರಿಕೆ ಹಾಗೂ ಮಾನಹಾನಿ ಮಾಡಿದ ಆರೋಪದಲ್ಲಿ ದೂರು ದಾಖಲಾಗಿದೆ. ಸಂತ್ರಸ್ತ ಮಹಿಳೆ ಖುದ್ದು ಹಾಜರಾಗಿ ನೀಡಿದ ದೂರು ಸ್ವೀಕರಿಸಿದ ಪೊಲೀಸರು ತನಿಖೆ ಕೈಗೊಂಡಿದ್ದರೆ. ಈ ದೂರಿನ ತನಿಖೆಯನ್ನ ರಾಜ್ಯ ಸರ್ಕಾರ ಮೂವರು ಐಪಿಎಸ್ ಅಧಿಕಾರಿಗಳ ವಿಶೇಷ ತಂಡಕ್ಕೆ ವಹಿಸಿ ಆದೇಶ ಮಾಡಿದೆ.

ಪ್ರಜ್ವಲ್ ರೇವಣ್ಣ ವಿರುದ್ಧ ಎಸ್‌ಐಟಿ ತನಿಖೆಯನ್ನು ಸ್ವಾಗತಿಸುವೆ



ಬೆಂಗಳೂರು, ಏ.28– ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಆರೋಪಗಳ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ನೇಮಿಸಿರುವ ರಾಜ್ಯ ಸರ್ಕಾರದ ತೀರ್ಮಾನವನ್ನು ಸ್ವಾಗತಿಸುತ್ತೇನೆ ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಹೇಳಿದರು.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಪ್ರತಿಕ್ರಿಯಿಸಿದ ಅವರು, ಏನು ನಡೆದಿದೆ ಎಂಬುದು ನನಗೆ ಗೊತ್ತಿಲ್ಲ. ಸಿಐಡಿ, ಎಸ್‌ಐಟಿ ಎಲ್ಲವೂ ಸರ್ಕಾರದ ಕೈಯಲ್ಲಿ ಇದೆ ತನಿಖೆಯಿಂದ ಸತ್ಯ ಹೊರಬರಲಿ ಎಂದರು. ಚುನಾವಣೆ ಸಂದರ್ಭದಲ್ಲಿ ಎದುರಾಳಿಗಳನ್ನು ಸೋಲಿಸಲು ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡುತ್ತಾರೆ. ನಾವು ಹೆಣ್ಣು ಮಕ್ಕಳ ಬಗ್ಗೆ ಅಪಾರ ಗೌರವ ಹೊಂದಿದ್ದೇವೆ.

ಪ್ರಕರಣವನ್ನು ಮುಚ್ಚಿ ಹಾಕುವ ಪ್ರಯತ್ನವನ್ನು ಯಾರೂ ಮಾಡುವುದಿಲ್ಲ. ನನ್ನ ಮಗ ಮಾಡಲಿ, ಅಣ್ಣ, ತಮ್ಮ ಯಾರೇ ಮಾಡಲಿ, ತಪ್ಪು ತಪ್ಪೆ ತಪ್ಪು ನಡೆದಿಲ್ಲ ಎಂದು ವಾದಿಸುವುದಿಲ್ಲ ಎಂದರು. ಪ್ರಜ್ವಲ್ ರೇವಣ್ಣ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಲಾಗುತ್ತದೆಯೆ ಎಂಬ ಪ್ರಶ್ನೆಗೆ ಪಕ್ಷದ ವರಿಷ್ಠರು ಚರ್ಚಿಸಿ ಈ ಕುರಿತು ನಿರ್ಧಾರ ಕೈಗೊಳ್ಳಬೇಕಾಗುತ್ತದೆ. ಖಂಡಿತವಾಗಿಯೂ ಸೂಕ್ತ ಕ್ರಮ ಆಗುತ್ತದೆ ಎಂದರು.

ಪ್ರಜ್ವಲ್ ವಿದೇಶಕ್ಕೆ ಪರಾರಿಯಾಗಿರುವ ಬಗ್ಗೆ ಕೇಳಿದಾಗ, ಭವಾನಿ ರೇವಣ್ಣ ಅವರು ಶನಿವಾರ ಕೆ.ಆರ್. ನಗರಕ್ಕೆ ಬಂದು ಹೋಗಿದ್ದರು. ಏನು ಆಗಿದೆ ಎಂಬುದು ಗೊತ್ತಿಲ್ಲ. ತನಿಖೆಯಲ್ಲಿ ಎಲ್ಲವೂ ಹೊರಬರಲಿ ಎಂದು ಪ್ರತಿಕ್ರಿಯಿಸಿದರು.

ಎಡಿಜಿಪಿ ಬಿ.ಕೆ. ಸಿಂಗ್ ನೇತೃತ್ವದಲ್ಲಿ ತನಿಖಾ ತಂಡ ರಚನೆ


ಬಿ.ಕೆ. ಸಿಂಗ್


ಸುಮನ್


ಸೀಮಾ ಲಾಟ್ಕರ್

ಬೆಂಗಳೂರು: ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾದ ಲೈಂಗಿಕ ದೌರ್ಜನ್ಯದ ವಿಡಿಯೋ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಎಡಿಜಿಪಿ ಬಿ.ಕೆ. ಸಿಂಗ್, ಸಹಾಯಕ ಪೊಲೀಸ್ ನಿರ್ದೇಶಕಿ ಸುಮನ್ ಡಿ. ಪನ್ನೇಕರ್ ಮತ್ತು ಮೈಸೂರು ಎಸ್ಪಿ ಸೀಮಾ ಲಾಟ್ಕರ್ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚಿಸಿ ಆದೇಶ ಹೊರಡಿಸಿದೆ.

ಹಾಸನ ಜಿಲ್ಲೆಯಲ್ಲಿ ಮಹಿಳೆಯರ ಮೇಲೆ ನಡೆದಿರುವ ಲೈಂಗಿಕ ಹಿಂಸೆಯ ವಿಡಿಯೋ ಚಿತ್ರೀಕರಣವು ಮಾಧ್ಯಮದಲ್ಲೂ ಪ್ರಸಾರವಾಗಿದ್ದು, ಪ್ರಭಾವಿ ರಾಜಕಾರಣಿಗಳು ಅನೇಕ ಮಹಿಳೆಯರನ್ನು ಲೈಂಗಿಕವಾಗಿ ಬಳಸಿಕೊಳ್ಳುತ್ತಿರುವ ಬಗ್ಗೆ, ಚಿತ್ರೀಕರಣ ಮಾಡಿದ ವ್ಯಕ್ತಿಗಳು ಮತ್ತು ಅದನ್ನು ಸಾರ್ವಜನಿಕಪಡಿಸಿದ ವ್ಯಕ್ತಿಗಳನ್ನು ತನಿಖೆಗೆ ಒಳಪಡಿಸುವ ಮೂಲಕ ಮಹಿಳೆಯ ಘನತೆ ಹಾಗೂ ಮಾನ ಹಾನಿ ಮಾಡುತ್ತಿರುವವರನ್ನು ಪತ್ತೆ ಹಚ್ಚಿ ಅವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರು ಕೋರಿದ ಮೇರೆಗೆ ಹಾಗೂ ಹೊಳೆನರಸೀಪುರ ಟೌನ್ ಪೊಲೀಸ್ ಠಾಣೆಯಲ್ಲಿ ಲೈಂಗಿಕ ದೌರ್ಜನ್ಯ ಸಂಬಂಧ ದಾಖಲಾಗಿರುವ ಪ್ರಕರಣದ ಸಮಗ್ರ ತನಿಖೆಯನ್ನು ತಾಂತ್ರಿಕ ಪರಿಣತಿ ಇರುವ ರಾಜ್ಯದ ವಿಶೇಷ ತನಿಖಾ ಸಂಸ್ಥೆಯಾದ ಸಿಐಡಿಯ ಒಂದು ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ. ಅಪರ ಪೊಲೀಸ್ ಮಹಾ ನಿರ್ದೇಶಕ ಬಿ.ಕೆ. ಸಿಂಗ್ ಈ ತಂಡದ ಮುಖ್ಯಸ್ಥರಾಗಿದ್ದು, ಸಹಾಯಕ ಪೊಲೀಸ್ ಮಹಾನಿರ್ದೇಶಕರಾದ ಸುಮನ್ ಡಿ. ಪನ್ನೇಕರ್ ಮತ್ತು ಮೈಸೂರು ಜಿಲ್ಲಾ ಎಸ್ಪಿ ಸೀಮಾ ಲಾಟ್ಕರ್ ಸದಸ್ಯರಾಗಿರುತ್ತಾರೆ. ಈ ಪ್ರಕರಣ ಕುರಿತು ರಾಜ್ಯದ ಇತರೆ ಠಾಣೆಗಳಲ್ಲಿ ದಾಖಲಾದ ಅಥವಾ ದಾಖಲಾಗಬಹುದಾದ ಪ್ರಕರಣಗಳನ್ನು ಡಿಜಿ ಮತ್ತು ಐಜಿಪಿಯವರು ಈ ವಿಶೇಷ ತನಿಖಾ ತಂಡಕ್ಕೆ ವರ್ಗಾಯಿಸುವುದು ಹಾಗೂ ವಿಶೇಷ ತನಿಖಾ ತಂಡಕ್ಕೆ ತನಿಖೆಗಾಗಿ ಇತರ ಸದಸ್ಯರ ಅವಶ್ಯವಿದ್ದಲ್ಲಿ ಡಿಜಿ ಮತ್ತು ಐಜಿಪಿಯವರ ಅನುಮೋದನೆಯೊಂದಿಗೆ ಅಂತಹವರನ್ನು ತನಿಖಾ ತಂಡಕ್ಕೆ ಸೇರಿಸಿಕೊಳ್ಳುವುದು ಎಂದು ಒಳಾಡಳಿತ ಇಲಾಖೆ (ಅಪರಾಧ) ಅಧೀನ ಕಾರ್ಯದರ್ಶಿ ಎಸ್. ಅಂಬಿಕಾ ಆದೇಶ ಹೊರಡಿಸಿದ್ದಾರೆ.

ಎಸ್‌ಐಟಿ ತನಿಖೆಗೆ ವಹಿಸಿದ್ದು ತೃಪ್ತಿ ತಂದಿದೆ

ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌಧರಿ



ಬೆಂಗಳೂರು, ಏ.28– ಹಾಸನದ ಸಂಸದ ಪ್ರಜ್ವಲ್ ರೇವಣ್ಣ ಅವರು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಹೇಳಲಾಗುತ್ತಿರುವ ಸಾಕಷ್ಟು ವಿಡಿಯೊಗಳ ಸಾಕ್ಷಿಗಳಿವೆ ಎಂಬ ಆರೋಪ ಪ್ರಕರಣಕ್ಕೆ ಸಂಬಂಧಪಟ್ಟಂತೆ ಈಗಾಗಲೇ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡವನ್ನು ರಚಿಸಿ ತನಿಖೆ ಆರಂಭಿಸಿರುವುದನ್ನು ರಾಜ್ಯ ಮಹಿಳಾ ಆಯೋಗ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಸ್ವಾಗತಿಸಿದ್ದಾರೆ.

ಹಾಸನ ಸಂಸದರಿಗೆ ಸಂಬಂಧಪಟ್ಟವುಗಳು ಎಂದು ಹೇಳಲಾಗುತ್ತಿರುವ ವಿಡಿಯೊಗಳನ್ನು ಒಳಗೊಂಡಿರುವ ಪೆನ್‌ಡ್ರೈವ್‌ನ್ನು ಕಂಪ್ಯೂಟರ್‌ನಲ್ಲಿ ಹಾಕಿದ್ದು ನಿಜ. ಆದರೆ ನನಗೆ ನೋಡಲು ಬಹಳ ಕಷ್ಟವಾಯಿತು. ಅದರ ಬಗ್ಗೆ ಮಾಹಿತಿ ತಿಳಿದುಕೊಂಡಾಗ ಬಹಳಷ್ಟು ಹೆಣ್ಣು ಮಕ್ಕಳ ವಿಡಿಯೊಗಳು ಅದರಲ್ಲಿವೆ. ಸಾಕಷ್ಟು ಮಹಿಳೆಯರು ನೊಂದಿದ್ದಾರೆ. ಪೆನ್‌ಡ್ರೈವ್‌ನಲ್ಲಿ ದೌರ್ಜನ್ಯದ ವಿಡಿಯೋಗಳಿವೆ. ಅಧಿಕಾರ ಹಾಗೂ ಸ್ಥಾನ ದುರುಪಯೋಗ ಮಾಡಿಕೊಂಡು ಮಹಿಳೆಯರ ಅಸಹಾಯಕತೆ ಬಳಸಿಕೊಂಡು ಲೈಂಗಿಂಕ ಚಿತ್ರೀಕರಣ ಮಾಡಲಾಗಿದೆ ಎಂದು ಆರೋಪಿಸಿದರು.

ಲೈಂಗಿಕ ಚಿತ್ರೀಕರಣ ಮಾಡಿರುವುದು ನಿಜ, ಕಿರುಕುಳ ನೀಡಿದ ವ್ಯಕ್ತಿಯೇ ಕೈಯಲ್ಲಿ ಮೊಬೈಲ್ ಹಿಡಿದುಕೊಂಡು ಚಿತ್ರೀಕರಣ ಮಾಡಿದ್ದಾರೆ. ಈ ರೀತಿಯ ಕೃತ್ಯ ಮೊದಲ ಬಾರಿಗೆ ಆಗಿದ್ದು ಎಂದು ಕಾಣುತ್ತದೆ, ಸಾವಿರಾರು ಮಹಿಳೆಯರು ಒಬ್ಬ ವ್ಯಕ್ತಿಯ ಕೈಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಇದರಲ್ಲಿ ಸಾವಿರಾರು ಹೆಣ್ಣುಮಕ್ಕಳ ಭವಿಷ್ಯವಿದೆ ಎಂದು ಕಳಕಳಿಯಿಂದ ಎರಡು ದಿನಗಳ ಹಿಂದೆ ಮುಖ್ಯಮಂತ್ರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಪತ್ರ ಬರೆದೆ. ಕೂಡಲೇ ಮುಖ್ಯಮಂತ್ರಿಗಳು ಕ್ರಮ ಕೈಗೊಂಡಿರುವುದು ತೃಪ್ತಿ ತಂದಿದೆ ಎಂದರು.

ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಚಿತ್ರೀಕರಣ ಮಾಡಿದವರು ಮತ್ತು ವಿತರಿಸಿದವರು ಇಬ್ಬರಿಗೂ ಶಿಕ್ಷೆಯಾಗಬೇಕೆಂದು ಒತ್ತಾಯಿಸಿದರು.

ಎಫ್‌ಎಸ್‌ಎಲ್ ಪರೀಕ್ಷೆಗೆ ವಿಡಿಯೊ ರವಾನೆ: ಪ್ರಜ್ವಲ್ ರೇವಣ್ಣ ಅವರು ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಲಾಗುತ್ತಿರುವ ವಿಡಿಯೊಗಳ ಸತ್ಯಾಸತ್ಯತೆ ಪರೀಕ್ಷಿಸಲು ಎಫ್‌ಎಸ್‌ಎಲ್‌ಗೆ ಕಳುಹಿಸಲಾಗಿದೆ.

'ಉಪ್ಪು ತಿಂದವರು ನೀರು ಕುಡಿಬೇಕು, ತಪ್ಪು ಮಾಡಿದ್ದರೆ ಶಿಕ್ಷೆಯಾಗಲಿ, ತನಿಖೆಯಾಗಿ ವಾಸ್ತವಾಂಶ ಹೊರಬರಲಿ'

ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಪ್ರತಿಕ್ರಿಯೆ



ಬೆಂಗಳೂರು, ಏ.28– ಹಾಸನ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಕೇಳಿಬರುತ್ತಿರುವ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಆರೋಪ ಭಾರೀ ಸದ್ದು ಮಾಡುತ್ತಿದೆ. ಸರ್ಕಾರ ಈಗಾಗಲೇ ಪ್ರಕರಣವನ್ನು ಎಸ್ ಐಟಿ ತನಿಖೆಗೆ ವಹಿಸಿದೆ

ಈ ಬಗ್ಗೆ ಇಂದು ಬೆಂಗಳೂರಿನಲ್ಲಿ ಮಾಧ್ಯಮ ಪ್ರತಿನಿಧಿಗಳು ಪ್ರತಿಕ್ರಿಯೆ ಕೇಳಿದಾಗ ಜೆಡಿಎಸ್ ಅಧ್ಯಕ್ಷ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಉಪ್ಪು ತಿಂದವರು ನೀರು ಕುಡಿಯ ಲೇಬೇಕು, ತಪ್ಪು ಮಾಡಿದ್ದರೆ ಈ ನೆಲದ ಕಾನೂನು ಎಲ್ಲರಿಗೂ ಒಂದೇ ಶಿಕ್ಷೆಯಾಗುತ್ತದೆ, ಸರ್ಕಾರ ತನಿಖೆಗೆ ವಹಿಸಿದೆ, ತನಿಖೆಯಾಗಿ ವಾಸ್ತವಾಂಶ ಹೊರಬರಲಿ ಎಂದರು.

ನಾನಾಗಲಿ ದೇವೇಗೌಡರಾಗಲಿ ಯಾವತ್ತಿಗೂ ಹೆಣ್ಣು ಮಕ್ಕಳ ವಿಚಾರದಲ್ಲಿ ಅತ್ಯಂತ ಗೌರವಯುತವಾಗಿ ನಡೆದುಕೊಂಡಿದ್ದೇವೆ. ಯಾರಾದರೂ ಕಷ್ಟ ಹೇಳಿಕೊಂಡು ಬಂದರೆ ಅವರ ಕಷ್ಟ ಪರಿಹರಿಸಿ ಕಳುಹಿಸಿದ್ದೇವೆ. ನಾವಂತೂ ನಮ್ಮ ಸಾರ್ವಜನಿಕ ಜೀವನದಲ್ಲಿ ಮಹಿಳೆಯರಿಗೆ ಅತ್ಯಂತ ಹೆಚ್ಚಿನ ಗೌರವ ನೀಡಿಕೊಂಡು ಬಂದಿದ್ದೇವೆ ಎಂದರು. ಪ್ರಕರಣದ ಬಗ್ಗೆ ಎಸ್‌ಐಟಿ ತನಿಖೆಗೆ ಈಗಾಗಲೇ ರಾಜ್ಯ ಸರ್ಕಾರ ಆದೇಶ ಮಾಡಿದೆ. ತನಿಖೆ ನಡೆಯಲಿ. ಎಸ್‌ಐಟಿ ತನಿಖೆಯಿಂದ ವಾಸ್ತವಾಂಶ ಹೊರಗೆ ಬರಲಿ. ಈ ನೆಲದ ಕಾನೂನಿನಲ್ಲಿ ಯಾರೇ ತಪ್ಪು ಮಾಡಿದರು ಉಪ್ಪು ತಿಂದವರು ನೀರು ಕುಡಿಯಲೇ ಬೇಕು. ನಾವಂತೂ ತಪ್ಪು ಮಾಡಿದ ವಿಷಯದಲ್ಲಿ ಯಾರನ್ನೂ ಕ್ಷಮಿಸುವ ಪ್ರಶ್ನೆಯಿಲ್ಲ. ತನಿಖೆಯ ವರದಿ ಸಂಪೂರ್ಣ ಹೊರಗೆ ಬರಲಿ. ಬಂದ ನಂತರ ಈ ಬಗ್ಗೆ ಮಾತನಾಡುತ್ತೇನೆ ಎಂದು ಹೇಳಿದರು.

ಒಂದು ಒಳ್ಳೆಯ ಪುಸ್ತಕವಿದ್ದರೆ ನೂರು ಮಂದಿ ಸ್ನೇಹಿತರಿದ್ದಂತೆ

ನೇಪಾಳ ಸರ್ಕಾರದ ಉಪಾಧ್ಯಕ್ಷರ ಸಾಂಸ್ಕೃತಿಕ ಸಲಹೆಗಾರ ಡಾ.ಎಂ.ಪಿ.ವರ್ಷ ಅಭಿಮತ

ಮೈಸೂರು, ಏ.28(ಎಂಕೆ)– ಬಾಲ್ಯದಲ್ಲಿ ಜೀವನ ಮೌಲ್ಯಗಳನ್ನು ತಿಳಿಸುವ, ಯೌವನದಲ್ಲಿ ದಾರಿ ತಪ್ಪುವುದನ್ನು ತಡೆಯುವ, ಸಾಂಸಾರಿಕ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಹಾಗೂ ವೃದ್ಧಾಪ್ಯದಲ್ಲಿ ಜೀವನೋತ್ಸವ ನೀಡುವ ಪುಸ್ತಕಗಳನ್ನು ಓದೋಣ, ಓದಲೇಬೇಕು ಎಂದು ನೇಪಾಳ ಸರ್ಕಾರದ ಉಪಾಧ್ಯಕ್ಷರ ಸಾಂಸ್ಕೃತಿಕ ಸಲಹೆಗಾರ ಡಾ.ಎಂ.ಪಿ.ವರ್ಷ ಸಲಹೆ ನೀಡಿದರು.

ಮೈಸೂರಿನ ರಿಂಗ್‌ರಸ್ತೆಯಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರು ಅಂಬಾಸಡರ್ಸ್ ವತಿಯಿಂದ ಆಯೋಜಿಸಿದ್ದ ವಿಶ್ವ ಭೂಮಿ ಮತ್ತು ವಿಶ್ವ ಪುಸ್ತಕ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ಬಳಿ ಒಂದು ಒಳ್ಳೆಯ ಪುಸ್ತಕವಿದ್ದರೆ ನೂರು ಮಂದಿ ಸ್ನೇಹಿತರಿದ್ದಂತೆ. ಇತ್ತೀಚಿನ ದಿನಗಳಲ್ಲಿ ಪುಸ್ತಕಗಳನ್ನು ಓದುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಆನ್‌ಲೈನ್ ಅಥವಾ ಆಫ್‌ಲೈನ್‌ನಲ್ಲಾದರೂ ಓದಿ. ಒಟ್ಟಿನಲ್ಲಿ ಓದಿನ ಹವ್ಯಾಸದಿಂದ ದೂರಾಗಬೇಡಿ ಎಂದು ಮನವಿ ಮಾಡಿದರು.

ಒಳ್ಳೆಯ ಪುಸ್ತಕಗಳು ಬಾಲ್ಯದಲ್ಲಿ ಜೀವನ ಮೌಲ್ಯಗಳನ್ನು, ಯೌವನದಲ್ಲಿ ದಾರಿ ತಪ್ಪುವುದನ್ನು, ಮದುವೆ ನಂತರ ಸಾಂಸಾರಿಕ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಹಾಗೂ ವೃದ್ಧಾಪ್ಯದಲ್ಲಿ ಜೀವನೋತ್ಸವ ನೀಡುತ್ತವೆ. ಹಾಗಾಗಿಯೇ ಪುಸ್ತಕಗಳನ್ನು ಉತ್ತಮ ಸ್ನೇಹಿತ ಎಂತಲೂ ಕರೆಯಲಾಗುತ್ತದೆ. ಮಾತಾಡುವ ಮುನ್ನ ಓದು, ಓದುವ ಮುನ್ನ ಯೋಚನೆ ಮಾಡುವುದು ಮುಖ್ಯ. ಹಾಗಾಗಿ ಪುಸ್ತಕಗಳನ್ನು ಓದೋಣ, ಜ್ಞಾನ ಪಡೆದು ನಾವೇನೆಂಬುದನ್ನು ಜತ್ತಿಗೆ ತೋರಿಸೋಣ ಎಂದು ಕರೆ ನೀಡಿದರು.

ಪ್ರಕೃತಿ ಉಳಿವಿಗಾಗಿ: ವಿಶ್ವ ಭೂ ದಿನ ಆಚರಣೆಯನ್ನು ಪ್ರಕೃತಿಯ ಉಳಿವಿಗಾಗಿ ಆಚರಣೆ ಮಾಡಲು ಆರಂಭಿಸಲಾಯಿತು. ಇಂದು ಪರಿಸರವನ್ನು ಯಾವ ಮಟ್ಟಕ್ಕೆ ಹಾಳು ಮಾಡಿದ್ದೇವೆ ಎಂದರೆ ವರ್ಷದಿಂದ ವರ್ಷಕ್ಕೆ ಉಷ್ಣಾಂಶ ಹೆಚ್ಚಾಗುತ್ತಲೇ ಇದೆ. ಪ್ರಕೃತಿ ಸಂರಕ್ಷಣೆ ಮಾಡಬೇಕು ಎಂದು ಮಾತನಾಡುತ್ತೇವೆಯೋ ಹೊರತು ಉಳಿಸುವ ಬಗೆಯ ಯಾವ ಕೆಲಸವನ್ನು ಮಾಡುವುದಿಲ್ಲ. ಪ್ರಕೃತಿ ಇದ್ದರೆ ನಾವು–ನಿವೆಲ್ಲರು ಜೀವಿಸಲು ಸಾಧ್ಯ ಎಂದು ಎಚ್ಚರಿಸಿದರು. ಇದೇ ವೇಳೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 2ನೇ ರ‍್ಯಾಂಕ್ ಪಡೆದ ಕೆ.ಹೆಚ್.ಊರ್ವಿಶ್ ಪ್ರಶಾಂತ್ ಹಾಗೂ 5ನೇ ರ‍್ಯಾಂಕ್ ಪಡೆದ ಶ್ರೇಯಾ ಗಣೇಶ್ ಅಯ್ಯರ್ ಅವರನ್ನು ಅಭಿನಂದಿಸಿ ಪ್ರೋತ್ಸಾಹಿಸಲಾಯಿತು. ಲಯನ್ಸ್ ಕ್ಲಬ್ ಆಫ್ ಮೈಸೂರು ಅಂಬಾಸಡರ್ ಅಧ್ಯಕ್ಷ ಹೆಚ್.ಸಿ. ಕಾಂತರಾಜು, ಕಾರ್ಯದರ್ಶಿ ಸಿ.ಆರ್.ದಿನೇಶ್, ಖಜಾಂಚಿ ಕೆ.ಟಿ.ವಿಷ್ಣು ಮತ್ತಿತರರು ಉಪಸ್ಥಿತರಿದ್ದರು.




ಲಯನ್ಸ್ ಕ್ಲಬ್ ಆಫ್ ಮೈಸೂರು ಅಂಬಾಸಡರ್ಸ್ ವತಿಯಿಂದ ಆಯೋಜಿಸಿದ್ದ ವಿಶ್ವ ಭೂಮಿ ಮತ್ತು ವಿಶ್ವ ಪುಸ್ತಕ ದಿನಾಚರಣೆಯಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 2ನೇ ರ‍್ಯಾಂಕ್ ಪಡೆದ ಕೆ.ಹೆಚ್.ಊರ್ವಿಶ್ ಪ್ರಶಾಂತ್ ಹಾಗೂ 5ನೇ ರ‍್ಯಾಂಕ್ ಪಡೆದ ಶ್ರೇಯಾ ಗಣೇಶ್ ಅಯ್ಯರ್ ಅವರನ್ನು ಅಭಿನಂದಿಸಲಾಯಿತು. ನೇಪಾಳ ಸರ್ಕಾರದ ಉಪಾಧ್ಯಕ್ಷರ ಸಾಂಸ್ಕೃತಿಕ ಸಲಹೆಗಾರ ಡಾ.ಎಂ.ಪಿ.ವರ್ಷ, ಲಯನ್ಸ್‌ಕ್ಲಬ್ ಆಫ್ ಮೈಸೂರು ಅಂಬಾಸಡರ್ ಅಧ್ಯಕ್ಷ ಹೆಚ್.ಸಿ. ಕಾಂತರಾಜು, ಕಾರ್ಯದರ್ಶಿ ಸಿ.ಆರ್.ದಿನೇಶ್ ಮತ್ತಿತರರಿದ್ದರು.

ರಂಗೋಲಿ ಬಿಡಿಸಲು ಸಾವಿರ ಲೀಟರ್ ನೀರು...!

ಮನೆ ಮುಂದೆ ಚಿಕ್ಕದಾಗಿ ರಂಗೋಲಿ ಬಿಡಿಸಲು ಸಾವಿರಾರು ಲೀಟರ್ ನೀರು ವ್ಯರ್ಥ ಮಾಡುತ್ತಾರೆ. ಇಡೀ ರಸ್ತೆಗೆಲ್ಲಾ ನೀರು ಹರಿಸುತ್ತಾರೆ. ಒಂದು ಮನೆಯಲ್ಲೇ ಒಂದೆರಡು ಸಾವಿರ ಲೀಟರ್ ನೀರನ್ನು ರಂಗೋಲಿ ಬಿಡಿಸಲು ಬಳಸಿದರೆ ಎಲ್ಲರೂ ಇದೇ ಮಾಡುತ್ತಿರುವಾಗ ಪ್ರತಿನಿತ್ಯ ಎಷ್ಟು ಸಾವಿರ ಲೀಟರ್ ನೀರು ರಸ್ತೆ ಪಾಲಾಗುತ್ತಿದೆ ಎಂಬುದನ್ನು ಯೋಜನೆ ಮಾಡಬೇಕು. ಸಂಪ್ರದಾಯ, ಪದ್ಧತಿ ಹೆಸರಿನಲ್ಲಿ ನೈಸರ್ಗಿಕ ಸಂಪತ್ತನ್ನು ಹಾಳು ಮಾಡುವುದು ಎಷ್ಟು ಸರಿ. ನೀರಿನ ಮಿತ ಬಳಕೆ ಅತ್ಯಂತ ಅವಶ್ಯ

- ಡಾ.ಎಂ.ಪಿ.ವರ್ಷ, ನೇಪಾಳ ಸರ್ಕಾರದ ಉಪಾಧ್ಯಕ್ಷರ ಸಾಂಸ್ಕೃತಿಕ ಸಲಹೆಗಾರ

ಹುಲಿ ಯೋಜನೆಯ ಸಿಎಫ್ ಆಗಿ ಡಾ. ರಮೇಶ್ ಕುಮಾರ್ ನೇಮಕ



ಮೈಸೂರು, ಏ.28(ಎಂಟಿವೈ)–ಹುಲಿ ಯೋಜನೆಯ ಕನ್ಸರ್ವೇಟರ್ ಆಫ್ ಫಾರೆಸ್ಟ್ (ಸಿಎಫ್) ಆಗಿ ಐಎಫ್‌ಎಸ್ ಅಧಿಕಾರಿ ಡಾ. ಪಿ.ರಮೇಶ್ ಕುಮಾರ್ ಅವರನ್ನು ನೇಮಕ ಮಾಡಲಾಗಿದೆ.

ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾಗಿ ಸೇವೆ ಸಲ್ಲಿಸಿ ಮಾರ್ಚ್‌ನಲ್ಲಿ ವರ್ಗಾವಣೆಗೊಂಡು ಸ್ಥಳದ ನಿರೀಕ್ಷೆಯಲ್ಲಿದ್ದ 2008ರ ಬ್ಯಾಚ್‌ನ ಐಎಫ್‌ಎಸ್ ಅಧಿಕಾರಿ ಡಾ. ರಮೇಶ್ ಕುಮಾರ್ ಅವರನ್ನು ಹುಲಿ ಯೋಜನೆಯ ಸಿಎಫ್ ಆಗಿ ನಿಯೋಜಿ ಸಲಾಗಿದೆ. ರಮೇಶ್ ಕುಮಾರ್ ಅವರ ವ್ಯಾಪ್ತಿಯಲ್ಲಿ ರಾಜ್ಯದ 5 ಹುಲಿ ಸಂರಕ್ಷಿತ ಪ್ರದೇಶಗಳು ಒಳಗೊಳ್ಳಲಿದ್ದು, ಈಗಾಗಲೇ ಸಿಎಫ್ ಆಗಿ ಅಧಿಕಾರ ಸ್ವೀಕರಿಸಿದ್ದಾರೆ. ರಮೇಶ್ ಕುಮಾರ್ ಅವರು ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಸಿಎಫ್ ಆಗಿದ್ದ ಅವಧಿಯಲ್ಲಿ ಜಾರಿಗೊಳಿಸಿದ ಯುವ ಮಿತ್ರ ಯೋಜನೆ, ಕಾಡಂಚಿನ ಗ್ರಾಮಗಳ ಜನರಿಗೆ ಆರೋಗ್ಯ ಸೇವೆ ಒದಗಿಸಲು ಜಾರಿಗೊಳಿಸಿದ ಆಂಬುಲೆನ್ಸ್ ಸೇವೆ, ಬುಡಕಟ್ಟು ಮಹಿಳೆಯರ ಸ್ವ–ಸಹಾಯ ತಂಡ ರಚಿಸಿ ಲಂಟಾನಾದಿಂದ ವಿವಿಧ ವಸ್ತು ತಯಾರಿಕೆಗೆ ತರಬೇತಿ ನೀಡುವ ಕಾರ್ಯಕ್ರಮ ಸೇರಿದಂತೆ ಇನ್ನಿತರ ಪ್ರಮುಖ ಕಾರ್ಯಕ್ರಮಗಳನ್ನು ಗಮನಿಸಿ ಅವರನ್ನು ಹುಲಿ ಯೋಜನೆಯ ಸಿಎಫ್ ಆಗಿ ನಿಯೋ ಜಿಸಲಾಗಿದೆ. ಅವರ ಪತ್ನಿ ಡಾ. ಮಾಲತಿ ಪ್ರಿಯ ಅವರು ಮೈಸೂರು ವಿಭಾಗದ ಸಿಎಫ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಮಹದೇವ್ ಬೆಟ್ಟಿಂಗ್ ಆ್ಯಪ್ ಪ್ರಕರಣ: ನಟ ಸಾಹಿಲ್ ಖಾನ್ ಬಂಧಿಸಿದ ಎಸ್‌ಐಟಿ

ಮುಂಬೈ, ಏ.28– ಮಹದೇವ್ ಬೆಟ್ಟಿಂಗ್ ಆ್ಯಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂಬೈ ಸೈಬರ್ ಸೆಲ್‌ನ ವಿಶೇಷ ತನಿಖಾ ತಂಡವು (ಎಸ್‌ಐಟಿ) ನಟ ಸಾಹಿಲ್ ಖಾನ್ ಅವರನ್ನು ಛತ್ತೀಸ್‌ಗಢದಲ್ಲಿ ಬಂಧಿಸಿದೆ ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

ಸಾಹಿಲ್ ಖಾನ್ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಬಾಂಬೆ ಹೈಕೋರ್ಟ್ ತಿರಸ್ಕರಿಸಿದ ನಂತರ ನಟನನ್ನು ಶನಿವಾರ ಛತ್ತೀಸ್‌ಗಢದ ಜಗದಲ್‌ಪುರದಿಂದ ಬಂಧಿಸಲಾಗಿದೆ ಎಂದು ಅವರು ಹೇಳಿದರು.

ರಾಜ್ಯದ ಕೆಲವು ಹಣಕಾಸು ಮತ್ತು ರಿಯಲ್ ಎಸ್ಟೇಟ್ ಸಂಸ್ಥೆಗಳು ಮತ್ತು ವಿವಾದಿತ ಮಹದೇವ್ ಬೆಟ್ಟಿಂಗ್ ಆ್ಯಪ್‌ನ ಪ್ರವರ್ತಕರ ನಡುವಿನ ಹಣ ಅಕ್ರಮ ವಹಿವಾಟಿನ ಕುರಿತು ಎಸ್‌ಐಟಿ ಸಾಹಿಲ್ ಖಾನ್ ಸೇರಿದಂತೆ ಇತರ 31 ವ್ಯಕ್ತಿಗಳ ವಿರುದ್ಧವೂ ತನಿಖೆ ನಡೆಯುತ್ತಿದೆ.

15 ಕೋಟಿ ಸಾವಿರ ರೂ. ಅವ್ಯವಹಾರಕ್ಕೆ ಸಂಬಂಧಿಸಿದಂತೆ ಬೆಟ್ಟಿಂಗ್ ಆ್ಯಪ್ ಪ್ರಕರಣದಲ್ಲಿ ಇಲ್ಲಿಯವರೆಗೆ ಒಬ್ಬನನ್ನು ಬಂಧಿಸಲಾಗಿದ್ದು, ಹೆಚ್ಚಿನ ತನಿಖೆ ನಡೆಯುತ್ತಿದೆ. ತನಿಖೆಯು ಆರೋಪಿಗಳ ಬ್ಯಾಂಕ್ ಖಾತೆಗಳು, ಮೊಬೈಲ್ ಫೋನ್‌ಗಳು, ಲ್ಯಾಪ್‌ಟಾಪ್‌ಗಳು ಮತ್ತು ಎಲ್ಲ ತಾಂತ್ರಿಕ ಸಾಧನಗಳನ್ನು ಪರಿಶೀಲಿಸುವುದನ್ನು ಒಳಗೊಂಡಿರುತ್ತದೆ ಎಂದು ಪೊಲೀಸರು ತಿಳಿಸಿದ್ದಾರೆ. 'ಸ್ಟೈಲ್', 'ಎಕ್ಸ್‌ಕ್ಯೂಸ್ ಮಿ' ಚಿತ್ರಗಳಿಗೆ ಹೆಸರಾದ ಸಾಹಿಲ್ ಖಾನ್ ಫಿಟ್‌ನೆಸ್ ಎಕ್ಸ್‌ಪರ್ಟ್ ಆಗಿದ್ದಾರೆ.

600 ಕೋಟಿ ರೂ. ಮೌಲ್ಯದ ಡ್ರಗ್ಸ್ ಸಹಿತ ಪಾಕ್ ದೋಣಿ ವಶಕ್ಕೆ

ಅಹ್ಮದಾಬಾದ್, ಏ.28– ಭಾರತೀಯ ಕರಾವಳಿ ಭದ್ರತಾ ಪಡೆಗಳು ಭಾನುವಾರ ಭರ್ಜರಿ ಕಾರ್ಯಾಚರಣೆ ನಡೆಸಿದ್ದು, ಸುಮಾರು 600 ಕೋಟಿ ರೂ ಮೌಲ್ಯದ ಡ್ರಗ್ಸ್ ಸಾಗಿಸುತ್ತಿದ್ದ ಪಾಕಿಸ್ತಾನ ಮೂಲದ ಬೋಟ್ ಅನ್ನು ಸೀಜ್ ಮಾಡಿ 14 ಜನರನ್ನು ಬಂಧಿಸಿದೆ. ಗುಜರಾತ್‌ನ ಕರಾವಳಿಯಲ್ಲಿ ಗುಜರಾತ್ ಭಯೋತ್ಪಾದನಾ ನಿಗ್ರಹ ದಳ ಮತ್ತು ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ ಸಮನ್ವಯದಲ್ಲಿ ಅರಬ್ಬಿ ಸಮುದ್ರದಲ್ಲಿ ತಡರಾತ್ರಿ ಕಾರ್ಯಾಚರಣೆ ನಡೆಸಲಾಗಿದೆ.

ಭಾರತೀಯ ಕೋಸ್ಟ್ ಗಾರ್ಡ್ 28 ಏ.24ರಂದು ಸಮುದ್ರದಲ್ಲಿ ಗುಪ್ತಚರ–ಆಧಾರಿತ ಮಾದಕವಸ್ತು ವಿರೋಧಿ ಕಾರ್ಯಾಚರಣೆಯನ್ನು ಕೈಗೊಂಡಿತು. ಈ ವೇಳೆ 600 ಕೋಟಿ ಮೌಲ್ಯದ ಸುಮಾರು 86 ಕೆಜಿ ಮಾದಕ ವಸ್ತುವನ್ನು ಪಾಕಿಸ್ತಾನದ ಬೋಟ್ ನಿಂದ ವಶಪಡಿಸಿಕೊಳ್ಳಲಾಗಿದೆ ಮತ್ತು 14 ಸಿಬ್ಬಂದಿಯನ್ನು ಬಂಧಿಸಲಾಗಿದೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಜೈನ್ ಸಂಘಟನೆಯಿಂದ ಪಿಂಜಾರಪೋಲ್‌ನಲ್ಲಿ ಕೆರೆ ಪುನಶ್ಚೇತನ ಕಾಮಗಾರಿಗೆ ಚಾಲನೆ

ಟಿ.ಕಾಟೂರು, ಗುಜ್ಜೇಗೌಡನಪುರ, ಬೋಗಾದಿಯಲ್ಲೂ ಕೆರೆ ಪುನಶ್ಚೇತನ

ಮೈಸೂರು, ಏ.28(ಜಿಎ)–ಭಾರತೀಯ ಜೈನ್ ಸಂಘಟನೆ ವತಿಯಿಂದ 'ಜೈನ್ ಜಲಕ್ರಾಂತಿ' ಯೋಜನೆಯಡಿ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನ ಪಿಂಜಾರಪೋಲ್ ಸೊಸೈಟಿ ಆವರಣದಲ್ಲಿ ಭಾನುವಾರ ಕೆರೆ ಪುನಶ್ಚೇತನ ಕಾಮಗಾರಿಗೆ ಚಾಲನೆ ನೀಡಲಾಯಿತು.

ಸಂಘಟನೆಯು ದೇಶದಾದ್ಯಂತ 100 ಜಿಲ್ಲೆಗಳ 400 ಕೆರೆಗಳನ್ನು ಅಭಿವೃದ್ಧಿಗೊಳಿಸುವ ಯೋಜನೆ ಹಮ್ಮಿಕೊಂಡಿದ್ದು, ಅದರ ಭಾಗವಾಗಿ ಜಿಲ್ಲೆಯಲ್ಲೂ ಕೆರೆಗಳನ್ನು ಗುರುತಿಸಲಾಗಿದೆ. ಈಗಾಗಲೇ 3 ಕೆರೆಗಳ ಪುನಶ್ಚೇತನ ಕಾಮಗಾರಿ ನಡೆಯುತ್ತಿದ್ದು, ಪಿಂಜಾರಪೋಲ್ ಸೊಸೈಟಿ ಆವರಣದಲ್ಲಿ ಭಾನುವಾರ ಕೆರೆ ನಾಲ್ಕನೇ ಯೋಜನೆಯಾಗಿದೆ.

ಫೋರ್ಸ್ ಮೋಟಾರ್ಸ್ ಸಂಸ್ಥೆಯ ಅಜಯ್ ಫಿರೋಡಿಯ ಅವರು ಹಿಂದಿನ 3 ಕೆರೆ ಯೋಜನೆಯನ್ನು ಹಾಗೂ ನಗರದ ಕೈಲಾಶ್ಚಾಂಧಿ ದೇಸಾರಿಯಾ ಮತ್ತು ಸುಖರಾಜ್ ವಿನಾಯಕಿಯಾ ಕುಟುಂಬ ಜಂಟಿಯಾಗಿ ಈ ಯೋಜನೆಯನ್ನು ಪ್ರಾಯೋಜಿಸುತ್ತಿದೆ. ಸಂಸ್ಥೆಯ ಹಲವು ಸ್ವಯಂ ಸೇವಕರು ಯೋಜನೆಗಳ ಸಫಲತೆಗೆ ಸಹಕಾರ ನೀಡಿದ್ದು ಅದರಂತೆ ಟಿ ಕಾಟೂರು, ಗುಜ್ಜೇಗೌಡನಪುರ ಹಾಗೂ ಬೋಗಾದಿ ರಸ್ತೆಯ ಗೊಲ್ಲನಬೀಡು ಸರಗೂರಿನಲ್ಲಿ ಕೆರೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ಮೈಸೂರು ಜಿಲ್ಲಾ ಕೆರೆ ಸಂರಕ್ಷಣಾ ಸಮಿತಿ ಸದಸ್ಯ ಯು.ಎನ್.ರವಿ ಕುಮಾರ್ ಮಾತನಾಡಿ, ಅಂತರ್ಜಲ ಮಟ್ಟ ಸುಧಾರಿಸಲು ಕೆರೆಗಳ ಮರುಪೂರಣ ಅತ್ಯಗತ್ಯ. ಉತ್ತಮವಾಗಿರುವ ಕೆರೆ, ಕಟ್ಟೆ, ಕುಂಟೆಗಳೇ ಪ್ರಕೃತಿಯ ಆರೋಗ್ಯ ಸೂಚಿಸುತ್ತದೆ. ನೀರಿನ ಬಳಕೆ ಕುರಿತು ರಾಜಸ್ಥಾನದಂತ ರಾಜ್ಯಗಳನ್ನು ನಾವು ಗಮನಿಸಬೇಕು. ಬಿಸಿಲಿನ ಸಂಕಷ್ಟದಲ್ಲೂ ಅವರು ನೀರಿನ ಸಂರಕ್ಷಣೆಗೆ ತೆಗೆದುಕೊಂಡ ವಿಧಾನಗಳು ನಮಗೆ ಸ್ಫೂರ್ತಿ. ಇಂದು ಮೈಸೂರು ಕಬಿನಿ, ಕಾವೇರಿ ನದಿಗಳಿಂದ ನೀರು ಪಡೆಯುತ್ತಿದ್ದರೂ, ಹಿಂದೊಮ್ಮೆ ಕೆರೆ ಕಟ್ಟೆಗಳೇ ನಮಗೆ ಆಶ್ರಯವಾಗಿದ್ದವು ಎಂಬುದನ್ನು ಮರೆಯಬಾರದು. ಈ ಮೂಲಗಳ ಉಳಿವು ನಮ್ಮನ್ನು ಸಂಕಷ್ಟದಿಂದ ಪಾರಾಗಿಸುತ್ತದೆ ಎಂದು ವಿವರಿಸಿದರು.



ಭಾರತೀಯ ಜೈನ್ ಸಂಘಟನೆ ವತಿಯಿಂದ ಜೈನ್ ಜಲಕ್ರಾಂತಿ ಯೋಜನೆಯಡಿ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನ ಪಿಂಜಾರಪೋಲ್ ಸೊಸೈಟಿ ಆವರಣದಲ್ಲಿ ಭಾನುವಾರ ಕೆರೆ ಪುನಶ್ಚೇತನ ಕಾಮಗಾರಿಗೆ ಚಾಲನೆ ನೀಡಲಾಯಿತು.

ಸಂಘಟನೆ ಮೈಸೂರು ಚಾಪ್ಟರ್ ಅಧ್ಯಕ್ಷ ಪ್ರವೀಣ್ ಲುಂಕರ್ ಮಾತನಾಡಿ, ಜಿಲ್ಲೆಯಲ್ಲಿ ಪುನಶ್ಚೇತನಗೊಳ್ಳುತ್ತಿರುವ ನಾಲ್ಕನೇ ಕೆರೆ ಇದ್ದಾಗಿದ್ದು, ಅದರಂತೆ 2024 ರ ಏಪ್ರಿಲ್ 15 ರಂದು ಟಿ. ಕಾಟೂರಿನಲ್ಲಿ ಮೊದಲ ಜಲಮೂಲದ ಹೂಳು ತೆಗೆಯುವಿಕೆ ಪ್ರಾರಂಭವಾಯಿತು. ಯಾವುದೇ ವಿರಾಮವಿಲ್ಲದೆ ಕಾರ್ಯಾಚರಣೆ ಮುಂದುವರೆಸಲಾಗಿದೆ ಕೆರೆಯ ಅಕ್ಕಪಕ್ಕದ ರೈತರು 1300ಕ್ಕೂ ಹೆಚ್ಚು ಟ್ರ್ಯಾಕ್ಟರ್ ಲೋಡ್ ಫಲವತ್ತಾದ ಹೂಳನ್ನು ಉಚಿತವಾಗಿ ಪಡೆದುಕೊಂಡಿದ್ದಾರೆ. ಹಾಗೇ ಗುಜ್ಜೆ ಗೌಡನಪುರದ ಎರಡನೇ ಕೆರೆಯ ಕಾಮಗಾರಿ 2024ರ ಏಪ್ರಿಲ್ 17ರಂದು ಆರಂಭಗೊಂಡಿದೆ. ಇಲ್ಲಿಯೂ ಫಲವತ್ತಾದ ಮಣ್ಣಿಗೆ ಉತ್ತಮ ಬೇಡಿಕೆಯಿದ್ದು, ರೈತರು ತಮ್ಮ ಟ್ರ್ಯಾಕ್ಟರ್‌ಗಳಲ್ಲಿ ಫಲವತ್ತಾದ ಹೂಳನ್ನು ತಮ್ಮ ಜಮೀನುಗಳಿಗೆ ಸಾಗಿಸುವ ಮೂಲಕ ಯೋಜನೆಯನ್ನು ಉತ್ಸಾಹದಿಂದ ಬೆಂಬಲಿಸುತ್ತಿದ್ದಾರೆ. ಸುಮಾರು 1200 ಟ್ರಾಕ್ಟರ್ ಲೋಡ್ ಫಲವತ್ತಾದ ಮಣ್ಣನ್ನು ಅಗೆದು ಕೊಟ್ಟು, ನೀರು ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸಿದೆ. ರೈತರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಭಗವಾನ್ ಶ್ರೀ ಮಹಾವೀರ ಜನ್ಮ ಕಲ್ಯಾಣ ಮಹೋತ್ಸವದ ಸಂದರ್ಭದಲ್ಲಿ 2024ರ ಏಪ್ರಿಲ್ 21ರಂದು ಮೈಸೂರಿನ ಬೋಗಾದಿ ರಸ್ತೆಯ ಗೊಲ್ಲನಬೀಡು ಸರಗೂರಿನಲ್ಲಿ ಮೂರನೇ ಕೆರೆ ಕಾಮಗಾರಿಯನ್ನು ಉದ್ಘಾಟಿಸಲಾಯಿತು. ಇಲ್ಲಿನ ರೈತರು ತಮ್ಮ ಟ್ರ್ಯಾಕ್ಟರ್‌ಗಳಿಗೆ ತುಂಬಿದ ಉಚಿತ ಹೂಳನ್ನು ಸಂತೋಷದಿಂದ ಮತ್ತು ನಿರಂತರವಾಗಿ ಸಾಗಿಸುತ್ತಿದ್ದಾರೆ. ಈ ಮೂರು ಕೆರೆ ಪುನರುಜ್ಜೀವನ ಯೋಜನೆಯನ್ನು ಫೋರ್ಸ್ ಮೋಟಾರ್ಸ್ ಅಭಯ್ ಫಿರೋಡಿಯಾ ಪ್ರಾಯೋಜಿಸಿದ್ದಾರೆ ಎಂದರು.

ಸ್ವಯಂಸೇವಕರಾದ ಜೈನ್ ಕುಶಾಲ್ ಪಾಲೇಚಾ, ಜೈನ್ ದೀಪಕ್ ಬೋಹ್ರಾ, ಜೈನ್ ಪ್ರಕಾಶ್ ಶ್ರೀಮಾಲ್, ಜೈನ್ ವಿಮಲ್ ಪಿಟ್ಟಿಯಾ, ಜೈನ್ ರಾಜನ್ ಬಸ್ಮಾರ್, ಜೈನ್ ಮನೋಹರ್ ಸಂಖ್ಯಾ, ಜೈನ್ ನೇಮಿಚಂದ್ ಬಡೋಲಾ, ಜೈನ್ ಮಹಾವೀರ್ ದೇರಸಾರಿಯಾ, ಜೈನ್ ಅಭಿಷೇಕ್ ಸಿಂಘವಿ, ಜೈನ್ ಸುರೇಶ ನಿಖಿತೆ, ಜೈನ್ ನಿಶಾ ರಾಮ್ಪಿನಾ, ಜೈನ್ ಪ್ರಕಾಶ್ ಗಾಂಧಿ, ಜೈನ್ ಮಹಾವೀರ್ ಧೋಕಾ, ಜೈನ್ ಶಿವಂಗಿ ಭಂಡಾರಿ, ಜೈನ್ ಭೂಮಿಕಾ ಗುಲೇಚಾ ಮುಂತಾದವರು ಯೋಜನೆಗಳ ಯಶಸ್ಸಿಗಾಗಿ ಪ್ರತಿದಿನ ಭೇಟಿ ನೀಡಿ ಮೇಲ್ವಿಚಾರಣೆ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಸಂಘಟನೆ ರಾಜ್ಯ ಉಪಾಧ್ಯಕ್ಷ ಜೈನ್ ಪ್ರಕಾಶ್ ಗುಲೇಚಾ, ಸಮಿತಿ ಸದಸ್ಯರಾದ ರಾಜೇಶ್ ಸಂಚೇತಿ, ಸುಖರಾಜ್ ವಿನಾಯಕಿಯಾ, ಜಿಲ್ಲಾ ಕಾರ್ಯಕ್ರಮ ಸಂಯೋಜಕ ಸ್ವರಾಜ್ ಜೈನ್, ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ದಿನೇಶ್ ಪಾಲೇಚಾ, ಸೊಸೈಟಿ ಅಧ್ಯಕ್ಷ ಸುಮತಿಲಾಲ್ ಪಗಾರಿಯಾ, ಕಾರ್ಯದರ್ಶಿ ವಿನೋದ್ ಖಾವಿಯಾ, ಸುಮತಿನಾಥ್ ಜೈನ್ ಶ್ವೇತಾಂಬರ ಮೂರ್ತಿಪೂಜಕ ಸಂಘ ಬೆರು ಮಾಳ್ ರಾಥೋಡ್, ಸುಭಾಷ್ ಧೋಕಾ, ಶೇರಾ ಪಂಥ್ ಜೈನ ಸಂಘದ ಅಧ್ಯಕ್ಷ ಪ್ರಕಾಶ್ ಡಿ ಜೈನ್, ಕುಶಾಲ್ ಪಾಲೋಚಾ ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಕೋಳಿ ಮರಿ : ಅಮ್ಮಾ, ಮನುಷ್ಯರು ಹುಟ್ಟಿದ ಕೂಡಲೇ ಚಂದ ಚಂದದ ಹೆಸರಿಡುತ್ತಾರೆ. ನಮಗ್ಯಾಕಮ್ಮ ಯಾರು ಹೆಸರು ಇಡಲ್ಲ.

ತಾಯಿ ಕೋಳಿ : ಮರಿ, ಅವರಿಗೆಲ್ಲ ಹುಟ್ಟಿದ ಮೇಲೆ ಹೆಸರಿಡ್ತಾರೆ. ನಮಗೆ ಸತ್ತ ಮೇಲೆ ಹೆಸರಿಡ್ತಾರೆ.... ಚಿಕನ್ ಚಿಲ್ಲಿ, ಚಿಕನ್ ತಂದೂರಿ, ಚಿಕನ್ ಲಾಲಿಪಾಪ್, ಚಿಕನ್ ಕಬಾಬ್ ಅಂತ...!

ಮೈಸೂರು ಮಿತ್ರ

ಸೋಮವಾರ, 29 ಏಪ್ರಿಲ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

'ನಿಮ್ಮನ್ನು ನೋಯಿಸಿದವರನ್ನು ನೀವು ಕ್ಷಮಿಸಿದರೆ, ನಿಮ್ಮ ಎಲ್ಲಾ ತಪ್ಪುಗಳನ್ನು ದೇವರು ಕ್ಷಮಿಸುತ್ತಾನೆ. –ಯೇಸು ಕ್ರಿಸ್ತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ.

ನಿಮ್ಮ ಪತ್ರಗಳು

■ ಮತ ಚಲಾವಣೆಯ ಗೌಪ್ಯತೆ ಕಾಪಾಡದವರಿಗೆ ಕಠಿಣ ಶಿಕ್ಷೆಯಾಗಲಿ

ಮಾನ್ಯರೆ,



ಪ್ರಜಾಪ್ರಭುತ್ವದ ಅತಿ ದೊಡ್ಡ ಮತದಾನದ ಹಬ್ಬ. ಬಹುತೇಕ ಎಲ್ಲೆಡೆ ಶಾಂತಿಯುತವಾಗಿ ನಡೆದಿದೆ. ಈ ನಡುವೆ ಕೇಂದ್ರ ಚುನಾವಣಾ ಆಯೋಗ ಜಾರಿಗೆ ತಂದಿದ್ದ ನೀತಿ, ನಿಯಮಗಳು, ಆದೇಶಗಳನ್ನು ಉಲ್ಲಂಘಿಸಿರುವ ಘಟನೆ ಕೆಲವು ಕಡೆ ವರದಿಯಾಗಿವೆ.

ಮತದಾನದ ವೇಳೆ ಮೊಬೈಲ್‌ಗೆ ನಿರ್ಬಂಧ ವಿಧಿಸಿ ಚುನಾವಣಾ ಆಯೋಗ ಕಟ್ಟುನಿಟ್ಟಿನ ಆದೇಶ ಹೊರಡಿಸಿತ್ತು. ಆದರೆ, ಕಾನೂನು ಪಾಲನೆ ಮಾಡಬೇಕಿದ್ದ ಚುನಾವಣಾ ಸಿಬ್ಬಂದಿ ಹಾಗೂ ಕೆಲ ಯುವ ಮತದಾರರು ಈ ನಿಯಮಗಳನ್ನು ಗಾಳಿಗೆ ತೂರಿ ಕಾನೂನಿಗೆ ಅಗೌರವ ತೋರಿದ್ದಾರೆ. ಮತ ಚಲಾವಣೆಯ ವೇಳೆ ಎಲೆಕ್ಟ್ರಾನಿಕ್ ವೋಟಿಂಗ್ ಮೆಷಿನ್ ಬಳಿ ಸೆಲ್ಫಿ ತೆಗೆದುಕೊಳ್ಳುವುದು, ವಿಡಿಯೋ ಚಿತ್ರೀಕರಣ ಮಾಡಿ ತಾವು ಯಾವ ವ್ಯಕ್ತಿಗಳಿಗೆ ಮತ ಚಲಾಯಿಸಿದ್ದೇವೆ ಎಂಬುದನ್ನು, ಸಾಮಾಜಿಕ ಜಾಲತಾಣಗಳಾದ ವಾಟ್ಸಾಪ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಟ್ವಿಟ್ಟರ್‌ಗಳಲ್ಲಿ ಹಂಚಿಕೊಳ್ಳುವುದರ ಜತೆಗೆ, ಹಲವು ಗ್ರೂಪ್‌ಗಳಲ್ಲಿ ಹಾಕಿ ಮಾತದಾನದ ಗೌರವಗಳನ್ನು ಹಾಳುಗೆಡವಿದ್ದಾರೆ.

ಈ ರೀತಿಯ ಕೃತ್ಯ ಎಸಗಿದವರು ಪ್ರಜ್ಞಾವಂತ ಯುವ ಮತದಾರರು ಎಂಬುದು ಬೇಸರದ ಸಂಗತಿ. ಬೆಂಗಳೂರು ದಕ್ಷಿಣ, ದಕ್ಷಿಣ ಕನ್ನಡ, ಕೋಲಾರ, ಚಿಕ್ಕಬಳ್ಳಾಪುರ ಕ್ಷೇತ್ರಗಳಲ್ಲಿ ಈ ರೀತಿಯ ಘಟನೆಗಳು ನಡೆದಿರುವ ಬಗ್ಗೆ ವರದಿಯಾಗಿವೆ.

ಯಾವುದೇ ಕಾನೂನುಗಳನ್ನು ಪಾಲಿಸುವುದು ಪ್ರತಿಯೊಬ್ಬ ನಾಗರಿಕರ ಆದ್ಯ ಕರ್ತವ್ಯವಾಗಿದ್ದು, ಮತದಾನದ ವೇಳೆ ಮೊಬೈಲ್ ತಪಾಸಣೆ ನಡೆಸಿ, ವಶಪಡಿಸಿಕೊಂಡು ಆದೇಶ ಪಾಲಿಸದ ಚುನಾವಣಾ ಸಿಬ್ಬಂದಿ ಕೇವಲ ಕಾಟಾಚಾರಕ್ಕೆ ಕರ್ತವ್ಯ ನಿರ್ವಹಿಸಿದಂತೆ ಕಾಣುತ್ತದೆ. ಮತದಾನದ ಗೌಪ್ಯತೆ ಕಾಪಾಡುವಲ್ಲಿ ಹಾಗೂ ಆದೇಶ ಪಾಲಿಸುವಲ್ಲಿ ವಿಫಲವಾದ ಸಿಬ್ಬಂದಿ ಮತ್ತು ಯುವಕರ ವಿರುದ್ಧ ಕೇಂದ್ರ ಚುನಾವಣಾ ಆಯೋಗ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡು, ಕಠಿಣ ಶಿಕ್ಷೆ ನೀಡಿ, ಕಾನೂನಿನ ಮೇಲೆ ಜನತೆಗೆ ಇರುವ ಗೌರವವನ್ನು ಉಳಿಸಿಕೊಳ್ಳುವ ಅನಿವಾರ್ಯತೆಯಿದೆ. **–ಶಿವಕುಮಾರ, ತುಂಬಸೋಗೆ, ಹೆಚ್.ಡಿ.ಕೋಟೆ ತಾ॥**

■ ಪ್ರಾಮಾಣಿಕ ನೌಕರರು ಇದ್ದಾರೆ!

ಮಾನ್ಯರೆ,

ದಿನಾಂಕ 04.04.2024ರಂದು ಕೌಟುಂಬಿಕ ಧಾರ್ಮಿಕ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಮೈಸೂರಿನಿಂದ ಬಿಳಿಗಿರಿರಂಗನಬೆಟ್ಟಕ್ಕೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಒಂದರಲ್ಲಿ ಹೊರಟಿದ್ದೆ. ಬೆಟ್ಟಕ್ಕೆ ನೇರ ಬಸ್ ಕಡಿಮೆ ಇರುವುದರಿಂದ, ಪ್ರಯಾಣಿಕರು ಚಾಮರಾಜನಗರ ಅಥವಾ ಯಳಂದೂರಿಗೆ ಹೋಗಿ ಅಲ್ಲಿಂದ ಬೇರೆ ವಾಹನಗಳಲ್ಲಿ ಬೆಟ್ಟ ತಲುಪುವುದು ವಾಡಿಕೆ.

ನಾನೂ ಸಹ, ರಾಜ್ಯ ಸಾರಿಗೆ ಸಂಸ್ಥೆಯ ಬಸ್ ಒಂದನ್ನು ಹತ್ತಿ, ಮೈಸೂರಿನಿಂದ ಸಂತೆ ಮರಳ್ಳಿಗೆ 50 ರೂ. ಕೊಟ್ಟು ಟಿಕೆಟ್ ಪಡೆದುಕೊಂಡೆ. ಪ್ರಯಾಣ ದರ ರೂ 48 ರೂಪಾಯಿ ಆಗಿದ್ದರಿಂದ ನಿರ್ವಾಹಕಿ ನನಗೆ ಬಾಕಿ ರೂ 2/– ಅನ್ನು ಹಿಂದಿರಿಗಿಸಬೇಕಾಗಿತ್ತು. ನಾನು ಇಳಿಯುವ ನಿಲ್ದಾಣ ಇನ್ನೇನು ಬಂತು ಅನ್ನುವ ಹೊತ್ತಿಗೆ ಬಾಕಿ ಹಣ ರೂ 2/– ಜ್ಞಾಪಕ ಬಂತು.

" ಅಯ್ಯೋ ಆ ಎರಡು ರೂಪಾಯಿ ಹೇಗೆ ಕೇಳುವುದು", ಅದೂ ಮಹಿಳಾ ನಿರ್ವಾಹಕಿಯಿಂದ ಎಂಬ ಪ್ರಶ್ನೆ ತಲೆದೋರಿ, ಮನಸ್ಸು ಒಂದು ಕ್ಷಣ ಗೊಂದಲದ ಗೂಡಾಗುವ ವೇಳೆಗೆ ಸಡನ್ ಆಗಿ "ಸಂತೆ ಮರಳ್ಳಿ ಸ್ಟಾಪ್ ಇಳಿಯಿರಿ" ಎಂಬ ನಿರ್ವಾಹಕಿಯ ಘೋಷಣೆ ಕಿವಿಯನ್ನು ತಲುಪಿತ್ತು. ಕೊನೆಗೆ ಆ ಎರಡು ರೂಪಾಯಿಯನ್ನು ಕೇಳುವುದು ಬೇಡ ಎಂದು ನಿರ್ಧರಿಸಿ ನನ್ನ ಪಾಡಿಗೆ ಬಸ್ಸಿನಿಂದ ಇಳಿಯುವ ಹೊತ್ತಿಗೆ, ಆ ಪ್ರಾಮಾಣಿಕ ನಿರ್ವಾಹಕಿ, ಎರಡು ರೂ. ನಾಣ್ಯವನ್ನು ಸ್ವಯಂಪ್ರೇರಿತಳಾಗಿ ನನಗೆ ನೀಡಿದಾಗ ಮನಸ್ಸಿನಲ್ಲಿ ಏನೋ ಒಂದು ರೀತಿಯ ಮಧುರ ಭಾವನೆ ಉಂಟಾಯಿತು. ಇಂದಿನ ಭ್ರಷ್ಟ ವ್ಯವಸ್ಥೆಯಲ್ಲಿ ಕೂಡ ಪ್ರಾಮಾಣಿಕ ನೌಕರರು ಇದ್ದಾರಲ್ಲ ಎಂಬ ಸಂತೋಷ ಒಂದೆಡೆಯಾದರೆ, ಆ ಪ್ರಾಮಾಣಿಕ ಮಹಿಳಾ ನಿರ್ವಾಹಕಿಯ ಮುಖವನ್ನು ಮತ್ತೊಮ್ಮೆ ಕಣ್ತುಂಬಿಕೊಳ್ಳೋಣ ಎನ್ನುವ ಹೊತ್ತಿಗೆ ಬಸ್ ವೇಗವಾಗಿ ಮುಂದೆ ಚಲಿಸಿತ್ತು.

ನನಗೆ ನನ್ನ ಎರಡು ರೂಪಾಯಿ ವಾಪಸ್ ಬಂದಿತಲ್ಲ ಎಂಬ ಸಂತೋಷಕ್ಕಿಂತ ಹೆಚ್ಚಾಗಿ ಓರ್ವ ಪ್ರಾಮಾಣಿಕ ನೌಕರಳ ದರ್ಶನವಾಯಿತಲ್ಲ ಎಂಬ ಸಂತೋಷ ಅಧಿಕವಾಯಿತು. ನಂತರ, ಮತ್ತೊಂದು ಬಸ್ ಹಿಡಿದು ಬೆಟ್ಟಕ್ಕೆ ಹೋಗಿ ದೇವರ ದರ್ಶನ ಪಡೆದು ಮನೆಗೆ ಹಿಂದಿರಿಗಿದಾಗಲೂ ಸಹ ಆ ಎರಡು ರೂಪಾಯಿಯ ಪ್ರಸಂಗ ಮನದಂತರಾಳದಲ್ಲಿ ಗುಂಯ್ ಗುಟ್ಟುತಿತ್ತು. ಆ ಗುಂಗಿನಲ್ಲೆ ಮಲಗಿ ನಿಧಾನವಾಗಿ ನಿದ್ರಾದೇವಿಯ ತೆಕ್ಕೆಯೊಳಗೆ ಬಂಧಿಯಾದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ವಿವೇಕಾನಂದನಗರ, ಮೈಸೂರು.

■ ಬಸ್ ನಿಲ್ದಾಣವಿಲ್ಲದೆ ಹೈರಾಣ...!

ಮಾನ್ಯರೆ,

ಹೆಚ್.ಡಿ.ಕೋಟೆ ತಾಲೂಕಿನಲ್ಲಿರುವ ಹ್ಯಾಂಡ್‌ಪೋಸ್ಟ್ ಸರ್ಕಲಿನಲ್ಲಿ ಸರಿಯಾದ ರೀತಿಯ ಬಸ್ ನಿಲ್ದಾಣ ಇಲ್ಲದೆ ಪ್ರಯಾಣಿಕರಿಗೆ ತುಂಬಾ ತೊಂದರೆಯಾಗುತ್ತಿದೆ. ಹ್ಯಾಂಡ್‌ಪೋಸ್ಟ್ ಸರ್ಕಲಿನಲ್ಲಿ ಇರುವ ಮಾರ್ಗಗಳ ಮೂಲಕವೆ ಅಲ್ಲಿನ ಗ್ರಾಮಗಳ ಜನರು ಮೈಸೂರು, ಹೆಚ್.ಡಿ.ಕೋಟೆ, ಸರಗೂರು ಹಾಗೂ ಮಾನಂದವಾಡಿಗೆ ಹೋಗಬೇಕು. ಆದರೆ ಈ ಮಾರ್ಗಗಳಿಗೆ ಹೋಗಲು ನಿಲ್ಲುವ ಸ್ಥಳಗಳಲ್ಲಿ ಯಾವುದೇ ರೀತಿಯ ಬಸ್ ನಿಲ್ದಾಣ ಇಲ್ಲದೆ ಸಾರ್ವಜನಿಕರು, ವಿದ್ಯಾರ್ಥಿಗಳೂ ಗಂಟೆಗಟ್ಟಲೆ ಬಿಸಿಲಿನಲ್ಲಿ ನಿಂತು ಬಸ್‌ಗಳಿಗಾಗಿ ಕಾಯಬೇಕಾಗಿದೆ.

ಪ್ರಯಾಣಿಕರು ಬೇರೆ ಬೇರೆ ಕಡೆಗೆ ಕುಳಿತುಕೊಳ್ಳಲು ಹೋಗಿ ಬಸ್ ಬಂದಾಗ ಓಡಿ ಬರುವಾಗ ಬಿದ್ದು ಗಾಯಗಳಾಗಿದ್ದು ಉಂಟು. ಮಾನಂದವಾಡಿಗೆ ಹೋಗುವ ಮಾರ್ಗದಲ್ಲಿ ಮಾತ್ರ ಹಳೆಯ ಬಸ್ ನಿಲ್ದಾಣವಿದ್ದು, ಅದು ಗಲೀಜು, ಧೂಳು, ಕಸದಿಂದ ಕೂಡಿದೆ. ಆದ್ದರಿಂದ ಈ ಮಾರ್ಗಗಳಲ್ಲಿ ಬಸ್ ನಿಲ್ದಾಣವನ್ನು ನಿರ್ಮಿಸಿದರೆ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗುತ್ತದೆ. **–ಐಶ್ವರ್ಯ ಕೆ.ಎಸ್., ಪತ್ರಿಕೋದ್ಯಮ ವಿದ್ಯಾರ್ಥಿನಿ**




ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಬೆರಗು

'ನಿಮ್ಮ ಹೆಸರು ನಮ್ಮ ಮನದಲ್ಲಿದೆ' ಎಂದರಷ್ಟೇ ಸಾಕೆ?

ಮನುಷ್ಯ ಸಂಘಜೀವಿಯಾದ ಕಾರಣ ರಕ್ತ ಸಂಬಂಧ, ಬಂಧುಬಳಗ, ಸ್ನೇಹಿತರು ಇಲ್ಲದೇ ಅವನ ಜೀವನ ಯಾತ್ರೆ ಸಾಧ್ಯವಿಲ್ಲ, ಹಾಗೆಯೆ ಅವರುಗಳಿಲ್ಲದೆ ಅರ್ಥವೂ ಇಲ್ಲ. ನೋವು ನಲಿವುಗಳನ್ನು ಹಂಚಿಕೊಳ್ಳಲು ಯಾರಾದರೂ ಬೇಕೇ ಬೇಕು. ಮನೆಯ ಶುಭ ಕಾರ್ಯಕ್ಕೆ ಬಂದು ಅಕ್ಕಿ ಕಾಳು ಹಾಕಿ ಹಾರೈಸಲು ಬಂಧುಗಳು ಬೇಕು. ಹಾಗೆಯೆ ಮನೆಯ ಸದಸ್ಯರು ನಿಧನ ಹೊಂದಿದಾಗ, ಬಂದು ಮನೆಯವರಿಗೆ ಸಾಂತ್ವಾನ ಹೇಳಲು ಯಾರಾದರೂ ಬೇಕೇ ಬೇಕು. ಅವರೇ ನೆಂಟರಿಷ್ಟರು, ಬಂಧುಬಾಂಧವರು ಎನಿಸಿಕೊಳ್ಳುತ್ತಾರೆ. ನಾಗರೀಕತೆ ಬೆಳೆದಂತೆಲ್ಲಾ ನಾಜೂಕುತನವೂ ಬೆಳೆಯುತ್ತಿರುವುದು ಸಹಜ ಸಂಗತಿ. ಆದರೆ ಪ್ರೀತಿ ವಿಶ್ವಾಸದ ವಿಚಾರದಲ್ಲೂ ನಾಜೂಕುತನ ಇಣುತ್ತಿರುವುದು ಅಸಹಜ ಸಂಗತಿ ಎನ್ನಬಹುದು.



ಮದುವೆ ಕಾರ್ಯವೇ ಇರಲಿ, ಗೃಹ ಪ್ರವೇಶದ ಕಾರ್ಯವೇ ಇರಲಿ, ನಾಮಕರಣ, ತೊಟ್ಟಿಲು ಶಾಸ್ತ್ರ...ಹೀಗೆ ಯಾವುದೇ ಕಾರ್ಯವಿರಲಿ ಆಹ್ವಾನ ಪತ್ರಿಕೆಯನ್ನು ಆತ್ಮೀಯರಿಗೆ ನೀಡುವುದು ಹಿಂದಿನಿಂದಲೂ ಬಂದ ವಾಡಿಕೆ. ಆಹ್ವಾನ ಪತ್ರಿಕೆಯು ಲಿಖಿತ ರೂಪದ ಮಾಹಿತಿಯ ಜೊತೆಗೆ ಆತ್ಮೀಯವಾಗಿ ಆಮಂತ್ರಿಸುವ ಪತ್ರವಾಗಿರುತ್ತದೆ. ಹಿಂದೆ ಮನೆಗೆ ಆಹ್ವಾನಿಸಲು ಬಂದವರು ಮನೆಯವರ ಹೆಸರನ್ನು ಬರೆದು ಕೊಟ್ಟು ಸಾಂಪ್ರದಾಯಿಕವಾಗಿ ಆಹ್ವಾನಿಸುವ ಪದ್ಧತಿ ಇತ್ತು. ಆದರೆ ಇತ್ತೀಚಿನ ಆಧುನಿಕ ಕಾಲಘಟ್ಟದಲ್ಲಿ ಆಹ್ವಾನ ಪತ್ರಿಕೆ ನೀಡುವುದರಲ್ಲಿ ಮುದ್ರಿತ ಪತ್ರಿಕೆ ಅಷ್ಟೇ ಅಲ್ಲ, ಆಹ್ವಾನಿಸುವ ರೀತಿಯಲ್ಲಿಯೂ ಅನೇಕ ಮಾರ್ಪಾಡುಗಳಾಗಿವೆ. ಕರೆಯುವುದರಲ್ಲಿಯೂ ಪ್ರತಿಷ್ಠೆ ಮೆರೆಯುತ್ತಿದೆ. ಮನೆಗೆ ಬಂದು ಆಹ್ವಾನ ಪತ್ರಿಕೆ ನೀಡುವವರು ಮನೆಯವರ ಹೆಸರನ್ನು ಬರೆದು ಕೊಡುವ ಸಂಪ್ರದಾಯಕ್ಕೆ ಬಹುತೇಕರು ತಿಲಾಂಜಲಿ ಹೇಳಿರುತ್ತಾರೆ.

'ನಿಮ್ಮ ಹೆಸರು ನಮ್ಮ ಮನದಲ್ಲಿದೆ, ನಿಮಗೂ ಮತ್ತು ನಿಮ್ಮ ಕುಟುಂಬದವರಿಗೂ ಆತ್ಮೀಯ ಆಮಂತ್ರಣ' ಎಂದು ಆಹ್ವಾನ ಪತ್ರಿಕೆಯ ಕವರ್‌ನಲ್ಲಿಯೇ ಮುದ್ರಣವಾಗಿರುವುದು ಸರ್ವೇ ಸಾಮಾನ್ಯವಾಗಿದೆ. ಇದು ಪತ್ರಿಕೆ ಮುದ್ರಣ ಮಾಡುವವರ ತಂತ್ರವೋ? ಪ್ರೀತಿಯ ಪ್ರತೀಕವೋ? ಆಧುನಿಕತೆಯ ಧರ್ಮ/ಕರ್ಮವೋ? ಹೆಸರು ಬರೆಯಾಲಾಗದೇ ಇರುವ ಸೋಮಾರಿತನದ ಪರಮಾವಧಿಯೋ? ಒಟ್ಟಿನಲ್ಲಿ ಕೆಲವೇ ಕೆಲವರನ್ನು ಹೊರತುಪಡಿಸಿ ಬಹುತೇಕರು ಆಹ್ವಾನ ಪತ್ರಿಕೆಯಲ್ಲಿ ಈ ರೀತಿ ಮುದ್ರಣ ಮಾಡಿಸುವುದನ್ನು ರೂಢಿಗೆ ತಂದಿದ್ದಾರೆ. ಹಾಗೆಯೇ ಆಹ್ವಾನ ಪತ್ರಿಕೆ ಸ್ವೀಕರಿಸುವವರು ಸಹ ಯಾವುದೇ ತಕರಾರು ಇಲ್ಲದೆ ಸ್ವೀಕರಿಸುತ್ತಾ ತಮ್ಮ ಔದಾರ್ಯ ಮೆರೆಯುತ್ತಿದ್ದಾರೆ.

'ಅತಿಥಿ ದೇವೋ ಭವ' ಎಂದು ಅತಿಥಿಗಳನ್ನು ದೇವರಿಗೆ ಹೋಲಿಸಿ ಸತ್ಕರಿಸುವ ಸಂಪ್ರದಾಯ ನಮ್ಮ ಹೆಮ್ಮೆಯ ಭಾರತ ದೇಶದ್ದು. ಆ ಕಾರಣಕ್ಕೋ ಏನೋ ಹಿಂದೆ ಆಹ್ವಾನ ಪತ್ರಿಕೆಯಲ್ಲಿ ಶ್ರೀಮತಿ/ಶ್ರೀ ಎಂದು ಮುದ್ರಣವಾಗಿರುತ್ತಿತ್ತು ಮುಂದೆ ಖಾಲಿ ಇರುತ್ತಿತ್ತು. ಮನೆಗೆ ಬಂದವರು ಆಹ್ವಾನಿತರ ಹೆಸರನ್ನು ಬರೆದು ಕೊಡುತ್ತಿದ್ದರು. ಅನಕ್ಷರಸ್ಥರಾದರೆ ಹೆಸರು ಬರೆದು ಕೊಡಲು ಅಕ್ಷರಸ್ಥರೊಬ್ಬರನ್ನು ಜೊತೆಗೆ ಕರೆದೊಯ್ಯುತ್ತಿದ್ದರು. ಸ//ಕ್ಕೆ ಎಂದು ಹೆಸರಿನ ಮುಂದೆ ಬರೆಯುತ್ತಿದ್ದರು. ಸ//ಕ್ಕೆ ಎಂಬುದರ ಪೂರ್ಣರೂಪ ಸನ್ನಿಧಾನಕ್ಕೆ ಎಂಬುದಾಗಿತ್ತು. ಸನ್ನಿಧಾನ ಎಂಬ ಪದವನ್ನು ಮಠಮಾನ್ಯಗಳ ಪೀಠಾಧಿಪತಿಗಳಿಗೆ, ಧಾರ್ಮಿಕ ಕೇಂದ್ರಗಳ ಧರ್ಮಾಧಿಕಾರಿಗಳಿಗೆ ಬಳಸುವ ಅಭ್ಯಾಸ ಈಗಲೂ ಇದೆ. ಆದರೆ ಅತಿಥಿಗಳಿಗೆ ಅಷ್ಟು ಗೌರವ ಪೂರ್ವಕವಾಗಿ ಬರೆದು ಪತ್ರಿಕೆ ನೀಡಿ, ತಪ್ಪದೆ ಹಾಜರಾಗಬೇಕು ಎಂದು ಪ್ರೀತಿ ಪೂರ್ವಕವಾಗಿ ಆಗ್ರಹಿಸುತ್ತಿದ್ದರು. ಅಷ್ಟೊಂದು ಪ್ರೀತಿವಿಶ್ವಾಸ ಬಂಧುಗಳ ನಡುವೆ ಇರುತ್ತಿತ್ತು. ಕೆಲವರು ಹಿರಿಯರ ಕಾಲಿಗೆ ನಮಸ್ಕರಿಸಿ, ತಾವು ತಪ್ಪದೆ ಕಾರ್ಯಕ್ಕೆ ಆಗಮಿಸಿ ಆಶೀರ್ವದಿಸಬೇಕೆಂದು ಕೋರುತ್ತಿದ್ದರು. ಇಂದಿನ ದಿನಮಾನದಲ್ಲಿ ಎಲ್ಲವೂ ಯಾಂತ್ರಿಕ ಎನಿಸುತ್ತಿದೆ. ಸಂಬಂಧಗಳಲ್ಲಿ ಲೋಕಾರೂಢಿ ಆಹ್ವಾನ ಪತ್ರಿಕೆ ನೀಡುವುದು, ಕಾರ್ಯಕ್ಕೆ ಬನ್ನಿ ಎಂದು ಔಪಚಾರಿಕವಾಗಿ ಕರೆಯುವುದನ್ನು ಕಾಣಬಹುದು.

'ಬದಲಾವಣೆ ಜಗದ ನಿಯಮ' ಎಂಬುದನ್ನು ಒಪ್ಪಿಕೊಳ್ಳೋಣ. ಆದರೆ ಪ್ರೀತಿ ವಿಶ್ವಾಸಗಳು ಮನುಷ್ಯನ ಸಂಬಂಧಗಳ ಉಳಿವಿಗೆ ಉಚ್ಛ್ವಾಸ–ನಿಶ್ವಾಸಗಳಿದ್ದಂತೆ. ಅವುಗಳಿಗೆ ಕೊರತೆಯಾದರೆ ಸಂಬಂಧಗಳು ಸತ್ತು ಹೋಗಲು ಹೆಚ್ಚು ಸಮಯ ಬೇಕಿಲ್ಲ. ತಂತ್ರಜ್ಞಾನ ಮೆರೆಯುತ್ತಿರುವ ಕಾಲಘಟ್ಟದಲ್ಲಿ ಇಂದು ಸಮಯವನ್ನು ಉಳಿಸುವ ಕಾರಣಕ್ಕೆ ಆಹ್ವಾನ ಪತ್ರಿಕೆಯನ್ನು ವಾಟ್ಸಾಪ್ ಮೂಲಕ ರವಾನಿಸುವ ಅಭ್ಯಾಸ ರೂಢಿಯಲ್ಲಿದೆ. ಕೊರೊನಾ ಅವಧಿ ನಂತರ ಈ ವ್ಯವಸ್ಥೆಯನ್ನು ಬಹುಪಾಲು ಜನರು ಸಹ ಒಪ್ಪಿಕೊಂಡಿದ್ದಾರೆ. ಪತ್ರಿಕೆ ಮುದ್ರಣ ಮಾಡಿಸದ ಕೆಲವರಿಂದ ಪರಿಸರ ಉಳಿಸುವ ಪರೋಕ್ಷ ಕಾರ್ಯವೂ ಆಗುತ್ತಿದೆ ಅನ್ನಿ. ಕೆಲವರು ವಾಟ್ಸಾಪ್‌ನಲ್ಲಿ ಆಹ್ವಾನ ಪತ್ರಿಕೆ ಕಳುಹಿಸಿ, ಸಮಯದ ಅಭಾವದಿಂದ ಖುದ್ದು ಬಂದು ಕರೆಯಲು ಆಗಲಿಲ್ಲ, ತಪ್ಪದೆ ಕಾರ್ಯಕ್ಕೆ ಹಾಜರಾಗಿ ಹಾರೈಸಿ ಎಂದು ಕೋರುತ್ತಾರೆ. ಆದರೆ ಕೆಲವರು ಮಾತ್ರ ವಾಟ್ಸಾಪ್‌ನಲ್ಲಿ ಆಹ್ವಾನ ಪತ್ರಿಕೆ ಕಳುಹಿಸಿ, ಸೌಜನ್ಯಕ್ಕೆ ಒಂದು ಕರೆ ಮಾಡಿ ಕಾರ್ಯದಲ್ಲಿ ಭಾಗವಹಿಸುವಂತೆ ವಿನಂತಿಸುವುದಿಲ್ಲ. ಬೇಕಾದರೆ ಬರಲಿ, ಇಲ್ಲವಾದಲ್ಲಿ ಬಿಡಲಿ ಎಂಬ ಮನೋಭಾವ ಇದ್ದಂತೆ ಕಾಣುತ್ತದೆ. ಕಾರ್ಯಕ್ರಮದ ಮಾಹಿತಿ ತಿಳಿದಿರಲಿ ಎಂಬ ಕಾರಣಕ್ಕೆ ಈ ರೀತಿ ಮಾಡುತ್ತಾರೆನೋ ಎಂಬ ಅನುಮಾನ ಮೂಡದೇ ಇರದು !

ಬಾಂಧವ್ಯಗಳು ಹಿಂದಿನಷ್ಟು ಗಟ್ಟಿತನದಿಂದ ಕೂಡಿಲ್ಲದೆ ಎಲ್ಲವೂ ಎಲ್ಲೋ ಒಂದು ಕಡೆ ಜಾಳು ಜಾಳಾಗುತ್ತಿವೆ ಎನಿಸುತ್ತದೆ. ಪ್ರೀತಿ ಪೂರ್ವಕವಾಗಿ ಇರಬೇಕಾದ ಸಂಬಂಧಗಳು ಔಪಚಾರಿಕವಾಗಿ ಮುಂದುವರಿಯುತ್ತಿರುವಂತೆ ಭಾಸವಾಗುತ್ತಿದೆ. ಕಾರ್ಯಕ್ಕೆ ಆಹ್ವಾನಿಸುವುದು ಎಷ್ಟು ಯಾಂತ್ರಿಕವಾಗಿರುತ್ತದೆಯೋ, ಕಾರ್ಯದಲ್ಲಿ ಭಾಗವಹಿಸುವವರು ಸಹ ಅಷ್ಟೇ ಯಾಂತ್ರಿಕವಾಗಿ ಪಾಲ್ಗೊಳ್ಳುತ್ತಿರುವುದನ್ನು ಕಾಣಬಹುದು. ಎಲ್ಲವೂ ತೋರಿಕೆಗೆ ನಡೆಯುತ್ತಿರುವಂತೆ ಕಾಣುತ್ತದೆ. ಕೃತಕ ನಗೆ, ಕೃತಕ ಕುಶಲೋಪಚಾರ, ಕೃತಕ ವಿಶ್ವಾಸ... ಇವುಗಳನ್ನೆಲ್ಲಾ ನೋಡುತ್ತಿದ್ದರೆ ಮುಖವಾಡಗಳ ಸಂತೆಯಂತೆ ಕಾಣುತ್ತದೆ. ಊಟ ಮಾಡಿಕೊಂಡು ಹೋಗಿ ಎಂದು ಹೇಳುವುದು ಸಹ ಬಹಳ ಕೃತಕವಾಗಿರುತ್ತದೆ. ಕಾರ್ಯಕ್ಕೆ ಬಂದವರು ಅಷ್ಟೆ, ಸಮಯ ಹೊಂದಾಣಿಕೆಯಾದರೆ ಊಟ–ತಿಂಡಿ ಮಾಡುತ್ತಾರೆ. ಇಲ್ಲವಾದಲ್ಲಿ ಅಲ್ಲಿಂದ ಜಾಗ ಖಾಲಿ ಮಾಡುತ್ತಾರೆ. ನೀವು ಊಟ ಮಾಡದೆ ಹೇಗೆ ಹೊರಡುವಿರಿ? ಎಂದು ವಿಚಾರಿಸುವವರು ತಾನೇ ಯಾರಿರುತ್ತಾರೆ, ಹೇಳಿ ?

"ಏನು ಬಂದಿರಿ ಹದುಳವಿದ್ದಿರೆ? ಎಂದಡೆ
ನಿಮ್ಮ ಮೈಸಿರಿ ಆರಿಹೋಹುದೇ?
ಕುಳ್ಳಿರೆಂದರೆ ನೆಲ ಕುಳಿಹೋಹುದೇ?
ಒಡನೆ ನುಡಿದರೆ ಶಿರ–ಹೊಟ್ಟೆ
ಒಡೆವುದೆ?........"

ಎಂದು ವಚನಕಾರರಾದ ಬಸವಣ್ಣನವರು ತಮ್ಮ ವಚನವೊಂದರಲ್ಲಿ ಅತಿಥಿ ಸತ್ಕಾರ ಮಾಡುವಾಗ ಕೆಲವರು ಅನುಸರಿಸುವ ಅಹಂಕಾರದ ನಡೆಯನ್ನು ನೇರವಾಗಿ ಖಂಡಿಸಿದ್ದಾರೆ. ಮನೆಗೆ ಬಂದ ಅತಿಥಿ ಗಳನ್ನು ಕುಶಲ ವಿಚಾರಿಸುವ ಕನಿಷ್ಠ ಸೌಜನ್ಯವನ್ನು ಹೊಂದಿರದ ಅನೇಕರು ನಮ್ಮ ನಿಮ್ಮ ನಡುವೆ ಇದ್ದಾರೆ. ಬರುವ ಅತಿಥಿಗಳು ಅಷ್ಟೆ, ಕುದುರೆ ಮೇಲೆ ಬಂದಿರುತ್ತಾರೆ. ಕಾರ್ಯಕ್ಕೆ ಕರೆಯುವವರು ಚುನಾವಣೆ ಸಂದರ್ಭದಲ್ಲಿ ಅಭ್ಯರ್ಥಿ ಕಡೆಯ ಕಾರ್ಯಕರ್ತರು ಕರಪತ್ರ ಹಂಚುವಂತೆ ಆಹ್ವಾನ ಪತ್ರಿಕೆ ಕೊಟ್ಟು ಅಲ್ಲಿಂದ ಓಡಲು ಹವಣಿಸುತ್ತಿರುತ್ತಾರೆ. ಸತ್ಕರಿಸುವ ಉದಾರತೆ ಅನೇಕರಲ್ಲಿ ಇದ್ದರೂ ಅದನ್ನು ಸ್ವೀಕರಿಸುವ ಹೃದಯವಂತಿಕೆ ಕೆಲವರಿಗೆ ಇರುವುದಿಲ್ಲ. ಹಾಗೆಯೇ ಉಪಚರಿಸುವ ಉದಾರತೆಯೂ ಅನೇಕರಿಗೆ ಇರುವುದಿಲ್ಲ. ಎಲ್ಲವೂ ವ್ಯವಹಾರದಂತೆ ಭಾಸವಾಗುತ್ತದೆ.

ಅಕ್ಷರಗಳು, ಚಿಹ್ನೆಗಳೂ, ಬರಹಗಳು, ಇವೆಲ್ಲವೂ ಭಾವನೆಗಳ ಸಂಕೇತಗಳು. ಶುಭ ಕಾರ್ಯದ ಸ್ಥಳಗಳಿಗೆ ಹೋದಾಗ ಅತಿಥಿಗಳನ್ನು ಸ್ವಾಗತಿಸಲು ದೊಡ್ಡ ಸ್ವಾಗತ ಕಮಾನು, ಜಗಮಗಿಸುವ ವಿದ್ಯುತ್ ದೀಪಾಲಂಕಾರ, ವಧುವರರ ಹೆಸರು, ಸ್ವಾಗತ ಕೋರುವ ಕುಟುಂಬದವರ ಹೆಸರುಗಳು ರಾರಾಜಿಸುತ್ತಿರುತ್ತವೆ. ಕಣ್ಣು ಕೋರೈಸುವ ಕಾರ್ಯದ ಮನೆಯಲ್ಲಿ/ ಛತ್ರದಲ್ಲಿ ಹೃದಯಕ್ಕೆ ಸ್ಪಂದಿಸುವ ಸಂಗತಿಗಳೇ ಕಾಣೆಯಾಗಿರುತ್ತವೆ. ಸ್ವಾಗತಿಸಲು ಹಾಗೂ ತಾಂಬೂಲ ನೀಡುವುದಕ್ಕೂ ಸಹ ಬಾಡಿಗೆ ಜನ ಬಂದಿರುತ್ತಾರೆ. ಅತಿಥೇಯರು ಫೋಟೋ–ವಿಡೀಯೋದಲ್ಲಿ ಬ್ಯುಸಿಯಾಗಿರುತ್ತಾರೆ.

ಇಂದು ಆಹ್ವಾನ ಪತ್ರಿಕೆಗಳು ಕೇವಲ ಮಾಹಿತಿ ಪತ್ರವಾಗಿ ಉಳಿದಿಲ್ಲ, ಬದಲಿಗೆ ಪ್ರತಿಷ್ಠೆಯ ಸಂಕೇತವಾಗಿವೆ. ಒಂದೇ ಕಾರ್ಯಕ್ಕೆ ನಾಲ್ಕಾರು ಗುಣಮಟ್ಟದ ಆಹ್ವಾನ ಪತ್ರಿಕೆಗಳನ್ನು ಮಾಡಿಸುವುದು ಉಳ್ಳವರ ವಾಡಿಕೆಯಾಗಿದೆ. ಸಿರಿವಂತರಿಗೆ ಬೇರೆ, ಬಡವರಿಗೆ ಬೇರೆ, ಹತ್ತಿರದವರಿಗೆ ಬೇರೆ, ದೂರದವರಿಗೆ ಬೇರೆ, ಸ್ನೇಹಿತರಿಗೆ ಬೇರೆ.. ಹೀಗೆ ವಿವಿಧ ಬಗೆಯ ಕಾರ್ಡ್‌ಗಳು ಸಿದ್ಧವಾಗಿ ಹಂಚಲ್ಪಡುತ್ತವೆ. ಆಹ್ವಾನ ಪತ್ರಿಕೆಯ ಮೂಲಕ ತಮ್ಮ ಸಿರಿವಂತಿಕೆಯನ್ನು ಪ್ರದರ್ಶಿಸುವ ಬದಲು, ಕಾರ್ಡ್ ನೀಡುವಾಗ ಆಡುವ ಮಾತುಗಳಿಂದ ತಮ್ಮ ಹೃದಯವಂತಿಕೆಯನ್ನು ತೋರುವುದು ಬಹು ಅಗತ್ಯವಾದುದು. ಅನೇಕರಿಗೆ ನಾವು ಸಿರಿವಂತರು, ಕಾರ್ಡ್ ಕೊಟ್ಟ ಮೇಲೆ ಬರದೇ ಇರುತ್ತಾರೆಯೇ ಎಂಬ ಗರ್ವ ಇರುತ್ತದೆ. ಸಿರಿವಂತಿಕೆಗೆ ಜನ ಬೆಲೆ ಕೊಡುವುದಕ್ಕಿಂತ ಹೃದಯವಂತಿಕೆಗೆ ಜನ ಬೆಲೆ ಕೊಡುತ್ತಾರೆ ಎಂದು ಎಷ್ಟೋ ಸಿರಿವಂತರಿಗೆ ತಿಳಿಯದೇ ಇರುವುದು ವಿಷಾದನೀಯ.

ಎಷ್ಟೋ ಕಾರ್ಯಗಳಿಗೆ ಜನ ಭಾಗಿಯಾಗುವುದು ಮುಯ್ಯಿಗೆ ಮುಯ್ಯಿ ತೀರಿಸಲು ಎನ್ನಬಹುದು. ನಮ್ಮ ಕಾರ್ಯಕ್ಕೆ ಬಂದಿದ್ದರು, ನಾವು ಸಹ ಅವರ ಕಾರ್ಯಕ್ಕೆ ಹಾಜರಾಗುವುದು ಧರ್ಮ ಎಂದು ಅನೇಕರು ಕಾರ್ಯಗಳಿಗೆ ಬರುತ್ತಾರೆ. ಕಾರ್ಯಕ್ಕೆ ಭಾಗವಹಿಸಿ ಅವರಿಗೆ ಶುಭಾ ಶಯ ಕೋರಿ, ಉಡುಗೊರೆ ನೀಡಿ, ಅವರು ಏರ್ಪಡಿಸಿರುವ ಭೋಜನ ಕೂಟದಲ್ಲಿ ಮನಃಪೂರ್ವಕವಾಗಿ ಭಾಗ ವಹಿಸಿದರೆ ಮಾತ್ರ ಕಾರ್ಯಕ್ಕೆ ಒಂದು ಕಳೆ ಬರುತ್ತದೆ. ಕಾರ್ಯಕ್ಕೆ ಬಂದ ಬಂಧುಗಳನ್ನು ಆತ್ಮೀಯತೆಯಿಂದ ಮಾತನಾಡಿಸುವಷ್ಟು ಕಾರ್ಯ ಮಾಡುವ ಮನೆಯ ಜನರಲ್ಲಿ ಇಲ್ಲದೇ ಇರುವುದನ್ನು ಕಾಣಬಹುದು. ಫೋಟೋ ಹಾಗೂ ವಿಡೀಯೋಗೋಸ್ಕರ ಕೃತಕ ನಗೆ ಬೀರಿ, ಕೈಕುಲುಕಿ ಅಲ್ಲಿಂದ ಬೇಗ ಬೀಳ್ಕೊಡಲು ಹವಣಿಸುತ್ತಿರುತ್ತಾರೆ. ಬಂಧುಗಳು ಕಾರ್ಯಕ್ಕೆ ಬಂದ ಸಂಭ್ರಮ ಅವರ ಮುಖದಲ್ಲಿ ಮನೆ ಮಾಡುವುದೇ ಇಲ್ಲ. ಇದನ್ನೆಲ್ಲಾ ಕಂಡಾಗ, ಈ ಕಾರ್ಯದಲ್ಲಿ ಏನೂ ವಿಶೇಷವಿಲ್ಲ, ಇದು ಸಹ ಮತ್ತೊಂದು ಕಾರ್ಯ ಎನಿಸಿಬಿಡುತ್ತದೆ.

ಇಂದು ಆತ್ಮೀಯತೆ ಕಡಿಮೆಯಾಗುತ್ತಿದೆ, ಆಡಂಬರ ಹೆಚ್ಚಾಗುತ್ತಿದೆ, ಆದರ್ಶ ಕಡಿಮೆಯಾಗುತ್ತಿದೆ, ಆಕರ್ಷಣೆ ಹೆಚ್ಚಾಗುತ್ತಿದೆ. ವಿಶ್ವಾಸ ಕಡಿಮೆಯಾಗುತ್ತಿದೆ, ವಿಜೃಂಭಣೆ ಹೆಚ್ಚಾಗುತ್ತಿದೆ. ಪ್ರೀತಿ ಕಡಿಮೆಯಾಗುತ್ತಿದೆ, ತೋರಿಕೆ ಹೆಚ್ಚಾಗುತ್ತಿದೆ. ಸಂಭ್ರಮ ಕಡಿಮೆಯಾಗುತ್ತಿದೆ, ಸಿಂಗಾರ ಹೆಚ್ಚಾಗುತ್ತಿದೆ. ಮನುಷ್ಯ ತನ್ನ ಬಹುಮುಖ್ಯ ಘಟ್ಟಗಳಲ್ಲಿ ಬಂಧುಬಳಗಳನ್ನು ಸೇರಿ ಸಂಭ್ರಮಿಸುವುದು ವಾಡಿಕೆ. ಆದರೆ ಅದು ತೋರಿಕೆ, ಯಾಂತ್ರಿಕತೆ ಹಾಗೂ ಕೃತಕತೆಯಿಂದ ಕೂಡಿರಬಾರದು. ತಾನು ಖುಷಿ ಪಟ್ಟು, ಇತರರು ಖುಷಿ ಪಡುವಂತಹ ವಾತಾವರಣ ಸೃಷ್ಟಿಯಾಗಬೇಕು. ಆಗ ಏರ್ಪಡಿಸುವ ಕಾರ್ಯಕ್ಕೆ ಒಂದು ಅರ್ಥ ಬರುತ್ತದೆ. ಇಲ್ಲವಾದಲ್ಲಿ ಎಲ್ಲವೂ ನೀರಸ ಹಾಗೂ ಅರ್ಥಹೀನವಾಗಿಬಿಡುತ್ತದೆ. ಏನಂತೀರಿ ?

" ಇಂದು ಆತ್ಮೀಯತೆ ಕಡಿಮೆಯಾಗುತ್ತಿದೆ, ಆಡಂಬರ ಹೆಚ್ಚಾಗುತ್ತಿದೆ, ಆದರ್ಶ ಕಡಿಮೆಯಾಗುತ್ತಿದೆ, ಆಕರ್ಷಣೆ ಹೆಚ್ಚಾಗುತ್ತಿದೆ. ವಿಶ್ವಾಸ ಕಡಿಮೆಯಾಗುತ್ತಿದೆ, ವಿಜೃಂಭಣೆ ಹೆಚ್ಚಾಗುತ್ತಿದೆ. ಪ್ರೀತಿ ಕಡಿಮೆಯಾಗುತ್ತಿದೆ, ತೋರಿಕೆ ಹೆಚ್ಚಾಗುತ್ತಿದೆ. ಸಂಭ್ರಮ ಕಡಿಮೆಯಾಗುತ್ತಿದೆ, ಸಿಂಗಾರ ಹೆಚ್ಚಾಗುತ್ತಿದೆ. ಮನುಷ್ಯ ತನ್ನ ಬಹುಮುಖ್ಯ ಘಟ್ಟಗಳಲ್ಲಿ ಬಂಧು ಬಳಗವನ್ನು ಸೇರಿ ಸಂಭ್ರಮಿಸುವುದು ವಾಡಿಕೆ. ಆದರೆ ಅದು ತೋರಿಕೆ, ಯಾಂತ್ರಿಕತೆ ಹಾಗೂ ಕೃತಕತೆ ಇಂದ ಕೂಡಿರಬಾರದು. ತಾನು ಖುಷಿ ಪಟ್ಟು, ಇತರರು ಖುಷಿ ಪಡುವಂತಹ ವಾತಾವರಣ ಸೃಷ್ಟಿಯಾಗಬೇಕು. ಆಗ ಏರ್ಪಡಿಸುವ ಕಾರ್ಯಕ್ಕೆ ಒಂದು ಅರ್ಥ ಬರುತ್ತದೆ. ಇಲ್ಲವಾದಲ್ಲಿ ಎಲ್ಲವೂ ನೀರಸ ಹಾಗೂ ಅರ್ಥಹೀನವಾಗಿಬಿಡುತ್ತದೆ. "

ಪದ ತಾಂಬೂಲ:
ಬಾಂಧವ್ಯಕ್ಕೆ ಸಿರಿವಂತಿಕೆಗಿಂತ ಹೃದಯವಂತಿಕೆಯೇ ಜೀವಾಳ

ಹನಿ ನೀರಿಗೂ ಹಾಹಾಕಾರ: ಹಲವೆಡೆ ನೀರು ಪೋಲು





ಮೈಸೂರು ನಗರದ ಲಕ್ಷ್ಮಿಪುರಂನಲ್ಲಿರುವ ಬಿಎಸ್‌ಎನ್‌ಎಲ್ ಕಚೇರಿಯ ಮನೆ ಎದುರು ನೀರನ್ನು ಪೋಲು ಮಾಡುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಏ.28(ಎಂಕೆ)– ಬರಗಾಲ, ಸುಡುವ ಬಿಸಿಲಿನ ತಾಪಕ್ಕೆ ಜೀವಿಗಳೆಲ್ಲಾ ಬಾಯಾರಿಕೆಯಿಂದ ಬಸವಳಿಯುತ್ತಿರುವ ಹೊತ್ತಲ್ಲಿ 'ಜೀವ ಜಲ'ದ ಜೀವ ತೆಗೆಯುವ ಅನಾಗರಿಕತೆಯ ವರ್ತನೆ ಮೈಸೂರು ನಗರಾದಾದ್ಯಂತ ನಡೆಯುತ್ತಿದೆ...!

ಕುಡಿಯುವ ಹನಿ ನೀರಿಗೂ ಬೆಲೆ ಕಟ್ಟಬೇಕಾಗಿರುವ ಕಾಲದಲ್ಲಿ ನೀರಿನ ಮಹತ್ವವನ್ನು ತಿಳಿಯದೆ, ನೀರಿನ ಅವಶ್ಯಕತೆಯ ಅರಿವಿಲ್ಲದೆ ಪೋಲು ಮಾಡುವವರ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಮನೆ ಮುಂದಿನ ರಸ್ತೆಗೆ ನೀರು ಹರಿಸುವುದು, ಗಿಡಗಳಿಗೆ ನೀರು ಹಾಕುವ ನೆಪದಲ್ಲಿ ಬೇಕಾಬಿಟ್ಟಿ ಚೆಲ್ಲುವುದು ಅತೀಯಾಗಿದೆ.

ಐದತ್ತು ನಿಮಿಷಕ್ಕೊಮ್ಮೆ ಬಾಯಾರಿಕೆಯಿಂದ ಗಂಟಲು ಒಣಗುವ ಬೇಸಿಗೆಯಲ್ಲಿ ನೀರಿನ ಮಿತಿ ಮೀರಿದ ಹಾಗೂ ಅನಾವಶ್ಯಕ ಬಳಕೆಯಿಂದಾಗಿ ನೀರಿನ ಹಾಹಾಕಾರ ಮತ್ತಷ್ಟು ಹೆಚ್ಚಾಗುವಂತೆ ಮಾಡಲಾಗುತ್ತಿದೆ. ಅಷ್ಟು ಮಾತ್ರವಲ್ಲದೆ ಕುಡಿಯುವ ನೀರಿನಲ್ಲೇ ಕಾರು, ಸ್ಕೂಟರ್, ಬೈಕ್ ಇನ್ನಿತರೆ ವಾಹನಗಳ ತೊಳೆಯುವುದು ಸಹ ಹೆಚ್ಚಾಗಿದೆ.

ಕಠಿಣ ಕ್ರಮ, ದಂಡ...!

ಕುಡಿಯುವ ನೀರನ್ನು ಅನವಶ್ಯಕವಾಗಿ ಪೋಲು ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಅಲ್ಲದೆ ನೀರಿನ ಬಿಲ್ ಮೇಲೆಯೇ ದಂಡ ವಿಧಿಸಲಾಗುವುದು. ಕುಡಿಯುವ ನೀರನ್ನು ಪೋಲು ಮಾಡುವುದು ಕಂಡು ಬಂದಲ್ಲಿ ಕೂಡಲೇ ವಾಣಿ ವಿಲಾಸ ವಾಟರ್ ವರ್ಕ್ಸ್‌ನ ಕಂಟ್ರೋಲ್ ರೂಂ ನಂ.9449841196 ಗೆ ಸಂಪರ್ಕಿಸಿ ದೂರು ನೀಡಬಹುದು.

- ಅಶ್ವಿನ್, ಕಾರ್ಯನಿರ್ವಾಹಕ ಇಂಜಿನಿಯರ್, *ಮೈಸೂರು ನಗರಪಾಲಿಕೆ ವಾಣಿವಿಲಾಸ ವಾಟರ್ ವರ್ಕ್ಸ್*

ಮೈಸೂರಿಗೆ ಪ್ರತಿನಿತ್ಯ ವಿವಿಧ ಜಲಸಂಗ್ರಹ ಘಟಕಗಳಿಂದ ಸಮಾರು 300 ಎಂಎಲ್‌ಡಿ ಕುಡಿಯುವ ನೀರು ಸರಬರಾಜಾಗುತ್ತಿದ್ದು, ಅದರಲ್ಲಿ ಸುಮಾರು 50–70 ಎಂಎಲ್‌ಡಿ ನೀರನ್ನು ಪೋಲು ಮಾಡಲಾಗುತ್ತದೆ. ಮನೆ ಮುಂದೆ ನೀರು ಹರಿಸುವುದರ ಜೊತೆಗೆ ನಲ್ಲಿಗಳನ್ನು ಬಂದ್ ಮಾಡದಿರುವುದು, ಪೈಪ್‌ಲೈನ್ ಸೋರಿಕೆಯಿಂದಲೂ ನೀರು ವ್ಯರ್ಥವಾಗುತ್ತಿದೆ.

ಕುಡಿಯಲಷ್ಟೇ ನೀರು

ಮೈಸೂರು ನಗರದಲ್ಲಿ ಕುಡಿಯಲಷ್ಟೇ ನೀರನ್ನು ಪೂರೈಸಲಾಗುತ್ತಿದೆ. ಕಮರ್ಷಿಯಲ್ ಹಾಗೂ ಗೃಹಬಳಕೆಯಲ್ಲದ ಕಾರ್ಯ ಚಟುವಟಿಕೆಗಳಿಗೆ ನೀರಿನ ಪೂರೈಕೆ ಬಂದ್ ಮಾಡಲಾಗಿದೆ. ಹಾಗೆಯೇ ಪೈಪ್‌ಲೈನ್ ಸೋರಿಕೆ ಕಡೆಯೂ ಗಮನ ಹರಿಸಲಾಗಿದೆ ಎಂದು ವಾಣಿವಿಲಾಸ ವಾಟರ್ ವರ್ಕ್ಸ್‌ನ ಕಾರ್ಯನಿರ್ವಾಹಕ ಇಂಜಿನಿಯರ್ ಅಶ್ವಿನ್ ತಿಳಿಸಿದರು.

ರಾಜ್ಯದಲ್ಲಿ ಬರಗಾಲ ಆವರಿಸಿ, ಕುಡಿಯುವ ನೀರಿಗೆ ತೊಂದರೆ ಅರಿವಿದ್ದರೂ ಅವಿವೇಕತನದಿಂದ ವರ್ತಿಸುತ್ತಿದ್ದಾರೆ. ಮನೆ ಮುಂದಿನ ರಸ್ತೆಯಲ್ಲಿ ಬೇಕಾಬಿಟ್ಟಿ ನೀರು ಹರಿಸುವವರ ವಿರುದ್ಧ ಕಠಿಣ ಕ್ರಮಕೈಗೊಳ್ಳಬೇಕೆಂದು. ದುಬಾರಿ ದಂಡ ವಿಧಿಸಬೇಕು ಎಂದು ಪ್ರಜ್ಞಾವಂತ ನಾಗರಿಕರು ಒತ್ತಾಯಿಸಿದ್ದಾರೆ.

ಪ್ರಕೃತಿ ದತ್ತವಾಗಿ ದೊರೆತಿರುವ ಅಮೂಲ್ಯ ಬಳುವಳಿಗಳಲ್ಲಿ ನೀರು ಪ್ರಮುಖವಾದುದ್ದಾಗಿದ್ದು, ಬರಗಾಲದ ಸಂದರ್ಭದಲ್ಲಿ ನೀರಿನ ಸದ್ಬಳಕೆ ಹಾಗೂ ಮಿತಿ ಬಳಕೆ ಅವಶ್ಯವಾಗಿದೆ. ಈ ಕುರಿತು ಮೈಸೂರು ನಗರಪಾಲಿಕೆ ಸರಣಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಜೊತೆಗೆ ನೀರನ್ನು ಪೋಲು ಮಾಡುವವರ ವಿರುದ್ಧ ಭಾರೀ ಪ್ರಮಾಣದ ದಂಡ ವಿಧಿಸಬೇಕು ಎಂದು ಒತ್ತಾಯಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಇತ್ತೀಚೆಗೆ ಹುಟ್ಟುಹಬ್ಬ ಆಚರಿಸಿಕೊಂಡ ಮೈ ಟಾರ್ಪಾಲಿನ್ಸ್ ಮಾಲೀಕ ಕೆ.ಪ್ರದೀಪ್ ಸಿಂಗ್ ಅವರನ್ನು ಮಂಜುಗೌಡ ಮತ್ತು ಸಾಗರ್ ಅಭಿನಂದಿಸಿ, ಶುಭ ಕೋರಿದರು.

ಮೈಸೂರಲ್ಲಿ ಯುವಕನಿಗೆ ಇರಿತ

ಮೈಸೂರು, ಏ.28(ಎಸ್‌ಪಿಎನ್)– ಹಳೇ ದ್ವೇಷ ಹಿನ್ನೆಲೆಯಲ್ಲಿ ಯುವಕ ನೋರ್ವನಿಗೆ ಗುಂಪೊಂದು ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿರುವ ಘಟನೆ ಮೈಸೂರಿನ ಅಗ್ರಹಾರದ ನೂರೊಂದು ಗಣಪತಿ ದೇವಸ್ಥಾನದ ಬಳಿ ಭಾನುವಾರ ಮಧ್ಯಾಹ್ನ ನಡೆದಿದೆ.

ಮೈಸೂರು ಮೇದರ ಕೇರಿ ನಿವಾಸಿ ಕುಮಾರ್(24) ಕಾರ್ಯ ನಿಮಿತ್ತ ನೂರೊಂದು ಗಣಪತಿ ದೇವಸ್ಥಾನ ಬಳಿ ಬಂದಿದ್ದ ಕುಮಾರ್‌ನನ್ನು ಹಿಂಬಾಲಿಸಿ ಸ್ಕೂಟರ್‌ನಲ್ಲಿ ಬಂದ ಮೂವರು ದುಷ್ಕರ್ಮಿಗಳ ತಂಡ, ಚಾಕುವಿನಿಂದ ಮೂರ್‍ನಾಲ್ಕು ಬಾರಿ ಇರಿದು ಕೊಲೆಗೆ ಯತ್ನಿಸಿದ್ದಾರೆ.

ಈ ವೇಳೆ ಕುಮಾರ್, ಪ್ರಾಣ ಉಳಿಸಿಕೊಳ್ಳಲು ಚೀರಾಟ ಮಾಡಿದಾಗ, ಗಾಬರಿಗೊಂಡ ದುಷ್ಕರ್ಮಿಗಳು ಸ್ಥಳದಿಂದ ಕಾಲ್ಕಿತ್ತಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕೃಷ್ಣರಾಜ ಠಾಣೆ ಪೊಲೀಸರು, ರಕ್ತದ ಮಡುವಿನಲ್ಲಿ ಬಿದ್ದಿದ್ದ ಕುಮಾರ್‌ನನ್ನು ಸಾರ್ವಜನಿಕರ ಸಹಾಯದಿಂದ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಈ ಸಂಬಂಧ ಕುಮಾರ್ ಪೋಷಕರು ಕೃಷ್ಣರಾಜ ಠಾಣೆಯಲ್ಲಿ ದೂರು ದಾಖಲಿಸಿದ್ದು, ಇದರನ್ವಯ ತನಿಖೆ ಮುಂದುವರೆಸಿ, ದುಷ್ಕರ್ಮಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

ದೇವಗಳ್ಳಿಯಲ್ಲಿ ಅಂಬೇಡ್ಕರ್ ಜಯಂತಿ



ಮೈಸೂರು ತಾಲೂಕು ದೇವಗಳ್ಳಿ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಯಿತು.

ಮೈಸೂರು, ಏ.28(ಎಸ್‌ಬಿಡಿ)– ಮೈಸೂರು ತಾಲೂಕು ದೇವಗಳ್ಳಿ ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 133ನೇ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಯಿತು.

ಗ್ರಾಮದ ಯಜಮಾನರು, ಮುಖಂಡರು, ಯುವಕರ ಸಂಘದ ಸದಸ್ಯರು ಹಾಗೂ ಗ್ರಾಮಸ್ಥರು ಡಾ.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಈ ವೇಳೆ ದಲಿತ ಸಂಘರ್ಷ ಸಮಿತಿ (ದಸಂಸ) ರಾಜ್ಯ ಸಂಘಟನಾ ಸಂಯೋಜಕ ದೇವಗಳ್ಳಿ ಸೋಮಶೇಖರ್ ಮಾತನಾಡಿ, ವಿಶ್ವವೇ ಅಂಬೇಡ್ಕರ್ ಜಯಂತಿಯನ್ನು ಸಂಭ್ರಮದಿಂದ ಆಚರಿಸುತ್ತಿದೆ. ಅಂಬೇಡ್ಕರ್ ಅವರು ನೀಡಿರುವ ಸರ್ವರಿಗೂ ಸಮಾನತೆ ಕಲ್ಪಿಸುವ ವಿಶ್ವ ಶ್ರೇಷ್ಠ ಸಂವಿಧಾನವನ್ನು ಬದಲಾಯಿಸುವ ಪ್ರಯತ್ನ ನಡೆದಿರುವುದು ಖಂಡನೀಯ. ಅಂಬೇಡ್ಕರ್ ಅನುಯಾಯಿಗಳು ಅವರ ಆದರ್ಶಗಳನ್ನು ಪಾಲಿಸುವುದರ ಜೊತೆಗೆ ಸಂವಿಧಾನ ರಕ್ಷಿಸಿಕೊಳ್ಳುವ ನಿಟ್ಟಿನಲ್ಲಿ ಜಾಗೃತರಾಗಬೇಕಿದೆ ಎಂದರು.

ಗ್ರಾಮದವರೇ ಆದ ಕರ್ನಾಟಕ ಮುಕ್ತ ವಿಶ್ವ ವಿದ್ಯಾಲಯದ ಪ್ರಾಧ್ಯಾಪಕ ಡಾ.ಸಿ.ಮಹಾದೇವಮೂರ್ತಿ ಮಾತನಾಡಿ, ಬಾಬಾ ಸಾಹೇಬ ಅಂಬೇಡ್ಕರ್ ಅವರು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದರು. ಹಾಗೆಯೇ ನಮ್ಮ ಗ್ರಾಮದ ಯುವಕರು ವಿದ್ಯಾಭ್ಯಾಸ ಮೊಟಕುಗೊಳಿಸದೆ ಉನ್ನತ ಶಿಕ್ಷಣ ಪಡೆದು ಉತ್ತಮ ಬದುಕು ರೂಪಿಸಿಕೊಳ್ಳಬೇಕು. ಅದಕ್ಕೆ ಪೂರಕವಾಗಿ ಮುಂದಿನ ದಿನಗಳಲ್ಲಿ ಗ್ರಾಮದಲ್ಲಿ ಗ್ರಂಥಾಲಯ ಸ್ಥಾಪನೆಗೆ ಪ್ರಯತ್ನಿಸುವುದಾಗಿ ತಿಳಿಸಿದರು.

ದಸಂಸ ಜಿಲ್ಲಾ ಸಂಚಾಲಕ ಶಂಭುಲಿಂಗಸ್ವಾಮಿ ಮಾತನಾಡಿ, ಯುವಕರು ಅಂಬೇಡ್ಕರ್ ಜಯಂತಿ ಆಚರಿಸುವುದರ ಜೊತೆಗೆ ಅವರ ತತ್ವಾದರ್ಶಗಳನ್ನು ಸರಿಯಾಗಿ ತಿಳಿದುಕೊಂಡು ಅನುಸರಿಸಬೇಕು. ಮೌಢ್ಯಗಳ ಬಗ್ಗೆ ಜಾಗೃತರಾಗಿ, ಗ್ರಾಮಸ್ಥರಿಗೆ ಆ ಬಗ್ಗೆ ಮನವರಿಕೆ ಮಾಡಿಕೊಡುವ ಮೂಲಕ ವೈಜ್ಞಾನಿಕ ಚಿಂತನೆಯುಳ್ಳ ಸಮಾಜ ನಿರ್ಮಾಣದತ್ತ ಹೆಜ್ಜೆ ಇಡಬೇಕು ಎಂದು ಕಿವಿಮಾತು ಹೇಳಿದರು.

ಗ್ರಾಮದ ಹಿರಿಯರಾದ ನಿವೃತ್ತ ಸರ್ಕಾರಿ ನೌಕರ ಮರಿಹನುಮಯ್ಯ, ದೇವರಾಜ್ ಮಾಸ್ಟರ್, ಮಾತನಾಡಿದರು. ನಿವೃತ್ತ ನೌಕರ ನಂಜಯ್ಯ ಡಾ.ಅಂಬೇಡ್ಕರ್ ಕುರಿತ ಹಾಡು ಪ್ರಸ್ತುತಪಡಿಸಿದರು.

ಕಾರ್ಯಕ್ರಮದಲ್ಲಿ ಪೊಲೀಸ್ ಮಹದೇವಯ್ಯ, ಶಿಕ್ಷಕ ಡಿ.ಎಂ.ಶಿವರಾಜು, ಗ್ರಾಮ ಪಂಚಾಯ್ತಿ ಉಪಾಧ್ಯಕ್ಷ ಸಿದ್ದಯ್ಯ, ಗ್ರಾಪಂ ಮಾಜಿ ಅಧ್ಯಕ್ಷ ಶಿವಕುಮಾರ್ ಅಂಬೇಡ್ಕರ್, ಮಮತಾ ಶಂಭುಲಿಂಗಸ್ವಾಮಿ, ಸಂಘದ ಪದಾಧಿಕಾರಿಗಳಾದ ಸಂತೋಷ್, ಶಿವು ವೆಂಕಟೇಶ್, ಸುಜೇಂದ್ರ ಕುಮಾರ್, ಹನುಮಂತರಾಜು, ನಾಗರಾಜು, ಕೆ.ಗುರುಸ್ವಾಮಿ, ಮೂರ್ತಿ, ದೇವರಾಜ್, ಗಿರೀಶ, ರಾಜಹನುಮ, ಶ್ರೀನಿವಾಸ್ ಪ್ರಸಾದ್, ಅಂದಾನಿ ನಟರಾಜು, ಗಿರೀಶ ಸೇರಿದಂತೆ ಗ್ರಾಮಸ್ಥರು ಭಾಗವಹಿಸಿದ್ದರು. ಸಭಾ ಕಾರ್ಯಕ್ರಮದ ಬಳಿಕ ಡೊಳ್ಳು, ತಮಟೆ ವಾದ್ಯಗಳೊಂದಿಗೆ ಗ್ರಾಮದಲ್ಲಿ ಅಂಬೇಡ್ಕರ್ ಭಾವಚಿತ್ರದ ಮೆರವಣಿಗೆ ನಡೆಸಲಾಯಿತು.

ಆರ್.ಮಂಜು ನಿಧನ



ಮೈಸೂರು, ಏ.28– ಮೈಸೂರಿನ ಕುಂಬಾರಕೊಪ್ಪಲು ನಿವಾಸಿ ಆರ್.ಮಂಜು(54) ಅವರು ಭಾನುವಾರ ನಿಧನರಾದರು.

ವಿನಾಯಕ ಡೆವಲಪರ್ಸ್ ಸಂಸ್ಥೆಯಲ್ಲಿ ಉದ್ಯೋಗಿಯಾಗಿದ್ದ ಇವರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಕುಂಬಾರಕೊಪ್ಪಲು ರುದ್ರಭೂಮಿಯಲ್ಲಿ ಸೋಮವಾರ ಬೆಳಗ್ಗೆ 11ಕ್ಕೆ ಅಂತ್ಯ ಸಂಸ್ಕಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

HOUSE FOR RENT
Semi-furnished duplex house with two bedroom with solar, 2 geyser at Church Road, near Vivekananda Circle.
Mob: 8073030835

ಬಾಡಿಗೆಗೆ ಲಭ್ಯವಿದೆ
10x23 ಅಳತೆಯ ಅಂಗಡಿ ಮಳಿಗೆ ಸ್ಟೇಷನರಿ ಹಾಗೂ ಚಾಟ್ಸ್ ವ್ಯಾಪಾರ ಮಾಡಲು ಸೂಕ್ತವಿದ್ದು ಬಾಡಿಗೆಗೆ ಲಭ್ಯವಿದೆ. ವಿಳಾಸ: ನಂದೀಶ್ ಕಿಡ್ಸ್ ಕ್ಲಿನಿಕ್ ಪಕ್ಕ, ಜೀನಿಯಸ್ ಕಾಲೇಜು ಹತ್ತಿರ, ರಿಂಗ್ ರೋಡ್, ದೇವೇಗೌಡ ಸರ್ಕಲ್, ಮೈಸೂರು. ಸಂಪರ್ಕಿಸಿ:
Mob: 9611178336

HOME APPLIANCES SERVICE
ಫ್ರಿಡ್ಜ್, ವಾಶಿಂಗ್‌ಮೆಶೀನ್, ಮೈಕ್ರೋ ವೋವೆನ್, ಎಲ್‌ಸಿಡಿ, ಸೋಲಾರ್, ಯುಪಿಎಸ್, ಗೀಸರ್, ಸೇಲ್ಸ್ ಅಂಡ್ ಸರ್ವೀಸ್, ನಿಮ್ಮ ಮನೆಯ ಹತ್ತಿರ ದೊರೆಯುತ್ತದೆ.
Contact: Srinivas
9379699229

WANTED
Wanted Teaching staff for reputed institution (Experience Preferred) for all subjects. Transport facilities available. Drop your resume through WhatsApp
8971577685
9980631121

ಮನೆ ಮಾರಾಟಕ್ಕಿದೆ
55x45 ಅಳತೆಯ ಕಟ್ಟಡದ ಅರ್ಧಭಾಗ 21x45 ಅಳತೆಯ 2 ಅಂತಸ್ತಿನ ಮನೆ ತ್ಯಾಗರಾಜ ರಸ್ತೆ, 8ನೇ ಕ್ರಾಸ್, ಅಗ್ರಹಾರ, ಮೈಸೂರು.
9448442226, 6361637505

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

AMAZE
POWER DRIVE
SUNZONE SOLAR SYSTEM
VM Double Road, Kuvempunagar, Mysuru
9845175443

HOUSE FOR RENT
Semi furnished 2 BHK House / Flat with Lift facility at 5th Cross, Thyagaraja Road, (Near JSS Hospital)
Contact:
90666 61928
94480 52932
99009 97053
Brokers Excuse

ಬೋಳು ತಲೆಯ ಸಮಸ್ಯೆಯೇ?
ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಥರ್ಥಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

DTCP SITES FOR SALE
DTCP Sites
Rs. 699 per sq.ft., Near Jayapura, H.D. Kote Road, Mysore.
9590491194, 9606783264

WANTED FOR Bhaskar Heart Centre

Post	Qualification
Receptionist	Degree / PUC
Marketing / PRO (M)	Degree / PUC
Staff Nurses (F)	GNM / ANM
Laboratory Technician	CMLT / DMLT
Pharma Assistant	PUC / Degree

0821-2499188 / 9880186386

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 9108566022

2 BHK HOME INTERIORS
Starting @ ₹2.5 Lacs*
Home Space Mart
TALK TO OUR DESIGN TEAM
9108923123

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡಿ ಪ್ರತಿ ತಿಂಗಳಿಗೆ ರೂ. 15,000 ಸಂಪಾದಿಸಿ.
Mob: 9731891409

Star Solar
JUST 19,499/- 200 Ltr
Easy EMI
7/15 Years Guaranty
Limited Period Offer
Old system Exchange offer available
Manufacturing : Belawadi Industrial Sub, Mysore
9945616293 / 9449966293

ವಿವಾಹ ಭಾಗ್ಯ
MRJ ಮ್ಯಾಟ್ರಿಮೋನಿ
ಎಲ್ಲಾ ಜಾತಿಯ ವಧು / ವರರಿಗಾಗಿ ಸಂಪರ್ಕಿಸಿ:
1) ಮೊದಲನೆ ಮದುವೆ
2) ಎರಡನೆ ಮದುವೆ
3) ವಿಧವೆ / ವಿದುರರು
FREE REGISTRATION
8904890413

ಬೇಕಾಗಿದ್ದಾರೆ
ಹೆಲ್ಪರ್ ಬೇಕಾಗಿದ್ದಾರೆ 20 ಜನ. ಒಬ್ಬರು ಸೂಪರ್‌ವೈಸರ್ ಬೇಕಾಗಿದ್ದಾರೆ. ಶ್ರೀರಂಗಪಟ್ಟಣ ಸುತ್ತಮುತ್ತಲಿನ ಜನರು ಬೇಕಾಗಿದ್ದಾರೆ. ವಯಸ್ಸು: 18–30. ಸಂಬಳ: ರೂ. 15,000, ಇಎಸ್‌ಐ, ಪಿಎಫ್. ಭಾನುವಾರ ರಜೆ.
ಸಾಡ್ವನ್ ಸೆಕ್ಯೂರಿಟಿ – ಮೆನ್ ಪವರ್ ಸರ್ವೀಸ್ #221, 6ನೇ ಕ್ರಾಸ್, ಮಹಾದೇಶ್ವರ ಬಡಾವಣೆ, ತ್ರಿನೇತ್ರ ಸರ್ಕಲ್, ಹೆಬ್ಬಾಳ್, ಮೈಸೂರು–570 016
9606911760, 8197269895

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

DTCP Sites for Sale
Amrutha Nagar, Off Jayapura, HD Kote Main Road
30x40, 30x50 & Odd sites
RERA No. PRM/KA/RERA/1268/378/PR/200219/003298
7829331999, 6364382399

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 7204494854

ST. PAUL ENGLISH SCHOOL
BANNIMANTAP. MYSORE
WALK IN INTERVIEW ON Tuesday 30-04-2024 between 10.30 AM to 2 PM
WANTED TEACHERS
1) BSc, BEd. (CBZ &PCM), (2) BA, B.Ed (3) BA BEd., (4) Assistant Teacher D.Ed (5) PE Teacher, (6) Nursery Teacher
7349732300 / 9243526260
**Admission are open from LKG to 10th Std.

ತಕ್ಷಣ ಬೇಕಾಗಿದ್ದಾರೆ
ಮೆಡಿಕಲ್ ಶಾಪ್‌ನಲ್ಲಿ Pharma Aide ಆಗಿ ಕೆಲಸ ಮಾಡುವವರು,
Exp 2-15 yrs,
Location: Bogadi
9880587586

SITES FOR SALE
DTCP Approved Layout
Only few Sites available
30x40 Site @ RS 18 Lac
Bank Loan available
Behind Chamundi Hill
Next to Marashettihalli
9538583377

ಹೋಟೆಲ್ ಮ್ಯಾನೇಜ್‌ಮೆಂಟ್
ಹುಣಸೂರು ಹೈವೆಯಲ್ಲಿರುವ ಹೋಟೆಲ್ ನಡೆಸಿಕೊಂಡು ಹೋಗಲು ಹೋಟೆಲ್ ಮ್ಯಾನೇಜ್‌ಮೆಂಟ್ ಮಾಡುವವರು ಬೇಕಾಗಿದ್ದಾರೆ.
9448820184, 9148223235

100% TEAK WOOD
FACTORY FINISH DOORS & FRAMES
@ FACTORY DEPOT RATES
10 YEARS WARRANTY
9845426862
9901291267

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
ನಮಗೆ ಸರಕಾರಿ ಕಛೇರಿಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡಲು ಅಭ್ಯರ್ಥಿಗಳು ಬೇಕಾಗಿದ್ದು, SSLC PASS, BASIC COMPUTER CERTIFICATE ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್ ಜ್ಞಾನ ತಿಳುವಳಿಕೆ ಇದ್ದರೆ ಸಾಕು. ಸಂಬಳ :- ESI ಮತ್ತು PF ಸೇರಿ :-20200 ರೂಪಾಯಿಗಳು. ಕೆಲಸದ ಸ್ಥಳ:- ಬೆಂಗಳೂರು ನಗರ, ಗ್ರಾಮಾಂತರ ಪ್ರದೇಶ ವ್ಯಾಪ್ತಿಯಲ್ಲಿ ಸಂಪರ್ಕಕ್ಕಾಗಿ
7411369379

ಉದ್ಯೋಗವಕಾಶ
ಮಹಿಳೆಯರು, ಯುವತಿಯರು, ಹಾಗೂ ಯುವಕರು ನಮ್ಮ ಶಾಖೆಗಳಲ್ಲಿ ವಯಸ್ಸಾದ ಹಿರಿಯ ನಾಗರೀಕರನ್ನು ಮನೆಯಲ್ಲೇ ಉಳಿದುಕೊಂಡು ನೋಡಿಕೊಳ್ಳಲು ಹೋಂ ನರ್ಸ್ ಗಳು ಬೇಕಾಗಿದ್ದಾರೆ, ತಿಂಗಳ ವೇತನ :13000 ರಿಂದ 20000 ರೂ ವರೆಗೆ ಉಚಿತ ಊಟ ಮತ್ತು ವಸತಿಯೊಂದಿಗೆ ವಯೋಮಿತಿ :18-50 ವರ್ಷ ವಯಸ್ಸಿನವರು ಅಗ್ರಹಾರ:
9035113222

FOR SALE
Starts From 10 Lakhs
1. 20x30, 30x40, 30x50 Near Defence Apartments, HD Kote Road
2. 30x50 Near Varuna Lake
3. 2&3 BHK Flats at Ramkrishna Nagar
4. 30x40 House, Kuvempu Ngr Depo
5. 40x72, 35x45 House Vidyaranyapuram
6. 20x30 House Giridarshini Layout
7. 100x100 Farm House @ KRS Back Water Attach 20L
PRAKRUTHI PROPERTIES
95386 90359, 90359 90359

E/F 30x40 DTCP 'A' ಖಾತೆ ಸೊಸೈಟಿ ಸೈಟು ಮಾರಾಟಕ್ಕಿದೆ
14 ಲಕ್ಷದ 50 ಸಾವಿರಗಳು
TVS ಫ್ಯಾಕ್ಟರಿ ಹತ್ತಿರ ಮೈಸೂರು
9742198093

ಬೇಕಾಗಿದ್ದಾರೆ
ಬ್ಯೂಟಿ ಪಾರ್ಲರ್‌ಗೆ ಅನುಭವವುಳ್ಳ ಮಹಿಳಾ ಕೆಲಸಗಾರರು ಬೇಕಾಗಿದ್ದಾರೆ.
ಸ್ಥಳ: ಸರಸ್ವತಿಪುರಂ, ಮೈಸೂರು
8971848666
8970100800

WANTED DTP OPERATOR
Having good Kannada & English Typing Skills Computer Knowledge Only for Female
ಕಂಪ್ಯೂಟರ್ ಮತ್ತು ಡಿ.ಟಿ.ಪಿ. ಆಪರೇಟರ್ ಬೇಕಾಗಿದ್ದಾರೆ. (ಕನ್ನಡ & ಇಂಗ್ಲಿಷ್ ಟೈಪಿಂಗ್ ಉತ್ತಮವಾಗಿ ತಿಳಿದಿರುವವರು)
9964982228
8050473454

ಮೈಸೂರಿನಲ್ಲಿ ಉದ್ಯೋಗ
ಕುವೆಂಪುನಗರದಲ್ಲಿ ನೂತನವಾಗಿ ಆರಂಭವಾಗಿರುವ AW Group of ಕಂಪನಿಗೆ Freshers+Experience ಆದ 152 ಅಭ್ಯರ್ಥಿಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC, PUC, ITI, Dip, Any Degree
ವಯೋಮಿತಿ: 18 to 29 Years
ತಿಂಗಳಿಗೆ : 19800-25500
(ಉಚಿತ ವಸತಿ+ಊಟ+ಮೆಡಿಕಲ್ ಸೌಲಭ್ಯ)
9900163228
ಸ್ವಾತಿಗೌಡ: 7349699460

ಸೈಟ್ ಮಾರಾಟಕ್ಕಿದೆ
ಹುಣಸೂರು ರಸ್ತೆಯ ಇಲವಾಲದ "ಕೃಷಾ" ಬಡಾವಣೆ 30x40 ಅಳತೆಯ ನಿವೇಶನವು Rs. 36/- ಲಕ್ಷಕ್ಕೆ ಮಾರಾಟಕ್ಕಿದೆ
ತಕ್ಷಣವೇ ಸಂಪರ್ಕಿಸಿ:
6360633036
8088689211

ಬೇಕಾಗಿದ್ದಾರೆ
ರೋಗಿಯ ಆರೈಕೆ ಮತ್ತು ಅಡುಗೆ ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಮಹಿಳೆಯರು ಪುರುಷರು ಹಾಗೂ 24 ಗಂಟೆ ಅಡುಗೆ ಮನೆ ಕೆಲಸ ಮಾಡುವವರು ಸಂಪರ್ಕಿಸಿ ಸಂಬಳ: 10000 ರಿಂದ 25000
8123252840

ಸೈಟ್ ಮಾರಾಟಕ್ಕಿದೆ
30x40 ಪಶ್ಚಿಮ ನಂ.3 ಖಾತೆ ಮೈಸೂರು ನೋಂದಣಿ ಬೆಲೆ 14.5 ಲಕ್ಷ, ಕೆ.ಎಸ್.ಹುಂಡಿ
30x40 ಪಶ್ಚಿಮ ಮುಡಾ ಖಾತೆ ರೂ. 33.4, ಸಾತಗಳ್ಳಿ
9900840025

ಮನೆ ಮಾರಾಟಕ್ಕಿದೆ
ಮನೆ ನಂ.8, 6ನೇ ಮೈನ್, 4ನೇ ಕ್ರಾಸ್, ಗಣಪತಿ ದೇವಸ್ಥಾನದ ಹಿಂಭಾಗ, ರಾಮಕೃಷ್ಣ ನಗರ, ಕೆ.ಬ್ಲಾಕ್, ಮೈಸೂರು
ದಿಲೀಪ್‌ಕುಮಾರ್
9739470821
7892820093

ಹೆಲ್ತ್ ಕೇರ್ ತರಬೇತಿ
SSLC/PUC ಆದವರಿಗೆ ಡಿಪ್ಲಮೋ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರಿಸ್ ಆಸ್ಪತ್ರೆ ಸಿಲ್ಕ್ ಫ್ಯಾಕ್ಟರಿ ಸರ್ಕಲ್ NIE ಕಾಲೇಜ್ ಪಕ್ಕ ಮೈಸೂರು.
9916908454

ಬೈಕ್ ರೈಡರ್ ಬೇಕಾಗಿದ್ದಾರೆ
ರ್ಯಾಪಿಡೋ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1500/– ವರೆಗೂ ಸಂಪಾದಿಸಿ ಅಗತ್ಯ ದಾಖಲೆಗಳು DL ವಾಹನದ ದಾಖಲೆಗಳು ಮತ್ತು ಆಧಾರ್ ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ
04048937617

ಇವಾ ಬ್ರೈಡಲ್ ಸ್ಟುಡಿಯೋ ಅಂಡ್ ಅಕಾಡೆಮಿ
ಕೇವಲ 10000/– ರೂ.ಗಳಿಗೆ 30 ದಿನದಲ್ಲಿ ಮೇಕಪ್ ಕೋರ್ಸ್‌ನ್ನು ಹೇಳಿಕೊಡಲಾಗುತ್ತದೆ.
ಸೌಮ್ಯ, ಮೈಸೂರು
9731956246

ಬೇಕಾಗಿದ್ದಾರೆ
ಮೈಸೂರಿನ ದೇವೇಗೌಡ ಸರ್ಕಲ್‌ನಲ್ಲಿ ಕೆಲಸ ಮಾಡಲು 45 ವರ್ಷದೊಳಗೆ ಇರುವ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ, ಆಕರ್ಷಕ ವೇತನ ESI & EPF ನೀಡಲಾಗುವುದು,
ವಿದ್ಯಾರ್ಹತೆ: ಎಸ್‌ಎಸ್‌ಎಲ್‌ಸಿ
9901236401, 9535784363

WANTED SITE
ಭೋಗಾದಿ ಸುತ್ತಮುತ್ತ
Muda Approved
ಸೈಟ್ ಬೇಕಾಗಿದೆ
9482883566

ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗ ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
(Hand Pressing Work)
ವಿಳಾಸ: 788, 2nd Main, 16th Cross, B.M. Shri Naghara, Metagalli, Lakshmi
9945161738

ಪ್ರಣತಿ ವಿದ್ಯಾಸಂಸ್ಥೆ
ಕ್ಯಾತನಹಳ್ಳಿ ಹೆಚ್.ಡಿ.ಕೋಟೆ ತಾಲ್ಲೂಕು
ಶಿಕ್ಷಕರು ಬೇಕಾಗಿದ್ದಾರೆ.
NST, NTT, PUC, Degree with DEd or B.Ed, CPED or B.Ped
9113269611
9964253209

ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗಿಯರು, ವಯೋಮಿತಿ 18–30, ವಿದ್ಯಾರ್ಹತೆ: ಪಿ.ಯು.ಸಿ ಯಾವುದೇ ಡಿಗ್ರಿ
ಸೆರಾಕೇರ ಮೈಸೂರು ಹೆಲ್ತ್ ಸೆಂಟರ್ ನ್ಯೂ ಕಾಂತರಾಜ ಅರಸು ರಸ್ತೆ, ಕೆ.ಜಿ.ಕೊಪ್ಪಲು, ಮೈಸೂರು
7996011692
8296366894

FOR SALE
Near Mysore City Industrial Conversion Land 1 Acre Maraluru Nanjangudu Industrial Area
9448011470

WANTED
Required direct field executives Salary: 25,000/- + Incentives.
Qualifications : 10th & Above
Free Training provided.
8971320890

ಮನೆ ಬಾಡಿಗೆಗೆ ಬೇಕಾಗಿದೆ
ವೃದ್ಧಾಶ್ರಮ ನಡೆಸಲು 30x40 ಅಥವಾ 40x60 ಅಳತೆಯ Independent ಮನೆಯು ಮೈಸೂರು ನಗರ ಅಥವಾ ಸುತ್ತಮುತ್ತಲಿನ ಭಾಗದಲ್ಲಿ ತಕ್ಷಣ ಬಾಡಿಗೆಗೆ ಬೇಕಾಗಿದೆ ಹಾಗೂ ನಮ್ಮಲ್ಲಿಯೇ ಉಳಿದುಕೊಂಡು ವೃದ್ಧರನ್ನು ನೋಡಿಕೊಳ್ಳಲು ಮಹಿಳಾ ಹೋಂ ನರ್ಸ್ ಅಭ್ಯರ್ಥಿಗಳು ಬೇಕಾಗಿದ್ದಾರೆ.
9916905188

ಬೇಕಾಗಿದ್ದಾರೆ
ಮೈಸೂರು, ಹೆಬ್ಬಾಳಿನ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಹೆಲ್ಪರುಗಳು ಟೈಲರುಗಳು, ಸೆಕ್ಯೂರಿಟಿ ಗಾರ್ಡುಗಳು ಹಾಗೂ ಅಕೌಂಟೆಂಟ್‌ಗಳು (Accounts) ಬೇಕಾಗಿದ್ದಾರೆ.
7795285485
8105249880

ನಳಪಾಕ ಕುಕ್ಕಿಂಗ್ ಟೀಮ್
ಶುಭ ಸಮಾರಂಭಗಳಿಗೆ ಬೇಕಾದ ಸಸ್ಯಾಹಾರಿ, ಮಾಂಸಹಾರಿ ಹಾಗೂ ಎಲ್ಲಾ ವಿಧದ ಸಿಹಿ ತಿಂಡಿಗಳನ್ನು ನಿಮ್ಮ ಅಭಿರುಚಿಗೆ ತಕ್ಕಂತೆ ಆಯಾ ಸ್ಥಳಕ್ಕೆ ಬಂದು ತಯಾರಿಸಿ ಕೊಡಲಾಗುವುದು.
8951092977

JOIN TODAY JOBS
Age (18-24) 10th, PUC, ಮೇಲ್ಪಟ್ಟಿರುವ Traineeಗಳಾಗಿ ONLY FRESHERS, *NO FEE*
Earn (9000/- ರಿಂದ 16500/-) Pm
ಪರಸ್ಥಳದವರಿಗೆ ವಸತಿ ತಮ್ಮ ವಿವರಗಳೊಂದಿಗೆ ಖುದ್ದಾಗಿ ಭೇಟಿಗಾಗಿ
WALK IN TIME (11 AM to 3PM)
ಮಂಜು: 9342827788
ಮೈಸೂರು: 9342238667

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಆಫೀಸ್, ಶೋರೂಂ ಮತ್ತು ಕಂಪನಿಗಳಿಗೆ 7th, SSLC, PUC ITI, Any Degree Pass/Fail ಆದ ಯುವಕರು/ಯುವತಿಯರಿಗೆ Cashier, Billing, Data Entry Receptionist, Backend, Packing, helper, Line incharge ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ 14000/– 39000/– (ESI+PF OT) ಸೇರಿ
9513829246
6364103418

ಬೇಕಾಗಿದ್ದಾರೆ
ಕುವೆಂಪುನಗರದಲ್ಲಿರುವ ಪಾರ್ಸಲ್ ಸರ್ವಿಸ್ ಹೋಟೆಲ್‌ಗೆ ತರಕಾರಿ ಕಟಿಂಗ್, ಕೌಂಟರ್ ಬಾಯ್ಸ್, ಮತ್ತು ಹಿಟ್ಟು ಕಲಸುವವರು ಬೇಕಾಗಿದ್ದಾರೆ. 10 ರಿಂದ 12 ಸಾವಿರ ಸಂಬಳದೊಂದಿಗೆ ಊಟ, ವಸತಿ ಉಚಿತ
7204404170

ಕಳೆದಿದೆ
ಮೈಸೂರು ಜಿಲ್ಲೆ ಮತ್ತು ತಾಲ್ಲೂಕು ಜಯಪುರ ಹೋಬಳಿ, ಮರಟಿಕ್ಯಾತನಹಳ್ಳಿ ಗ್ರಾಮದಲ್ಲಿರುವ ರೂಪಾನಗರ 11ನೇ ಅಡ್ಡರಸ್ತೆ, ನಿವೇಶನ ಸಂಖ್ಯೆ 926ಕ್ಕೆ ಸಂಬಂಧಿಸಿದಂತೆ ದಿನಾಂಕ 30–7–2022ರಂದು ನನ್ನ ಸಹೋದರ ಸುಪ್ರಿತ್ ಎಸ್.ಆರ್.ಅವರು ನನ್ನ ಹೆಸರಿಗೆ ನೋಂದಣಿ ಮೂಲಕ ನೀಡಿದ್ದ ದಾನ ಪತ್ರದ ಅಸಲು ಪತ್ರ ಕಳೆದು ಹೋಗಿದ್ದು, ಯಾರಿಗಾದರೂ ಸಿಕ್ಕಲ್ಲಿ ಸಂಪರ್ಕಿಸಿ
ಸುಹಾಸ್ ಎಸ್.ಆರ್.
8892256005

ತಿರುಮಲ ಪ್ರಾಪರ್ಟೀಸ್ & ರಿಯಲ್ ಎಸ್ಟೇಟ್
20x30, 30x40, 40x60 ಬಾಡಿಗೆಗೆ ಭೋಗ್ಯಕ್ಕೆ ಕ್ರಯಕ್ಕೆ ಸುವರ್ಣ ನಗರದಲ್ಲಿ 30x50 ಸೈಟು ಮಾರಾಟಕ್ಕಿದೆ.
N/W Corner
ಕಂದಾಯನಗರ 30x40 W/F ಮಾರಾಟಕ್ಕಿದೆ.
ಬಾಡಿಗೆ ಭೋಗ್ಯಕ್ಕೆ ಸಂಪರ್ಕಿಸಿ:
8217368859

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಸೂಪರ್ ವೈಸರ್‌ಗಳು
2) ಸೆಕ್ಯೂರಿಟಿ ಗಾರ್ಡುಗಳು
ಸ್ಥಳ: ಗೋಕುಲಂ, ಹೂಟಗಳ್ಳಿ, (ಮೈಸೂರು) ಸಂಪರ್ಕಿಸಿ: ಎಸ್.ಬಿ.ಐ ಮುಖ್ಯ ರಸ್ತೆ, ಹೆಬ್ಬಾಳು 1ನೇ ಹಂತ, ಸೂರ್ಯ ಬೇಕರಿ ಸರ್ಕಲ್ ಹತ್ತಿರ, ಹೆಬ್ಬಾಳು, ಮೈಸೂರು
9739199355
9844235981

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ESI ಮತ್ತು PF ನೊಂದಿಗೆ ಉಚಿತ ವಸತಿ ಸೌಲಭ್ಯವಿರುತ್ತದೆ. 6 ತಿಂಗಳಿಗೊಮ್ಮೆ ವೇತನವನ್ನು ಹೆಚ್ಚು ಮಾಡಲಾಗುವುದು. ಸ್ಥಳ: ಮೈಸೂರು
9739294107
8951715624

ಬೇಕಾಗಿದ್ದಾರೆ
ಕುಶಾಲನಗರದಲ್ಲಿರುವ ಸಸ್ಯಾಹಾರಿ ಹೋಟೆಲ್‌ಗೆ ಸೆಕ್ಯೂರಿಟಿ ಗಾರ್ಡ್–3, ಕಾಫೀ, ಟೀ ಭಟ್ಟರು–2, ಕ್ಯಾಪ್ಟನ್–2, ಪಾತ್ರೆ ವಾಷಿಂಗ್–3, ದೋಸೆ ಭಟ್ಟರು–2,
ಕೂಡಲೇ ಸಂಪರ್ಕಿಸಿ:
8317454665
7899929233

Sri Kamalamma Shankrappa English Medium High School, Hediyala Nanjanagud (T)
WALK INTERVIEW
Committed Inspiring & Skilled Teachers are Informed to attend walk in Interview on at school premises from 10-00 am to 2-00 pm with necessary documents including passport size photo. Fluency in English is a must. Additional Qualification will have extra weightage
9353162499, 9535799559

ಮೈಸೂರು ಮಿತ್ರ – ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಫಲಿತಾಂಶಕ್ಕೂ ಮುನ್ನವೇ ವಿಜಯೋತ್ಸವ

ಭಾರತೀನಗರ.ಏ.28–ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಎನ್‌ಡಿಎ ಮೈತ್ರಿ ಅಭ್ಯರ್ಥಿ ಎಚ್.ಡಿ.ಕುಮಾರಸ್ವಾಮಿ ಅವರು ಗೆಲುವು ಸಾಧಿಸುತ್ತಾರೆಂದು ಫಲಿತಾಂಶ ಹೊರಬೀಳುವ ಮುನ್ನವೇ ಕಾರ್ಯಕರ್ತರು ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಅವರಿಗೆ ಮೆಳ್ಳಹಳ್ಳಿಯಲ್ಲಿ ಸಿಹಿ ತಿನಿಸಿ ವಿಜಯೋತ್ಸವ ಆಚರಿಸಿದರು.

ತಮ್ಮಣ್ಣ ಅವರು ಮೆಳ್ಳಹಳ್ಳಿ, ಕೆ.ಪಿ.ದೊಡ್ಡಿ, ಮಣಿಗೆರೆ ಗ್ರಾಮಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರು ಹಾಗೂ ಕುಮಾರಸ್ವಾಮಿ ಅಭಿಮಾನಿಗಳು ಅವರಿಗೆ ಸಿಹಿ ತಿನ್ನಿಸಿ ಅಭಿನಂದಿಸಿದ ರಲ್ಲದೆ ಜನರಿಗೂ ಸಿಹಿ ವಿತರಿಸಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಅವರು ಮಾತನಾಡಿ, ಎಚ್.ಡಿ. ಕುಮಾರಸ್ವಾಮಿ ಅವರು ಜಿಲ್ಲೆಯ ಮೇಲಿಟ್ಟಿರುವ ಅಭಿಮಾನದಿಂದ ಮತದಾರರು ಇಂದು ಉತ್ತಮ ಫಲಿತಾಂಶ ನೀಡುತ್ತಾರೆಂಬ ನಂಬಿಕೆ ಕಾರ್ಯಕರ್ತರಲ್ಲಿದೆ. ಹಾಗಾಗಿ ಕಾರ್ಯಕರ್ತರು ಈಗಾಗಲೇ ವಿಜೋತ್ಸವವನ್ನು ಆಚರಣೆ ಮಾಡುತ್ತಿರುವುದು ಕ್ಷೇತ್ರದಲ್ಲಿ ಕಂಡುಬರುತ್ತಿದೆ. ಇದರಿಂದ ನನಗೂ ಸಹ ಸಂತಸ ತಂದಿದೆ ಎಂದರು.


ಭಾರತೀನಗರ ಸಮೀಪದ ಮೆಳ್ಳಹಳ್ಳಿಯಲ್ಲಿ ಎಚ್.ಡಿ.ಕುಮಾರಸ್ವಾಮಿ ಅವರ ಗೆಲುವು ಖಚಿತ ಎಂದು ಫಲಿತಾಂಶ ಹೊರಬೀಳುವ ಮುನ್ನವೇ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಅವರಿಗೆ ಸಿಹಿ ತಿನಿಸಿ ವಿಜಯೋತ್ಸವ ಆಚರಿಸಲಾಯಿತು.

ಕುಮಾರಣ್ಣ ಅವರು ಎರಡು ಬಾರಿ ಮುಖ್ಯಮಂತ್ರಿಯಾಗಿದ್ದವರು. ನಮ್ಮ ಕ್ಷೇತ್ರದಲ್ಲಿ ಈ ಬಾರಿ ಚುನಾವಣೆಗೆ ಸ್ಪರ್ಧಿಸಿದ್ದಾರೆ. ಕಾವೇರಿ ಹೋರಾಟಕ್ಕೆ ಒಬ್ಬ ಉತ್ತಮ ನಾಯಕನ ಅವಶ್ಯಕತೆ ಇತ್ತು. ಅದು ಸಾಧ್ಯವಾಗಿದೆ. ಈ ಬಾರಿ ಶೇ 80ರಷ್ಟು ಜನರು ಕುಮಾರಣ್ಣನವರಿಗೆ ಮತ ಹಾಕಿದ್ದಾರೆ ಎಂಬ ವಿಶ್ವಾಸವಿದೆ ಎಂದರು.

ಇದೇ ವೇಳೆ ಜೆಡಿಎಸ್ ಜಿಲ್ಲಾ ಗೌರವಾಧ್ಯಕ್ಷ ಎಚ್.ಎಂ.ಮರಿಮಾದೇಗೌಡ, ತಾಲೂಕು ಕಾರ್ಯಾಧ್ಯಕ್ಷ ಮಾದನಾಯಕನಹಳ್ಳಿ ರಾಜಣ್ಣ, ಗ್ರಾ.ಪಂ ಮಾಜಿ ಅಧ್ಯಕ್ಷ ಕರಿಯಪ್ಪ, ಸದಸ್ಯರಾದ ತಿಬ್ಬಯ್ಯ, ಮುಖಂಡರಾದ ಕೆ.ಎಲ್.ಶಿವರಾಮು, ಕೆ.ಟಿ.ಸುರೇಶ್, ಮಣಿಗೆರೆ ಕೆಪಿದೊಡ್ಡಿ ಮುಖಂಡರು ಹಾಜರಿದ್ದರು.

ವಿದ್ಯಾರ್ಥಿ ನಾಪತ್ತೆ

ಮೇಲುಕೋಟೆ:ಹೋಬಳಿಯ ಕೊಡಗಳ್ಳಿ ಗ್ರಾಮದ ಯುವಕ ಪ್ರೀತ್‌ವರ್ (17) ಕಾಲೇಜಿಗೆ ಹೋಗಿ ಬರುವುದಾಗಿ ಹೋದವನು ಕಾಣೆಯಾಗಿದ್ದಾನೆ.



ಈ ಬಗ್ಗೆ ವೆಂಕಟೇಶ್ ನೀಡಿದ ದೂರಿನನ್ವಯ ಮೇಲುಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಪಾಂಡವಪುರ ಬಿ.ಜಿ.ಎಸ್ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದು ಏ.27 ರಂದು ಎಂದಿನಂತೆ ಕಾಲೇಜಿಗೆ ಹೋಗಿ ಬರುವುದಾಗಿ ಹೇಳಿ ಹೋದವನು ಸಂಜೆಯಾದರೂ ಮನೆ ವಾಪಸ್ಸು ಬರಲಿಲ್ಲ. ಪ್ರಾಂಶುಪಾಲರನ್ನು ಸಂಪರ್ಕಿಸಿದಾಗ 27 ರಂದು ಕಾಲೇಜಿಗೆ ರಜೆ ನೀಡ ಲಾಗಿತ್ತು ಎಂದು ಮಾಹಿತಿ ನೀಡಿದ್ದಾರೆ.

ಎಣ್ಣೆಗೆಂಪುಬಣ್ಣ, ಸಾಧಾರಣ ಶರೀರ ಹೊಂದಿರುವ ಪ್ರೀತಮ್ ಕಾಣೆಯಾದಾಗ ಬಿಳಿಯ ಬಣ್ಣದ ಚೆಕ್ಸ್ ಷರ್ಟ್, ಸಿಮೆಂಟ್ ಕಲರ್ ಪ್ಯಾಂಟ್ ಕೆಂಪು ಬಣ್ಣದ ಬನಿಯನ್ ಧರಿಸಿದ್ದ ಈ ವಿದ್ಯಾರ್ಥಿಯ ಬಗ್ಗೆ ಸುಳಿವು ದೊರೆತರೆ ಮೇಲುಕೋಟೆ ಠಾಣೆಗೆ ಮಾಹಿತಿ ನೀಡಲು ಪೊಲೀಸರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಯಾರೂ ಬೆಟ್ಟಿಂಗ್ ಕಟ್ಟಬೇಡಿ

ಮತದಾರರಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ಮನವಿ

ಮೇಲುಕೋಟೆ: ಮಂಡ್ಯ ಲೋಕಸಭಾ ಕ್ಷೇತ್ರದ ಫಲಿತಾಂಶಕ್ಕೆ ಸಂಬಂಧಿಸಿದಂತೆ ಮೇಲುಕೋಟೆ ಕ್ಷೇತ್ರದ ಯಾರೊಬ್ಬರೂ ಬೆಟ್ಟಿಂಗ್ ಕಟ್ಟಬಾರದು ಎಂದು ಮೇಲು ಕೋಟೆ ಕ್ಷೇತ್ರದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಮನವಿ ಮಾಡಿದ್ದಾರೆ. ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಶಾಸಕರು ಬೆಟ್ಟಿಂಗ್ ಕಟ್ಟುವುದು ಕಾನೂನಿನಲ್ಲಿ ಅಪರಾಧವಾಗಿದ್ದು, ಇದರಿಂದ ದ್ವೇಷ ಹೆಚ್ಚಾಗುತ್ತದೆ. ಹೀಗಾಗಿ ಯಾರೂ ಬೆಟ್ಟಿಂಗ್‌ನಲ್ಲಿ ಭಾಗಿಯಾಗಬಾರದು ಎಂದಿದ್ದಾರೆ.



ರಾಜ್ಯದಲ್ಲೇ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಮತ ಚಲಾಯಿಸಿದ ಕ್ಷೇತ್ರದ ಮತದಾರರಿಗೆ ಕೃತಜ್ಞತೆ ಸಲ್ಲಿಸಿರುವ ದರ್ಶನ್ ಪುಟ್ಟಣ್ಣಯ್ಯ, ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಮಂಡ್ಯ ಜಿಲ್ಲೆಯಲ್ಲೇ ಅತಿ ಹೆಚ್ಚು ಮತದಾನವಾಗಿದೆ. ಶೇ87ರಷ್ಟು ಮತದಾನದ ಅಂಕಿ ಅಂಶ ದಾಖಲಾಗಿದ್ದು ಮೊದಲ ಹಂತದಲ್ಲಿ ಚುನಾವಣೆ ನಡೆದ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಮತದಾರರು ಮೇಲುಕೋಟೆ ವಿಧಾನ ಸಭಾ ಕ್ಷೇತ್ರದಲ್ಲಿ ಮತ ಚಲಾಯಿಸಿದ್ದಾರೆ. ಎಲ್ಲಾ ಮತಗಟ್ಟೆಗಳಲ್ಲಿ ಶಾಂತಿಯುತವಾಗಿ ಮತದಾನ ನಡೆದಿದೆ. ಪ್ರಜಾಪ್ರಭುತ್ವದ ಹಬ್ಬದಲ್ಲಿ ಕ್ಷೇತ್ರದ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದಕ್ಕೆ ಕೃತಜ್ಞತೆ ಅರ್ಪಿಸುವುದಾಗಿಯೂ ಶಾಸಕರು ತಿಳಿಸಿದ್ದಾರೆ. ಇದೇ ವೇಳೆ ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯ ಪರವಾಗಿ ಕೆಲಸ ಮಾಡಿದ ರೈತಸಂಘ ಹಾಗೂ ಕಾಂಗ್ರೆಸ್ ಕಾರ್ಯಕರ್ತರಿಗೆ ಕೃತಜ್ಞತೆ ಅರ್ಪಿಸುವುದಾಗಿಯೂ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದ್ದಾರೆ.

ಫೆಲನ್ ಅಮಲ್‌ಗೆ ಪಿಹೆಚ್.ಡಿ

ಮೈಸೂರು: ಡಾ. ಟಿ. ಶಿವಲಿಂಗಸ್ವಾಮಿ ಅವರ ಮಾರ್ಗದರ್ಶನದಲ್ಲಿ ಫೆಲನ್ ಅಮಲ್ ಅವರು ಭೌತಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿ.ವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷಾ ಪೂರ್ವ ತರಬೇತಿ

ಮಂಡ್ಯ,ಏ.28–ಗ್ರೀನೋತ್ಸವ ಫೋರಮ್, ಅನನ್ಯ ಹಾರ್ಟ್ಸ್ ವತಿಯಿಂದ ಮೇ1 ರಿಂದ ನಗರದ ಹೊಂಬೇಗೌಡ ಸ್ಮಾರಕ ಕಲಾ ಕಾಲೇಜು ಕಟ್ಟಡದಲ್ಲಿ ಕೃಷಿಕರ ಕೋಟಾದಡಿ ಬರುವ ಪಿಸಿಎಂಬಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷಾ ಪೂರ್ವ ತರಬೇತಿ ನಡೆಯಲಿದೆ ಎಂದು ಫೋರಂನ ಸಂಪನ್ಮೂಲ ವ್ಯಕ್ತಿ ಡಾ.ಪ್ರೇಮಾ ತಿಳಿಸಿದರು.



ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಕೇವಲ ಇಂಜಿನಿಯರಿಂಗ್, ಡಾಕ್ಟರ್‌ಗಳ ಸಂಖ್ಯೆ ಹೆಚ್ಚಾದ ಕಾರಣ ವಿದ್ಯಾರ್ಥಿಗಳ ಒಲವು ಇತರೆ ಕೋರ್ಸ್‌ಗಳತ್ತ ತಿರುಗಿರುತ್ತದೆ. ಆದ್ದರಿಂದ ಕೃಷಿ ಕೋಟಾದಡಿ ಬರುವ ರೈತ ಮಕ್ಕಳಿಗೆ ಕೃಷಿ ಮತ್ತು ಕೃಷಿಯೇತರ ವಿಜ್ಞಾನ ಕೋರ್ಸ್‌ಗಳಿಗೆ ಅರ್ಹತೆ ಪಡೆಯಲು ಪ್ರಾಯೋಗಿಕ ಪರೀಕ್ಷೆಯಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ನೀಡಲಾಗುತ್ತದೆ ಎಂದು ಹೇಳಿದರು.

ಜಿಲ್ಲೆಯಲ್ಲಿ ಸತತ ಮೂರು ವರ್ಷಗಳಿಂದಲೂ ತರಬೇತಿ ನೀಡಲಾಗುತ್ತಿದ್ದು, ಶೇ.80ರಷ್ಟು ವಿದ್ಯಾರ್ಥಿಗಳು ಪ್ರತೀ ವರ್ಷ ವಿವಿಧ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆದಿರುತ್ತಾರೆ ಎಂದು ಹೇಳಿದರು.

ಫೋರಮ್ ವತಿಯಿಂದ ನೀಡಲಾಗುವ ತರಬೇತಿಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಯುಪಿಎಸ್‌ಸಿ ಪರೀಕ್ಷೆಯನ್ನೂ ಎದುರಿಸಿದ್ದು, ಓರ್ವ ವಿದ್ಯಾರ್ಥಿನಿ ರ‍್ಯಾಂಕ್ ಪಡೆದಿದ್ದಾಳೆ. ಅದೇ ರೀತಿ ಕೆಲವರು ಕೃಷಿಯಲ್ಲಿ ಹೆಚ್ಚಿನ ಆಸಕ್ತಿ ವಹಿಸಿಕೊಂಡು ಕೆಲಸ ಮಾಡಲು ಸಹ ಮುಂದಾಗಿದ್ದಾರೆ ಎಂದು ವಿವರಿಸಿದರು. ಇತ್ತೀಚಿನ ದಿನಗಳಲ್ಲಿ ಕೃಷಿಯಿಂದ ವಿಮುಖರಾಗುವರೇ ಹೆಚ್ಚಾಗಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ ಕಬ್ಬಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತದೆ. ಒಮ್ಮೆ ಬಿತ್ತನೆ ಮಾಡಿ ಸ್ವಲ್ಪ ಸಮಯ ನೋಡಿಕೊಂಡರೆ ಸಾಕು, ನಂತರ ಅದರ ಪಾಲನೆ ಮಾಡುವ ಅಗತ್ಯವಿಲ್ಲ. ತನ್ನಷ್ಟಕ್ಕೆ ತಾನೇ ಬೆಳೆಯುತ್ತದೆ. ಇದೊಂದು ಸೋಮಾರಿ ಬೆಳೆ. ಕಬ್ಬು ಕಟಾವಿಗೆ ಬರುವಷ್ಟರಲ್ಲಿ ಅದಕ್ಕಾಗಿ ಲಕ್ಷಾಂತರ ರೂ. ಖರ್ಚು ಮಾಡಿರುತ್ತಾರೆ. ಕಾರ್ಖಾನೆಗೆ ಸರಬು ರಾಜು ಮಾಡಿ ಲಕ್ಷ ಕೈಗೆ ಬಂದರೆ ರೈತರ ಸಂತಸಕ್ಕೆ ಪಾರವೇ ಇರುವುದಿಲ್ಲ. ಇದರಲ್ಲಿ ಲಾಭ ಎಷ್ಟು, ನಷ್ಟ ಎಷ್ಟು, ಶ್ರಮದ ಬಗ್ಗೆಯೂ ಚಿಂತನೆ ಮಾಡುವುದಿಲ್ಲ. ಹೀಗಾಗಿ ಕೃಷಿ ಲಾಭದಾಯಕವಾಗಿಲ್ಲ ಎಂಬುದು ಬಹುತೇಕರ ಅಭಿಪ್ರಾಯವಾಗಿದೆ ಎಂದರು.

ಕಬ್ಬಿನ ಬೆಳೆಯ ಮಧ್ಯದಲ್ಲಿ ವಿವಿಧ ಬೆಳೆ ಬೆಳೆಯುವ ಮೂಲಕ ಲಾಭ ಮಾಡಿಕೊಳ್ಳಬಹುದು. ಕೇವಲ ಕಬ್ಬನ್ನೇ ನಂಬಿ ಕುಳಿತರೆ ಸಾಲುವುದಿಲ್ಲ. ಬೆಳೆ ಪದ್ಧತಿಯನ್ನು ಮೈಗೂಡಿಸಿಕೊಳ್ಳಬೇಕು. ಭೂಮಿಯಲ್ಲಿ ವೈವಿಧ್ಯಮಯ ಬೆಳೆ ಬೆಳೆಯುವ ಮೂಲಕ ಕೃಷಿಯನ್ನು ಲಾಭದಾಯಕವಾಗಿಸಲು ಪ್ರಯತ್ನ ಮಾಡಬಹುದು. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಗ್ರಾಮದಲ್ಲೂ ಕೃಷಿ, ತೋಟಗಾರಿಕೆ, ಪಶು ಸಂಗೋಪನೆ, ಅರಣ್ಯಗಾರಿಕೆ, ಗೃಹ ವಿಜ್ಞಾನ, ಬಯೋಟೆಕ್ನಾಲಜಿ, ಕೃಷಿ ಮಾರುಕಟ್ಟೆ, ಮೀನುಗಾರಿಕೆ, ಕೃಷಿ ಇಂಜಿನಿಯರಿಂಗ್ ಪದವೀಧರರು ಇರಬೇಕು ಎಂಬುದು ನಮ್ಮ ಅಪೇಕ್ಷೆಯಾಗಿದೆ. ಈ ಹಿನ್ನೆಲೆಯಲ್ಲಿ ಪರೀಕ್ಷಾ ಪೂರ್ವ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ತರಬೇತಿ ತರಗತಿಗಳಿಗೆ ಹಾಜರಾಗಬೇಕು ಎಂದು ಮನವಿ ಮಾಡಿದರು. ಅನನ್ಯ ಹಾರ್ಟ್ಸ್‌ನ ಅಧ್ಯಕ್ಷೆ ಅನುಪಮಾ, ಗ್ರೀನೋತ್ಸವ್ ಫೋರಮ್ ಅಧ್ಯಕ್ಷೆ ಆರತಿ, ಉಪಾಧ್ಯಕ್ಷೆ ನೀತಾ ರೈನಾ ಗೋಷ್ಠಿಯಲ್ಲಿದ್ದರು.

ಸಂಗೀತ ಮಾನಸಿಕ ಒತ್ತಡ ದೂರ ಮಾಡುವ ಸಿದ್ಧಿ ಔಷಧಿ



ಮಂಡ್ಯ,ಏ.28– ಸಂಗೀತ ಮನಸ್ಸಿಗೆ ಮುದ ನೀಡುವುದರ ಜೊತೆಗೆ ಮಾನಸಿಕ ಒತ್ತಡದಿಂದಲೂ ದೂರ ಮಾಡುವ ಸಿದ್ಧ ಔಷಧಿಯಾಗಿ ಬಳಕೆಯಾಗುತ್ತಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ಮಾಜಿ ಅಧ್ಯಕ್ಷ ಕೆ.ಟಿ.ಶಂಕರೇಗೌಡ ತಿಳಿಸಿದರು.

ನಗರದ ಗಾಂಧಿ ಭವನದಲ್ಲಿ ನಡೆದ ನಗರದ ಹೊಸಹಳ್ಳಿಯ ಗುಡ್‌ವಾಯ್ಸ್ ಸಂಗೀತ ತರಬೇತಿ ಶಾಲೆಯ ವಾರ್ಷಿಕೋತ್ಸವ–ಪ್ರತಿಭಾ ಪ್ರದರ್ಶನ, ಗಣ್ಯರಿಗೆ ಸನ್ಮಾನ–ಸಾಂಸ್ಕೃತಿಕ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜನಪದ ಗಾಯಕ ಮಹದೇವು ಕಾರ್ಯಕ್ರಮ ಉದ್ಘಾಟಿಸಿದರು. ಗಾಯಕರಾದ ರವಿಸಂತು, ಸಿ.ಪಿ.ವಿದ್ಯಾಶಂಕರ್, ಕಲಾವಿದರ ಜನಾರ್ಧನ್ ಕೊಂಡ್ಲಿ, ಗುಡ್ ವಾಯ್ಸ್ ಸಂಗೀತ ತರಬೇತಿ ಶಾಲೆಯ ಸಿ.ದೇವರಾಜು, ಶಶಿಕುಮಾರ್ ಇತರರು ಸಮಾರಂಭದಲ್ಲಿ ಭಾಗವಹಿಸಿದ್ದರು.

ರಾಮದೇವರಿಗೆ ಲಾಲಿ ಹಾಡಿನೊಂದಿಗೆ ಭಕ್ತಿ ಸಮರ್ಪಣೆ

ಕಿಕ್ಕೇರಿ: ಹಿಂದೂ ಧರ್ಮದಲ್ಲಿ ರಾಮದೇವರಿಗೆ ಅಗ್ರಪೂಜೆ. ಪಟ್ಟಣದ ಸುಬ್ಬರಾಯರ ಛತ್ರದಲ್ಲಿ ಸೀತಾ ರಾಮದೇವರಿಗೆ ಲಾಲಿ ಹಾಡುವ ಮೂಲಕ ಭಕ್ತಿ ಸಮರ್ಪಣೆ ಮಾಡಲಾಯಿತು.

ವಿಪ್ರ ಬಾಂಧವ ಸೇವಾ ಸಮಿತಿಯವರು ಸೀತಾ ರಾಮದೇವರಿಗೆ ಹಮ್ಮಿಕೊಳ್ಳಲಾಗಿದ್ದ ಶಯನೋತ್ಸವ ಸಮಾರಂಭ ವೇದಘೋಷದೊಂದಿಗೆ ಆರಂಭವಾಯಿತು. ಸಾಂಪ್ರದಾಯಿಕ ಪೂಜೆಯಲ್ಲಿ ಮೊದಲು ಪಟ್ಟಾಭಿರಾಮ ದೇವರಿಗೆ ಪುಷ್ಪಮಾಲೆ ಸೇವೆ, ಅರ್ಚನೆ, ಅಭಿಷೇಕ ಸೇವೆ ನಡೆಯಿತು. ನಂತರ ತೊಟ್ಟಿಲನ್ನು ಸಭಾ ಮಂಟಪದಲ್ಲಿ ಕಟ್ಟಲಾಯಿತು.


ಕಿಕ್ಕೇರಿಯ ವಿಪ್ರ ಬಾಂಧವ ಸೇವಾ ಸಮಿತಿ ವತಿಯಿಂದ ಸೀತಾ ರಾಮದೇವರ ಶಯನೋತ್ಸವದಲ್ಲಿ ದೇವರ ಉಯ್ಯಾಲೆಯನ್ನು ಪೂಜಿಸಿ ತೂಗಲಾಯಿತು.

ವಿವಿಧ ಪುಷ್ಪ, ರೇಷ್ಮೆ ವಸ್ತ್ರಗಳಿಂದ ಅಲಂಕರಿಸಿ ಸೀತಾರಾಮದೇವರ ವಿಗ್ರಹವನ್ನು ಇಡಲಾಯಿತು. ವಿವಿಧ ಪೂಜೆಗಳನ್ನು ವಿಪ್ರರು ನೆರವೇರಿಸಿದರು.

ಅಂತಿಮವಾಗಿ ಸಾಮೂಹಿಕವಾಗಿ ರಾಮ ಲಾಲಿ ಹಾಡಿನೊಂದಿಗೆ ಉಯ್ಯಾಲೆ ತೂಗಲಾಯಿತು. ಲಾಲಿ ಹಾಡಿನೊಂದಿಗೆ ದೇವರನ್ನು ಶಯನೋತ್ಸವಕ್ಕೆ ತೆರಳಲು ಮಂತ್ರ ಪಠಣೆಯೊಂದಿಗೆ ಪ್ರಾರ್ಥಿಸಲಾಯಿತು. ಮಹಾಮಂಗಳಾರತಿ, ತೀರ್ಥ ಪ್ರಸಾದ, ಅನ್ನ ಪ್ರಸಾದ ವಿನಿಯೋಗಿಸಲಾಯಿತು.

ಕೆ.ಎಸ್.ಅನಂತಸ್ವಾಮಿ, ಕೆ.ಬಿ.ವೆಂಕಟೇಶ್, ಮಹಬಲಶರ್ಮ, ಆದಿತ್ಯ ಭಾರದ್ವಾಜ್, ಗಣೇಶ್‌ರಾವ್, ಮಹಬಲರಾವ್, ಪ್ರಭಾಕರ್, ಕೆ.ಎಸ್.ಪರಮೇಶ್ವರಯ್ಯ, ಶ್ರೀಹರಿ, ಶ್ರೀಹರ್ಷ, ಶಂಕರ್, ನರಸಿಂಹ, ಮಧು, ಸುಮಾ, ಭಾಗ್ಯಲಕ್ಷ್ಮೀ, ಗಿರಿಜಾ, ವೇದಾವತಿ, ಅನುರಾಧ, ವಿಜಯಲಕ್ಷ್ಮೀ, ರತ್ನಮ್ಮ, ನಂದಿನಿ, ಕಲಾವತಿ, ಶಶಿಕಲಾ, ರಜಿನಿ, ಸ್ವರ್ಣ ಉಪಸ್ಥಿತರಿದ್ದರು.

ಮೇಲುಕೋಟೆ ಕಾಳೇನಹಳ್ಳಿ ಗ್ರಾಮದಿಂದ ವ್ಯಕ್ತಿ ನಾಪತ್ತೆ

ಮೇಲುಕೋಟೆ: ಹೋಬಳಿಯ ಕಾಳೇನಹಳ್ಳಿ ಗ್ರಾಮದ ಮಲ್ಲೇಶ(55) ಕಾಣೆಯಾಗಿದ್ದು ಮೇಲುಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣದಾಖಲಾಗಿದೆ.



ಈ ಸಂಬಂಧ ಅವರ ಪುತ್ರ ರವಿಕುಮಾರ್ ಠಾಣೆಗೆ ದೂರು ನೀಡಿದ್ದು ಹಸುವನ್ನು ಕೊಟ್ಟಿಗೆಗೆ ಕಟ್ಟಿಹಾಕುವ ಸಂಬಂಧ ತಾಯಿಯೊಂದಿಗೆ ಜಗಳವಾಡಿ ಮನೆಯಿಂದ ಹೊರಹೋದ ಮಲ್ಲೇಶ ಮತ್ತೆ ಮರಳಿ ಬಂದಿಲ್ಲ. ಸಂಬಂಧಿಕರ ಮನೆಯಲ್ಲೆಲ್ಲಾ ವಿಚಾರಿಸಿ ತಂದೆಯ ಪತ್ತೆಯಾಗದ ಕಾರಣ ದೂರು ನೀಡಿದ್ದಾರೆ. ಮಲ್ಲೇಶ ಮನೆಯಿಂದ ಹೋಗುವಾಗ ಬಿಳಿಅಂಗಿ, ಖಾಕಿಕಲರ್ ನಿಕ್ಕರ್ ಆಕಾಶ ನೀಲಿ ಲುಂಗಿ ಧರಿಸಿದ್ದರು. ಗಂಟಲಿನಲ್ಲಿ ಆಪರೇಷನ್ ಮಾಡಿರುವ ಗುರುತ್ತಿದ್ದು ಪತ್ತೆಯಾದರೆ ಮೇಲುಕೋಟೆ ಪೊಲೀಸ್ ಠಾಣೆಗೆ ಮಾಹಿತಿ ನೀಡಲು ಕೋರಲಾಗಿದೆ.

ಚೆಕ್‌ಪೋಸ್ಟ್‌ಗೆ ಏಕಾಏಕಿ ನುಗ್ಗಿದ ಕಾರು ಚುನಾವಣಾ ಸಿಬ್ಬಂದಿಗೆ ಗಂಭೀರ ಗಾಯ

- ಕಾರು ಬಿಟ್ಟು ಪರಾರಿಯಾದ ಚಾಲಕ
- ಆಸ್ಪತ್ರೆಗೆ ಜಿಲ್ಲಾಧಿಕಾರಿ ಭೇಟಿ


ಮೈಸೂರಿನ ಬಿಇಎಂಎಲ್ ಬಳಿಯ ಚುನಾವಣಾ ಚೆಕ್‌ಪೋಸ್ಟ್‌ಗೆ ನುಗ್ಗಿದ ಕಾರು

ಮೈಸೂರು, ಏ.28(ಬಿಎಲ್‌ಯು)– ಚುನಾವಣಾ ಚೆಕ್‌ಪೋಸ್ಟ್ ಟೆಂಟ್‌ಗೆ ಕಾರು ನುಗ್ಗಿದ ಪರಿಣಾಮ ಚುನಾವಣಾ ಸಿಬ್ಬಂದಿ ಗಂಭೀರವಾಗಿ ಗಾಯಗೊಂಡಿರುವ ಘಟನೆ ಮೈಸೂರಿನ ಬಿಇಎಂಎಲ್ ಬಳಿ ಸಂಭವಿಸಿದೆ.


ವೀರಭದ್ರಪ್ಪ

ಮೈಸೂರಿನ ಕೂರ್ಗಳ್ಳಿಯ ಬಿಇಎಂಎಲ್ ಬಳಿ ಚುನಾವಣಾ ಚೆಕ್‌ಪೋಸ್ಟ್ ತೆರೆಯಲಾಗಿದೆ. ಚುನಾವಣಾ ಅಕ್ರಮ ತಡೆಯುವ ನಿಟ್ಟಿನಲ್ಲಿ ವಾಹನಗಳ ಶೋಧನೆಗಾಗಿ ಚೆಕ್‌ಪೋಸ್ಟ್‌ನಲ್ಲಿ ಚುನಾವಣಾ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಮೈಸೂರು ಕೊಡಗು ಲೋಕಸಭಾ ಚುನಾವಣೆ ಮುಗಿದು ಎರಡು ದಿನವಾದರೂ ಉತ್ತರ ಕರ್ನಾಟಕದಲ್ಲಿ ಚುನಾವಣೆ ನಡೆಯುತ್ತಿರುವ ಕಾರಣ ಇನ್ನು ಕೂಡ ಚೆಕ್‌ಪೋಸ್ಟ್‌ಗಳು ಕಾರ್ಯನಿರ್ವಹಿಸುತ್ತಿವೆ.

ಶನಿವಾರ ರಾತ್ರಿ ಸುಮಾರು 12.30 ಗಂಟೆಯಲ್ಲಿ ವೇಗವಾಗಿ ಬಂದ ಹುಂಡೈ ವರ್ನಾ ಕಾರು(ಕೆಎ–03, ಎಂಕ್ಯೂ 1300) ಚೆಕ್‌ಪೋಸ್ಟ್ ಟೆಂಟ್ ಒಳಗೆ ನುಗ್ಗಿದೆ. ಚೆಕ್‌ಪೋಸ್ಟ್ ಮುಂದೆ ಕುಳಿತ್ತಿದ್ದ ಕರ್ತವ್ಯ ನಿರತ ಚುನಾವಣಾ ಸಿಬ್ಬಂದಿ ಕೆಪಿಟಿಸಿಎಲ್‌ನ ಜೂನಿಯರ್ ಅಸಿಸ್ಟೆಂಟ್ ವೀರಭದ್ರಪ್ಪ ಅವರಿಗೆ ಕಾರು ಡಿಕ್ಕಿ ಹೊಡೆದಿದೆ. ಇದರ ಪರಿಣಾಮ ವೀರಭದ್ರಪ್ಪ ಬಲಗಾಲು ಮುರಿದಿದೆ. ಮತ್ತೊಂದು ಕಾಲಿಗೆ ಕೂಡ ಗಂಭೀರ ಗಾಯಗಳಾಗಿದೆ.

ಕಾರು ವೇಗವಾಗಿ ಅಡ್ಡಾದಿಡ್ಡಿಯಾಗಿ ಬರುವುದನ್ನು ಗಮನಿಸಿದ ಇತರೆ ಐವರು ಚುನಾವಣಾ ಸಿಬ್ಬಂದಿಗಳು ಚೆಲ್ಲಾಪಿಲ್ಲಿಯಾಗಿ ಓಡಿದ್ದಾರೆ. ಇದರಿಂದ ಇವರೆಲ್ಲಾ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕಾರು ಚಾಲಕ ಚುನಾವಣಾ ಚೆಕ್‌ಪೋಸ್ಟ್ ಟೆಂಟ್‌ಗೆ ಕಾರು ನುಗ್ಗಿಸಿ ಅಲ್ಲಿಂದ ಪರಾರಿಯಾಗಿದ್ದಾನೆ. ಆತ ಮದ್ಯಪಾನ ಮಾಡಿದ್ದರ ಪರಿಣಾಮ ಈ ಘಟನೆ ಸಂಭವಿಸಿರಬಹುದು ಎನ್ನಲಾಗಿದೆ.

ಗಂಭೀರವಾಗಿ ಗಾಯಗೊಂಡಿದ್ದ ವೀರಭದ್ರಪ್ಪ ಅವರನ್ನು ಆಂಬ್ಯುಲೆನ್ಸ್‌ನಲ್ಲಿ ಕೂಡಲೇ ನಗರದ ಕಾಳಿದಾಸ ರಸ್ತೆಯ ಬೃಂದಾವನ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.


ವೀರಭದ್ರಪ್ಪ ಅವರ ಕಾಲಿಗೆ ಇಂದು ವೈದ್ಯರು ಶಸ್ತ್ರ ಚಿಕಿತ್ಸೆ ನಡೆಸಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಅವರ ಪುತ್ರ ಶಿವರುದ್ರಸ್ವಾಮಿ ತಿಳಿಸಿದ್ದಾರೆ.

ವಿಷಯ ತಿಳಿದ ಜಿಲ್ಲಾಧಿಕಾರಿಗಳೂ ಆದ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆವಿ.ರಾಜೇಂದ್ರ ಇಂದು ಆಸ್ಪತ್ರೆಗೆ ಭೇಟಿ ನೀಡಿ ಘಟನೆ ಬಗ್ಗೆ ಮಾಹಿತಿ ಪಡೆದರು. ಜೊತೆಗೆ ವೀರಭದ್ರಪ್ಪ ಅವರ ಆರೋಗ್ಯ ವಿಚಾರಿಸಿದರು.

ಈ ಸಂಬಂಧ ಮೈಸೂರಿನ ವಿ.ವಿ.ಪುರಂ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪರಾರಿಯಾಗಿರುವ ಕಾರು ಚಾಲಕನ ಬಂಧನಕ್ಕೆ ಪೊಲೀಸರು ಶೋಧ ಕಾರ್ಯ ನಡೆಸಿದ್ದಾರೆ.

ದೋಣಿ ಸಾಗಲಿ ಮುಂದೆ ಹೋಗಲಿ... ಸಾಮರಸ್ಯದ ಸಂದೇಶ ಸಾರಲಿ...!

ರಂಗಾಯಣದ ಚಿಣ್ಣರ ಮೇಳದಲ್ಲಿ 'ಸಾಮರಸ್ಯ ಕಲಾ ದೋಣಿ ವಿಹಾರ' ವಿಶಿಷ್ಟ ಕಾರ್ಯಕ್ರಮ



ಮೈಸೂರು,ಏ.28(ಪಿಎಂ)– ದೋಣಿ ಸಾಗಲಿ ಮುಂದೆ ಹೋಗಲಿ... ಸಾಮರಸ್ಯದ ಸಂದೇಶ ಸಾರಲಿ...! ರಂಗಾಯಣದ ಅಂಗಳದಲ್ಲಿ ಸಾಗಿದ ಸಾಮರಸ್ಯದ ದೋಣಿಯಲ್ಲಿ ಚಿಣ್ಣರಿಂದ ಮೊಳಗಿಸಿದ ಸಂದೇಶವಿದು. ಇಲ್ಲಿ ಮಕ್ಕಳೇ ಸಾಮರಸ್ಯ ಸಂದೇಶ ರವಾನಿಸುವ ಪ್ರಯಾಣಿಕರು. ಅವರ ಪೋಷಕರೇ ಮಕ್ಕಳನ್ನು ಪ್ರೇರೇಪಿಸುವ ಅಂಬಿಗರು!

ಮೈಸೂರು ರಂಗಾಯಣವು 'ಸಮರಸವೇ ಜೀವನ' ಶೀರ್ಷಿಕೆಯಡಿ ಹಮ್ಮಿಕೊಂಡಿರುವ ಚಿಣ್ಣರ ಮೇಳ–2024ರಲ್ಲಿ (ಮಕ್ಕಳ ರಂಗತರಬೇತಿ ಶಿಬಿರ) ಭಾನುವಾರ ನಡೆದ 'ಸಾಮರಸ್ಯ ಕಲಾ ದೋಣಿ ವಿಹಾರ' ಎಂಬ ವಿಶಿಷ್ಟ ಕಾರ್ಯಕ್ರಮದಲ್ಲಿ ಮಕ್ಕಳು ವಿವಿಧ ವೇಷಭೂಷಣಗಳಲ್ಲಿ ಕಂಗೊಳಿಸಿ ಸಾಮರಸ್ಯದ ಮಹತ್ವ ಸಾರಿದರು.



ನೀರಿನಲ್ಲಲ್ಲ, ನೆಲದಲ್ಲಿ ಸಾಗಿದ ಕಲಾ ದೋಣಿಗಳಿವು. 'ಸಹಬಾಳ್ವೆಯ ಬದುಕಿನತ್ತ ಈ ಸಾಮರಸ್ಯ ದೋಣಿಗಳು ಸಾಗಲಿ', 'ಸ್ವಸ್ಥ ಸಮಾಜಕ್ಕಾಗಿ ಸಾಮರಸ್ಯ ವಿರಲಿ', 'ಸಾಮರಸ್ಯವು ಸಮಾಜದ ಆಮ್ಲಜನಕ', 'ಸಮಸ್ತವೂ ವಿಭಿನ್ನ, ಪ್ರತಿಯೊಂದು ಅನನ್ಯ' ಎಂಬ ಸಾರ್ಥಕ ಸಂದೇಶಗಳಿರುವ ಫಲಕಗಳನ್ನಿಡಿದು ಕಲಾ ದೋಣಿಯಲ್ಲಿ ಮಕ್ಕಳು ಸಾಗಿದರು. ನೆಲದಲ್ಲಿ ಸಾಗುವಂತೆ ಚಕ್ರಗಳನ್ನು ಹೊಂದಿದ್ದ 9 ಕಲಾ ದೋಣಿಗಳಲ್ಲಿ 9 ತಂಡದ ಮಕ್ಕಳು ಸಾಗಿದರು.

ರಾಧೆ ವೇಷದಲ್ಲಿ ಡಿಸಿ ಪುತ್ರಿ



ಚಿಣ್ಣರ ಮೇಳದಲ್ಲಿ ಪಾಲ್ಗೊಂಡಿರುವ ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರ ಪುತ್ರಿ ಆದ್ರಿತಿ 'ಸಾಮರಸ್ಯ ಕಲಾ ದೋಣಿ ವಿಹಾರ'ದಲ್ಲಿ ರಾಧೆ ವೇಷಧಾರಿಯಾಗಿ ಸಹಪಾಠಿಗಳೊಂದಿಗೆ ಹೆಜ್ಜೆ ಹಾಕಿ ಸಂಭ್ರಮಿಸಿದಳು. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರು ಆಗಮಿಸಿ ತಮ್ಮ ಪುತ್ರಿ ರಾಧೆ ವೇಷದಲ್ಲಿ ಸಾಮರಸ್ಯ ಸಂದೇಶ ಸಾರಿದ್ದನ್ನು ಕಣ್ತುಂಬಿಕೊಂಡರು. ಚುನಾವಣಾ ಕರ್ತವ್ಯದ ಹಿನ್ನೆಲೆಯಲ್ಲಿ ಸಾಕಷ್ಟು ಒತ್ತಡದಲ್ಲಿದ್ದ ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಡಾ.ಕೆವಿರಾಜೇಂದ್ರಅವರು, ಇಂದು ಬಿಡುವು ಮಾಡಿಕೊಂಡು ಕಾರ್ಯಕ್ರಮದಲ್ಲಿ ಎಲ್ಲಾ ಮಕ್ಕಳ ಪೋಷಕರಂತೆ ಪಾಲ್ಗೊಂಡು ಎಲ್ಲರ ಗಮನ ಸೆಳೆದರು.



ಮಕ್ಕಳು ವಿವಿಧ ವೇಷಧಾರಿಗಳಾಗಿ ದೋಣಿ ವಿಹಾರ ನಡೆಸಿ ಸಂಭ್ರಮಿಸಿದರು. ದೇಶದ ವಿವಿಧ ಭಾಗಗಳ ಸಂಸ್ಕೃತಿ–ಸಂಪ್ರದಾಯ ಬಿಂಬಿಸುವ ಉಡುಗೆ–ತೊಡುಗೆ ಧರಿಸಿ ವಿವಿಧತೆಯಲ್ಲಿ ಏಕತೆ ನಮ್ಮ ಭಾರತದ ವೈಶಿಷ್ಟ್ಯ ಎಂಬ ಭಾವೈಕ್ಯತೆಯ ಸಂದೇಶ ಸಾರಿದರು. ಅಲ್ಲದೆ, ದೇಶದ ಮಹನೀಯರ ವೇಷ ಧರಿಸಿ ಆ ಎಲ್ಲಾ ಮಹನೀಯರ ಸ್ಮರಿಸಿ ಅವರಿಗೆ ಗೌರವ ಸೂಚಿಸಿದರು.

ಮಹಾತ್ಮಗಾಂಧಿ ಡಾ.ಬಿ.ಆರ್. ಅಂಬೇಡ್ಕರ್, ಸುಭಾಷ್ ಚಂದ್ರ ಬೋಸ್, ಸ್ವಾಮಿ ವಿವೇಕಾನಂದ, ಭಗತ್ ಸಿಂಗ್, ಅಬ್ದುಲ್ ಕಲಾಂ, ವೀರ ರಾಣಿ ಕಿತ್ತೂರು ಚನ್ನಮ್ಮ, ಹೊನಕೆ ಓಬವ್ವ, ಛತ್ರಪತಿ ಶಿವಾಜಿ, ಸಾವಿತ್ರಿ ಬಾ ಫುಲೆ ಸೇರಿದಂತೆ ಮೊದಲಾದ ರಾಷ್ಟ್ರ ನಾಯಕರು, ಸಾಧು ಸಂತರು, ಸಮಾಜ ಸುಧಾರಕರ ವೇಷಧಾರಿಗಳಾಗಿ ಮಕ್ಕಳು ಸಂಭ್ರಮಿಸಿದರು.

ಇದಕ್ಕೂ ಮುನ್ನ ಖ್ಯಾತ ವನ್ಯಜೀವಿ ಛಾಯಾಗ್ರಾಹಕ ಕೃಪಾಕರ ಅವರು ಕಲಾ ದೋಣಿ ವಿಹಾರಕ್ಕೆ ಚಾಲನೆ ನೀಡಿ, ಇದೊಂದು ಅದ್ಭುತವಾದ ಪರಿಕಲ್ಪನೆಯೆಂದು ಮೆಚ್ಚುಗೆ ವ್ಯಕ್ತಪಡಿಸಿದರು. 325 ಮಕ್ಕಳು ಚಿಣ್ಣರ ಮೇಳದಲ್ಲಿ ಪಾಲ್ಗೊಂಡಿದ್ದು, ಏ.12ರಿಂದ ಆರಂಭಗೊಂಡಿರುವ ಮೇಳವು ಮೇ 7ರವರೆಗೆ ನಡೆಯಲಿದೆ. ರಂಗಾಯಣದ ಉಪನಿರ್ದೇಶಕಿ ನಿರ್ಮಲ ಮಠಪತಿ, ಶಿಬಿರದ ಸಂಯೋಜಕಿ ಗೀತಾ ಮೋಂಟಡ್ಕ, ಕಲಾ ನಿರ್ದೇಶಕ ಉಮೇಶ್ ಮತ್ತಿತರರು ಹಾಜರಿದ್ದರು.



ಮಕ್ಕಳಲ್ಲಿ ಪರಿಸರ, ಸಾಮರಸ್ಯ, ವಿಜ್ಞಾನದ ಪ್ರಜ್ಞೆ ಬೆಳೆಸುವುದು ಅತ್ಯಂತ ಅಗತ್ಯ: ಖ್ಯಾತ ವನ್ಯಜೀವಿ ಛಾಯಾಗ್ರಾಹಕ ಕೃಪಾಕರ

ಮೈಸೂರು,ಏ.28(ಪಿಎಂ)– ಮಕ್ಕಳಲ್ಲಿ ಪರಿಸರ, ಸಾಮರಸ್ಯ ಹಾಗೂ ವಿಜ್ಞಾನದ ಪ್ರಜ್ಞೆ ಬೆಳೆಸುವುದು ಅತ್ಯಂತ ಅಗತ್ಯ ಎಂದು ಖ್ಯಾತ ವನ್ಯಜೀವಿ ಛಾಯಾಗ್ರಾಹಕ ಕೃಪಾಕರ ಹೇಳಿದರು.

'ಸಾಮರಸ್ಯ ಕಲಾ ದೋಣಿ ವಿಹಾರ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕೇವಲ ಭಾರತದ ಸನ್ನಿವೇಶಕ್ಕೆ ಮಾತ್ರವಲ್ಲ, ಸಾಮರಸ್ಯ ಎಂಬುದು ಜಾಗತಿಕವಾಗಿಯೂ ಮುಖ್ಯ ಹಾಗಾಗಿ ಸರ್ಕಾರದ ಅಧೀನ ಸಂಸ್ಥೆಯಾದ ರಂಗಾಯಣವು ಮಕ್ಕಳಲ್ಲಿ ಸಾಮರಸ್ಯ ಮನೋಭಾವ ಬೆಳೆಸುತ್ತಿರುವುದು ಸ್ವಾಗತಾರ್ಹ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಕಲಾ ದೋಣಿ ವಿಹಾರ ಕಾರ್ಯಕ್ರಮದಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ ಧರ್ಮೀಯರು ಸೇರಿದಂತೆ ಎಲ್ಲಾ ಜಾತಿ ಜನಾಂಗ ಬಿಂಬಿಸುವ ವೇಷ ಧರಿಸಿ ಮಕ್ಕಳು ಭಾವೈಕ್ಯತೆ ಅನಾವರಣಗೊಳಿಸಿದ್ದಾರೆ. ಪ್ರಸ್ತುತಕ್ಕೆ ಸಾಮರಸ್ಯದ ಪರಿಕಲ್ಪನೆ ಅತ್ಯಂತ ಅಗತ್ಯ ಎಂದರು.

ಪರಿಸರ ಕಾಳಜಿಯನ್ನು ಮಕ್ಕಳಲ್ಲಿ ಬೆಳೆಸುವುದು ಮುಖ್ಯ. ಸ್ಥಳೀಯ ಪ್ರಾಕೃತಿಕ ತಾಣಗಳಿಗೆ ಮಕ್ಕಳನ್ನು ಕರೆದುಕೊಂಡು ಹೋಗಿ ಪರಿಸರದ ಕಾಳಜಿ ಬೆಳೆಸಬಹುದು. ನಮ್ಮ ದೇಶದಲ್ಲಿ ಬಹುತೇಕ ಸನ್ನಿವೇಶದಲ್ಲಿ ವಿಜ್ಞಾನ ಸ್ವೀಕರಿಸುವುದರಲ್ಲಿ ಹಿಂದುಳಿಯುವುದನ್ನು ಕಾಣುತ್ತಿದ್ದೇವೆ. ಹೀಗಾಗಿಯೇ 'ಮುಂದಿನ ಯುಗವಾದರೂ ವಿಜ್ಞಾನ ಯುಗವಾಗಲಿ' ಎಂದು ರಾಷ್ಟ್ರಕವಿ ಕುವೆಂಪು ಸಂದೇಶ ನೀಡಿದ್ದಾರೆ. ವಿಜ್ಞಾನಕ್ಕೆ ನಾವು ಪ್ರಾಮುಖ್ಯತೆ ನೀಡಬೇಕು. ಸಾಮರಸ್ಯ ಬೆಳೆಸಲು ವಿಜ್ಞಾನ ಸಹಕಾರಿ ಆಗಲಿದೆ. ವಿಜ್ಞಾನಕ್ಕೆ ಆದ್ಯತೆ ನೀಡಿದಾಗ ಪ್ರಶ್ನೆಗಳು ಬರಲಿದ್ದು, ಆಗ ಉತ್ತರಗಳು ಬರತೊಡಗಲಿವೆ. ಆ ಮೂಲಕ ಪರಿಹಾರಗಳು ದೊರಕಲಿವೆ ಎಂದು ಅವರು ತಿಳಿಸಿದರು.

'ಚೇಂದಂಡ' ತಂಡಕ್ಕೆ ಚಾಂಪಿಯನ್ ಪಟ್ಟ

● ನೆಲ್ಲಮಕ್ಕಡ ತಂಡಕ್ಕೆ ದ್ವಿತೀಯ ಸ್ಥಾನ ● ಕುಂಡ್ಯೋಳಂಡ ಕಪ್ ಹಾಕಿ ಉತ್ಸವಕ್ಕೆ ತೆರೆ

ಮಡಿಕೇರಿ, ಏ.28–ನಾಡಿನ ಹಾಕಿ ಪ್ರೇಮಿಗಳನ್ನು ತಿಂಗಳ ಕಾಲ ಸೂಜಿಗಲ್ಲಿನಂತೆ ತನ್ನತ್ತ ಸೆಳೆದಿದ್ದ ಕೊಡವ ಕೌಟುಂಬಿಕ ಕುಂಡ್ಯೋಳಂಡ ಕಪ್ ಹಾಕಿ ಉತ್ಸವದಲ್ಲಿ 'ಚೇಂದಂಡ' ತಂಡ ಪ್ರತಿಷ್ಠಿತ ಚಾಂಪಿಯನ್ ಪಟ್ಟ ಅಲಂಕರಿಸಿ ಬಲಿಷ್ಠ ತಂಡವಾಗಿ ಹೊರ ಹೊಮ್ಮಿದೆ.

ನಾಪೋಕ್ಲುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಹಾಕಿ ಉತ್ಸವದ ರೋಚಕ ಅಂತಿಮ ಪಂದ್ಯದ ಚೇಂದಂಡ ತಂಡ ಬಲಿಷ್ಠ ನೆಲ್ಲಮಕ್ಕಡ ತಂಡವನ್ನು 'ಟೈ ಬ್ರೇಕರ್' ಮೂಲಕ 8–7 ಗೋಲುಗಳ ಅಂತರದಿಂದ ಮಣಿಸಿ ವಿಜಯ ಮಾಲೆಯನ್ನು ತನ್ನ ಕೊರಳಿಗೇರಿಸಿಕೊಂಡಿತು.

ಮೈದಾನದಲ್ಲಿ ಕಿಕ್ಕಿರಿದು ತುಂಬಿದ್ದ ಸಹಸ್ರಾರು ಕ್ರೀಡಾಭಿಮಾನಿಗಳ ಹರ್ಷೋದ್ಗಾರಗಳ ನಡುವೆ ಆರಂಭಗೊಂಡ ಫೈನಲ್ ಪಂದ್ಯ ಸಮಬಲ ಪ್ರದರ್ಶನ ಮೂಲಕ ಪ್ರೇಕ್ಷಕರನ್ನು ತುದಿಗಾಲಿನ ಮೇಲೆ ನಿಲ್ಲಿಸಿತು. ತಮ್ಮ ನೆಚ್ಚಿನ ತಂಡಗಳಿಗೆ ಕ್ರೀಡಾಭಿಮಾನಿಗಳು ಬೆಂಬಲ ಸೂಚಿಸಿ ಪಂದ್ಯಾವಳಿಯ ರೋಚಕತೆಗೆ ಮತ್ತಷ್ಟು ಇಂಬು ನೀಡಿದರು.

ಗೆಲುವಿಗಾಗಿ ರೋಚಕ ಹೋರಾಟ: ಪಂದ್ಯಾವಳಿ ಪ್ರಾರಂಭವಾಗಿ ನಿಗದಿತ ಮೊದಲ ಕ್ವಾರ್ಟರ್‌ನಲ್ಲಿ ಎರಡೂ ತಂಡಗಳಿಂದ ಯಾವುದೇ ಗೋಲುಗಳು ದಾಖಲಾಗಲಿಲ್ಲ. ದ್ವಿತೀಯ ಕ್ವಾರ್ಟರ್‌ನ ಕೊನೆಯ 30ನೇ ನಿಮಿಷಕ್ಕೆ ಚೇಂದಂಡ ನಿಕಿನ್ ತಿಮ್ಮಯ್ಯ ಸೊಗಸಾದ ಗೋಲು ದಾಖಲಿಸಿ ತಂಡಕ್ಕೆ 1–0 ಮುನ್ನಡೆಯನ್ನು ದೊರಕಿಸಿಕೊಟ್ಟರು. ತೃತೀಯ ಕ್ವಾರ್ಟರ್‌ನಲ್ಲಿ ಮತ್ತಷ್ಟು ಆಕ್ರಮಣಕಾರಿ ಪ್ರದರ್ಶನ ನೀಡಿದ ಚೇಂದಂಡ ತಂಡದ ಮುನ್ನೆಲೆ ಆಟಗಾರ ನಿಕಿನ್ ತಿಮ್ಮಯ್ಯ 38ನೇ ನಿಮಿಷದಲ್ಲಿ ಮತ್ತೊಂದು ಗೋಲು ಬಾರಿಸಿ ತಂಡಕ್ಕೆ 2–0 ಗೋಲಿನ ಸ್ಪಷ್ಟ ಮುನ್ನಡೆಯನ್ನು ದೊರಕಿಸಿಕೊಟ್ಟರು.

ಪಂದ್ಯದ ಮೇಲೆ ಚೇಂದಂಡ ತಂಡ ಸಂಪೂರ್ಣ ಹಿಡಿತ ಸಾಧಿಸಿದೆ ಎನ್ನುವಷ್ಟರಲ್ಲೇ 4ನೇ ಕ್ವಾರ್ಟರ್‌ನಲ್ಲಿ ನೆಲ್ಲಮಕ್ಕಡ ತಂಡ ಮಾಡು ಇಲ್ಲವೆ ಮಡಿ ಎನ್ನುವ ನಿರ್ಧಾರ ತಳೆದಂತೆ ತೀವ್ರ ಪ್ರತಿ ಹೋರಾಟ ಸಂಘಟಿಸಿತು. 44ನೇ ನಿಮಿಷಕ್ಕೆ ನೆಲ್ಲಮಕ್ಕಡ ರೋಹನ್ ಮತ್ತು 54ನೇ ನಿಮಿಷದಲ್ಲಿ ನೆಲ್ಲಮಕ್ಕಡ ಮ್ಯಾಕ್ ಅವರು ತಲಾ ಒಂದೊಂದು ಗೋಲು ದಾಖಲಿಸುವ ಮೂಲಕ ಪಂದ್ಯವನ್ನು ಸಮಬಲಗೊಳಿಸಿದರು. ನಿಗದಿತ ಅವಧಿಯಲ್ಲಿ 2–2 ಗೋಲುಗಳನ್ನು ದಾಖಲಿಸಿದ್ದರಿಂದ ಪಂದ್ಯ 'ಡ್ರಾ' ಕಾಣುವಂತಾಯಿತು. ಪ್ರತಿಷ್ಠಿತ ಚಾಂಪಿಯನ್ ಪಟ್ಟಕ್ಕಾಗಿ ಎರಡು ಬಲಿಷ್ಠ ತಂಡಗಳ ಹೋರಾಟ ಮತ್ತಷ್ಟು ರೋಚಕತೆ ಪಡೆಯುವುದನ್ನು ಅರಿತ ಕ್ರೀಡಾಂಗಣದಲ್ಲಿ ನೆರೆದಿದ್ದ ಪ್ರೇಕ್ಷಕರು ಮುಗಿಲು ಮುಟ್ಟುವಂತೆ ಹರ್ಷೋದ್ಗಾರ ಮೊಳಗಿಸಿದರು.

'ಟೈ ಬ್ರೇಕರ್' ಅಳವಡಿಕೆ: ಸಮಬಲ ಸಾಧಿಸಿ ಪಂದ್ಯ ಡ್ರಾ ಆದ ಹಿನ್ನೆಲೆಯಲ್ಲಿ ವಿಜೇತ ತಂಡವನ್ನು ನಿರ್ಧರಿಸಲು ಟೈ ಬ್ರೇಕರ್ ಅಳವಡಿಸಲಾಯಿತು. ಈ ವೇಳೆ ಚೇಂದಂಡ ತಂಡ ಒಟ್ಟು 8 ಒಟ್ಟು ಗೋಲುಗಳನ್ನು ದಾಖಲಿಸಿದರೆ, ನೆಲ್ಲಮಕ್ಕಡ ತಂಡ ಕೇವಲ 7 ಗೋಲು ಮಾತ್ರ ಗಳಿಸಿ ಸೋಲೊಪ್ಪಿಕೊಂಡಿತು. ಚೇಂದಂಡ ತಂಡ ಬಲಿಷ್ಠ ತಂಡವಾಗಿ ಹೊರ ಹೊಮ್ಮುವ ಮೂಲಕ ಚಾಂಪಿಯನ್ ಪಟ್ಟದೊಂದಿಗೆ ಆಕರ್ಷಕ ಟ್ರೋಫಿಯನ್ನು ತನ್ನದಾಗಿಸಿಕೊಂಡಿತು.

ಕುಲ್ಲೇಟಿರಕ್ಕೆ ತೃತೀಯ ಸ್ಥಾನ: ಕುಲ್ಲೇಟಿರ ತಂಡ 3–2 ಗೋಲುಗಳ ಅಂತರದಿಂದ ಕುಪ್ಪಂಡ(ಕೈಕೇರಿ) ತಂಡವನ್ನು ಟೈ ಬ್ರೇಕರ್ ಮೂಲಕ ಪರಾಭವಗೊಳಿಸಿ ತೃತೀಯ ಸ್ಥಾನ ಪಡೆಯಿತು. ನಿಗದಿತ ಅವಧಿಯಲ್ಲಿ ತಲಾ 1 ಗೋಲನ್ನು ಗಳಿಸುವ ಮೂಲಕ ಪಂದ್ಯ ಡ್ರಾ ಕಂಡಿತ್ತು. ಟೈ ಬ್ರೇಕರ್‌ನಲ್ಲಿ ಗೆಲುವು ಸಾಧಿಸಿದ ಕುಲ್ಲೇಟಿರ ತಂಡ ತೃತೀಯ ಹಾಗೂ ಕುಪ್ಪಂಡ (ಕೈಕೇರಿ) 4ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.

'ಗಿನ್ನಿಸ್ ಬುಕ್ ಆಫ್ ರೆಕಾರ್ಡ್ಸ್'ನಲ್ಲಿ ಸ್ಥಾನ



ಗಿನ್ನಿಸ್ ದಾಖಲೆ ಪುಸ್ತಕಕ್ಕೆ ಸೇರ್ಪಡೆಯಾದ ಪ್ರಮಾಣ ಪತ್ರವನ್ನು ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ ಅವರಿಗೆ ಹಸ್ತಾಂತರಿಸಲಾಯಿತು.

ಮಡಿಕೇರಿ, ಏ.28–ನಾಪೋಕ್ಲುವಿನ ಕೆಪಿಎಸ್ ಶಾಲಾ ಮೈದಾನದ ಜನರಲ್ ತಿಮ್ಮಯ್ಯ ಮೈದಾನದಲ್ಲಿ ನಡೆದ 24ನೇ ವರ್ಷದ ಕೊಡವ ಕೌಟುಂಬಿಕ ಕುಂಡ್ಯೋಳಂಡ ಹಾಕಿ ಪಂದ್ಯಾವಳಿ 'ಗಿನ್ನಿಸ್ ಬುಕ್ ಆಫ್ ರೆಕಾರ್ಡ್ಸ್'ನಲ್ಲಿ ಸ್ಥಾನ ಪಡೆಯುವ ಮೂಲಕ ಚರಿತ್ರೆ ನಿರ್ಮಿಸಿದೆ.

ಈ ವರ್ಷದ ಕುಂಡ್ಯೋಳಂಡ ಹಾಕಿ ಉತ್ಸವದಲ್ಲಿ ದಾಖಲೆಯ 360 ತಂಡಗಳು ಪ್ರಶಸ್ತಿಗಾಗಿ ಪೈಪೋಟಿ ನಡೆಸಿದ್ದವು. ಒಟ್ಟು 3600ಕ್ಕೂ ಅಧಿಕ ಹಾಕಿ ಕ್ರೀಡಾಪಟುಗಳು ಪಂದ್ಯಾವಳಿಯಲ್ಲಿ ಪಾಲ್ಗೊಂಡು ತಮ್ಮ ಸಾಮರ್ಥ್ಯ ಪ್ರದರ್ಶಿಸಿದ್ದರು. ಮಕ್ಕಳು, ಯುವಕರು, ಯುವತಿಯರು, ಹಿರಿಯ ನಾಗರಿಕರು ಮೈದಾನದಲ್ಲಿ ಹಾಕಿ ಸ್ಟಿಕ್ ಹಿಡಿದು ಆಟವಾಡುವ ಮೂಲಕ ತಮ್ಮ ಕುಟುಂಬದ ತಂಡಗಳನ್ನು ಪ್ರತಿನಿಧಿಸಿದ್ದರು. ಇದು ವಿಶ್ವದಲ್ಲೆ ಅತೀ ದೊಡ್ಡ ಕೌಟುಂಬಿಕ ಹಾಕಿ ಪಂದ್ಯಾವಳಿ ಎಂದು ಮಾನ್ಯ ಮಾಡುವ ಮೂಲಕ ಗಿನ್ನಿಸ್ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ದಾಖಲು ಮಾಡಲಾಗಿದೆ.

ಭಾನುವಾರ ನಡೆದ ಅಂತಿಮ ಪಂದ್ಯಾವಳಿಯಲ್ಲಿ 'ಗಿನ್ನಿಸ್ ಬುಕ್ ಆಫ್ ರೆಕಾರ್ಡ್ಸ್' ಸಂಸ್ಥೆಯ ಸಮಿತಿ ಸದಸ್ಯ ಸ್ವಪ್ನಿಲ್, ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿ ಗಿನ್ನಿಸ್ ದಾಖಲೆ ಪುಸ್ತಕಕ್ಕೆ ಸೇರ್ಪಡೆಯಾಗಿರುವುದನ್ನು ಘೋಷಿಸಿದರು. ಬಳಿಕ ಪ್ರಮಾಣ ಪತ್ರವನ್ನು ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ ಅವರಿಗೆ ಹಸ್ತಾಂತರಿಸಿದರು.

ಈ ಸಂದರ್ಭ ಜಿಲ್ಲಾಧಿಕಾರಿ ವೆಂಕಟ್‌ರಾಜಾ, ಶಾಸಕ ಎ.ಎಸ್.ಪೊನ್ನಣ್ಣ, ಕುಂಡ್ಯೋಳಂಡ ಹಾಕಿ ಉತ್ಸವ ಸಮಿತಿಯ ಅಧ್ಯಕ್ಷ ರಮೇಶ್ ಮುದ್ದಯ್ಯ, ಸಂಚಾಲಕ ದಿನೇಶ್ ಕಾರ್ಯಪ್ಪ, ಮತ್ತಿತರರ ಗಣ್ಯರು ಉಪಸ್ಥಿತರಿದ್ದರು.

ವಿಜೇತ ತಂಡಗಳಿಗೆ ಬಹುಮಾನ ವಿತರಣೆ



ನಾಪೋಕ್ಲುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆದ ಕುಂಡ್ಯೋಳಂಡ ಕಪ್ ಹಾಕಿ ಉತ್ಸವದಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿದ ಚೇಂದಂಡ ತಂಡಕ್ಕೆ ಟ್ರೋಫಿ ನೀಡಲಾಯಿತು.



ರನ್ನರ್ಸ್ ನೆಲ್ಲಮಕ್ಕಡ ತಂಡಕ್ಕೆ ಟ್ರೋಫಿ ವಿತರಿಸಲಾಯಿತು.

24ನೇ ವರ್ಷದ ಕುಂಡ್ಯೋಳಂಡ ಕಪ್ ಹಾಕಿ ಉತ್ಸವದಲ್ಲಿ ವಿಜೇತ ತಂಡಗಳಿಗೆ ಬಹುಮಾನ ನೀಡಲಾಯಿತು.

ಪಂದ್ಯಾಟದಲ್ಲಿ ಚಾಂಪಿಯನ್ ತಂಡವಾಗಿ ಹೊರ ಹೊಮ್ಮಿದ ಚೇಂದಂಡ ತಂಡಕ್ಕೆ 4 ಲಕ್ಷ ರೂ. ನಗದು ಮತ್ತು ರೋಲಿಂಗ್ ಟ್ರೋಫಿ, ರನ್ನರ್ಸ್ ನೆಲ್ಲಮಕ್ಕಡ ತಂಡಕ್ಕೆ 3 ಲಕ್ಷ ರೂ. ನಗದು ಮತ್ತು ಟ್ರೋಫಿ, 3ನೇ ಸ್ಥಾನ ಪಡೆದ ಕುಲ್ಲೇಟಿರ ತಂಡಕ್ಕೆ 2 ಲಕ್ಷ ರೂ. ನಗದು ಹಾಗೂ 4ನೇ ಸ್ಥಾನ ಪಡೆದ ಕುಪ್ಪಂಡ(ಕೈಕೇರಿ) ತಂಡಕ್ಕೆ 1 ಲಕ್ಷ ರೂ. ನಗದು ಹಾಗೂ ಟ್ರೋಫಿ ನೀಡಲಾಯಿತು. ಅತ್ಯುತ್ತಮ ಆಟಗಾರರಿಗೆ ವೈಯಕ್ತಿಕ ಬಹುಮಾನ ನೀಡಿ ಗಣ್ಯರು ಸನ್ಮಾನಿಸಿದರು.

ಸಹಸ್ರಾರು ವೀಕ್ಷಕರು: ಕುಂಡ್ಯೋಳಂಡ ಹಾಕಿ ಕಪ್‌ನ ಅಂತಿಮ ಪಂದ್ಯಾವಳಿ ವೀಕ್ಷಿಸಲು ಕೊಡಗು ಸೇರಿದಂತೆ ಹೊರ ಭಾಗಗಳಿಂದ ಸಾವಿರಾರು ವೀಕ್ಷಕರು ಆಗಮಿಸಿದ್ದರು. ಮೈದಾನದಲ್ಲಿ 25 ಸಾವಿರ ಜನರು ಕುಳಿತು ಪಂದ್ಯಾವಳಿ ವೀಕ್ಷಿಸಲು ಗ್ಯಾಲರಿ ನಿರ್ಮಿಸಲಾಗಿತ್ತು. ಆದರೆ, ಸಂಪೂರ್ಣ ಗ್ಯಾಲರಿ ಭರ್ತಿಯಾಗುವುದರೊಂದಿಗೆ ಕ್ರೀಡಾಪ್ರೇಮಿಗಳು ಸುಡು ಬಿಸಿಲಿನಲ್ಲೇ ನಿಂತುಕೊಂಡು ಪಂದ್ಯಾವಳಿ ವೀಕ್ಷಿಸಿ ಸಂಭ್ರಮಿಸಿದರು. ಫೈನಲ್ ಬಳಿಕ ಕೊಡಗಿನ ಸಾಂಪ್ರದಾಯಿಕ ವಾಲಗಕ್ಕೆ ಮಕ್ಕಳು ಹಾಗೂ ಮಹಿಳೆಯರ ಸಹಿತ ಕ್ರೀಡಾ ಪ್ರೇಮಿಗಳು ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು.

ಆತಂಕ ಸೃಷ್ಟಿಸಿದ ಕಾಡಾನೆಗಳು



ಸುಂಟಿಕೊಪ್ಪ, ಏ.28– ಸುಂಟಿಕೊಪ್ಪ–ಚೆಟ್ಟಳ್ಳಿ ಮಾರ್ಗದ ಮತ್ತಿಕಾಡು ಬಳಿ ಹಗಲಿನಲ್ಲೇ ಎರಡು ಕಾಡಾನೆಗಳು ರಸ್ತೆ ದಾಡುವ ಮೂಲಕ ಆತಂಕ ಸೃಷ್ಟಿಸಿವೆ.

ಈ ಭಾಗದ ಕಾಫಿ ತೋಟದಲ್ಲಿ ಕಾಡಾನೆಗಳ ಹಿಂಡು ಬೀಡು ಬಿಟ್ಟಿದ್ದು, ಸಾರ್ವಜನಿಕರಲ್ಲಿ ಭೀತಿ ಮೂಡಿಸಿವೆ. ಇದರಿಂದ ಕಾಫಿ ತೋಟದಲ್ಲಿ ಕೆಲಸ ಮಾಡುವ ಕಾರ್ಮಿಕರು ಮತ್ತಷ್ಟು ಆತಂಕಕ್ಕೆ ಒಳಗಾಗಿದ್ದಾರೆ. ಅರಣ್ಯ ಇಲಾಖೆಯ ಸಿಬ್ಬಂದಿ ಕಾಡಾನೆಗಳನ್ನು ಸಮೀಪದ ಮೀನುಕೊಲ್ಲಿ ಅರಣ್ಯಕ್ಕೆ ಅಟ್ಟುವ ಕಾರ್ಯಾಚರಣೆ ನಡೆಸಿದರು.

ಚೆಂಬೆಬೆಳ್ಳೂರಲ್ಲಿ ಬೋಡು ಹಬ್ಬ ಆಚರಣೆ



ವಿರಾಜಪೇಟೆ, ಏ.28–ಸಮೀಪದ ಚೆಂಬೆಬೆಳ್ಳೂರು ಗ್ರಾಮದ ಭದ್ರಕಾಳಮ್ಮ ತಾಯಿಯ ಬೋಡು ಹಬ್ಬವನ್ನು ವಿಶಿಷ್ಟ ರೀತಿ ಆಚರಿಸಲಾಯಿತು.

ಚಂಡೆವಾದ್ಯಗಳ ನಡುವೆ ಮೈಯಿಗೆ ಬಣ್ಣ ಹಚ್ಚಿ ವ್ಯಾಘ್ರನಂತೆ ಗರ್ಜಿಸುವ ಹುಲಿ ವೇಷಧಾರಿಗಳು, ದೇವರಿಗೆ ಪ್ರಿಯವಾದ ದೋಳ್ ಪಾಟ್, ಕೆಸರನ್ನು ಮೈಗೆ ಹಚ್ಚಿಕೊಂಡು ಬಂಡ್ ಕಳಿ (ಕೆಸರು ವೇಷ), ಹುಲ್ಲನ್ನು ಹೊದ್ದುಕೊಂಡ ಪಿಲ್ಲ್ ಭೂತ, ಕಾಪಳ ವೇಷಧಾರಿಗಳು ವಿಶಿಷ್ಟವಾಗಿ ನೃತ್ಯ ಪ್ರದರ್ಶಿಸಿ ಬೋಡು ಹಬ್ಬ ಆಚರಿಸುವ ಮೂಲಕ ಹರಕೆ ತೀರಿಸಿದರು.

ಇದೇ ವೇಳೆ ಪಟ್ಟಣಿ ಹಬ್ಬ, ಪೊದಕೇರಿ, ಪೊದಕೋಟೆ, ನಡಿಕೇರಿ ಸೇರಿ ಮೂರು ಕೇರಿಗಳ ಬಿದಿರಿನ ಕೃತಕ ಕುದುರೆಯನ್ನು ದೇವಾಲಯಕ್ಕೆ ಸಾಂಪ್ರದಾಯವಾಗಿ ತಂದು ದೇವರಿಗೆ ಅರ್ಪಿಸಲಾಯಿತು.

ಕೇಂದ್ರ ಬರ ಪರಿಹಾರಕ್ಕಾಗಿ ಕಾಂಗ್ರೆಸ್‌ನಿಂದ ಹೋರಾಟ



ಚಾಮರಾಜ ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಮಾಧ್ಯಮ ಸಂಯೋಜಕ ಕೆರೆಹಳ್ಳಿ ನವೀನ್ ಮಾತನಾಡಿದರು. ಕೆಪಿಸಿಸಿ ರಾಜ್ಯ ಕಾರ್ಯದರ್ಶಿ ಪದ್ಮ ಪುರುಷೋತ್ತಮ್, ಜಿಪಂ ಮಾಜಿ ಸದಸ್ಯ ರಮೇಶ್ ಇತರರಿದ್ದರು.

ಚಾಮರಾಜನಗರ, ಏ.28–ಕೇಂದ್ರ ಸರ್ಕಾರ ರಾಜ್ಯಕ್ಕೆ ಹೆಚ್ಚಿನ ಬರ ಪರಿಹಾರ ನೆರವು ನೀಡಬೇಕೆಂದು ಒತ್ತಾಯಿಸಿ ಮುಂದಿನ ದಿನಗಳಲ್ಲಿ ಹೋರಾಟ ನಡೆಸುವುದಾಗಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಮಾಧ್ಯಮ ಸಂಯೋಜಕ ಕೆರೆಹಳ್ಳಿ ನವೀನ್ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ಒತ್ತಾಯ ಹಾಗೂ ಸುಪ್ರಿಂ ಕೋರ್ಟ್ ಆದೇಶದ ಮೇರೆಗೆ ಕೇಂದ್ರ ಸರ್ಕಾರ ಕರ್ನಾಟಕಕ್ಕೆ ಬರ ಪರಿಹಾರ ಅನುದಾನವಾಗಿ 3456 ಕೋಟಿ ರೂ. ನೀಡಿದೆ. ಇದರಿಂದ ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಕೊಟ್ಟಂತಾಗಿದೆ ಎಂದು ಆರೋಪಿಸಿದರು.

ಅಕ್ಟೋಬರ್‌ನಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕಂದಾಯ ಸಚಿವ ಕೃಷ್ಣ ಬೈರೇಗೌಡ ದೆಹಲಿಗೆ ತೆರಳಿ ಖುದ್ದು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ರಾಜ್ಯದ ವಾಸ್ತವ ಸ್ಥಿತಿಯನ್ನು ಮನವರಿಕೆ ಮಾಡಿಕೊಟ್ಟು 12,171 ಕೋಟಿ ರೂ. ಬರ ಪರಿಹಾರ ನೀಡುವಂತೆ ಮನವಿ ಸಲ್ಲಿಸಿದ್ದರು. ಆದರೆ, ಇದುವರೆಗೆ ಕೇಂದ್ರ ಸರ್ಕಾರ ಸ್ಪಂದನೆ ನೀಡಿರಲಿಲ್ಲ ಎಂದರು.

ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳ ಪರಿಣಾಮ ಮತದಾರರು ಕಾಂಗ್ರೆಸ್ ಪರವಾಗಿ ಹೆಚ್ಚಿನ ಒಲವು ಹೊಂದಿದ್ದು, ರಾಜ್ಯದಲ್ಲಿ ಮೊದಲ ಹಂತದಲ್ಲಿ ನಡೆದ 14 ಲೋಕಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ 10ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಜಯಗಳಿಸಲಿದೆ. ಚಾಮರಾಜನಗರ ಸೇರಿದಂತೆ ದಕ್ಷಿಣ ಕರ್ನಾಟಕದ ಅನೇಕ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಪ್ರಚಂಡ ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ರಾಜ್ಯ ಕಾರ್ಯದರ್ಶಿ ಪದ್ಮ ಪುರುಷೋತ್ತಮ್, ಜಿಪಂ ಮಾಜಿ ಸದಸ್ಯ ರಮೇಶ್, ಮುಖಂಡರಾದ ಕರಿನಂಜನಪುರಸ್ವಾಮಿ, ಶ್ರೀಕಾಂತ್, ಸೈಯದ್ ತೌಸಿಫ್ ಹಾಜರಿದ್ದರು.

ಇಂದು ಇಂಡಿಗನತ್ತದಲ್ಲಿ ಮರು ಮತದಾನ

● ಜಿಲ್ಲಾಡಳಿತದಿಂದ ಸಿದ್ಧತೆ ಪೂರ್ಣ ● ಚುನಾವಣಾಧಿಕಾರಿಗಳಿಂದ ಗ್ರಾಮಸ್ಥರಲ್ಲಿ ಜಾಗೃತಿ

ಚಾಮರಾಜನಗರ, ಏ.28–ಕಲ್ಲು ತೂರಾಟ, ಲಾಠಿ ಚಾರ್ಜ್, ಮತಗಟ್ಟೆ ಧ್ವಂಸ, ಇವಿಎಂ ಯಂತ್ರಕ್ಕೆ ಹಾನಿಯ ಘಟನೆ ನಡೆದು ಮತದಾನ ಪ್ರಕ್ರಿಯೆ ಸ್ಥಗಿತಗೊಂಡಿದ್ದ ಹನೂರು ತಾಲೂಕಿನ ಮಲೆಮಹದೇಶ್ವರ ಬೆಟ್ಟದ ಇಂಡಿಗನತ್ತ ಗ್ರಾಮದಲ್ಲಿ ಸೋಮವಾರ (ಏ.29) ಮರು ಮತದಾನ ನಡೆಸಲು ಜಿಲ್ಲಾಡಳಿತ ಸಕಲ ಸಿದ್ಧತೆ ಕೈಗೊಂಡಿದೆ.

ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮತಗಟ್ಟೆ ಸಂಖ್ಯೆ 146ರಲ್ಲಿ ಬೆಳಗ್ಗೆ 7 ರಿಂದ ಸಂಜೆ 6 ಗಂಟೆವರೆಗೆ ಮರು ಮತದಾನ ನಡೆಯಲಿದ್ದು, ಗ್ರಾಮದಲ್ಲಿ 528 ಮತದಾರರು ಇದ್ದಾರೆ. ಇವರ ಪೈಕಿ 9 ಮಂದಿ ಮಾತ್ರ ಏ.26ರಂದು ಮತದಾನ ಮಾಡಿದ್ದರು ಎಂದು ತಿಳಿದು ಬಂದಿದೆ.

ಮರು ಮತದಾನಕ್ಕೆ ಪಿಆರ್‌ಓ ಆಗಿ ಕೆ. ವೆಂಕಟೇಶ್, ಎಪಿಆರ್‌ಓ ಆಗಿ ಎಸ್.ಮಹದೇವಸ್ವಾಮಿ, ಪೋಲಿಂಗ್ ಆಫೀಸರ್‌ಗಳಾಗಿ ಎಸ್.ಚಂದ್ರ, ಕೆ.ಎಸ್.ಮಹದೇವಸ್ವಾಮಿ, ಕೆ.ಮಹೇಶ್ ಅವರನ್ನು ನಿಯೋಜಿಸಲಾಗಿದ್ದು, ಸ್ಥಳದಲ್ಲಿ ಪೊಲೀಸರು ಮೊಕ್ಕಾಂ ಹೂಡಿದ್ದಾರೆ. ಇನ್ನೂ ಚುನಾವಣಾಧಿಕಾರಿಗಳು ಮರು ಮತದಾನ ಹಿನ್ನೆಲೆಯಲ್ಲಿ ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸಿದ್ದಾರೆ.



ಮಲೆಮಹದೇಶ್ವರಬೆಟ್ಟದ ಇಂಡಿಗನತ್ತ ಗ್ರಾಮದ ಮತಗಟ್ಟೆಯನ್ನು ಚುನಾವಣಾಧಿಕಾರಿಗಳು ಪರಿಶೀಲಿಸಿದರು.

ಮತದಾನಕ್ಕೆ ಸಕಲ ವ್ಯವಸ್ಥೆ: ಮರು ಮತದಾನಕ್ಕೆ ಸಕಲ ವ್ಯವಸ್ಥೆ ಮಾಡಲಾಗಿದೆ. ಕಂದಾಯ, ಅರಣ್ಯ, ಪೊಲೀಸ್ ಇಲಾಖೆ ಸಿಬ್ಬಂದಿ ಈ ಮರು ಮತದಾನದಲ್ಲಿ ಕರ್ತವ್ಯ ನಿರ್ವಹಿಸಲಿದ್ದು, ಜಿಲ್ಲಾಡಳಿತ ಸೂಕ್ತ ಕ್ರಮ ಕೈಗೊಂಡಿದೆ. ಈಗಾಗಲೇ ಮತಗಟ್ಟೆ ಸಿಬ್ಬಂದಿ ಇಂಡಿಗನತ್ತ ಗ್ರಾಮಕ್ಕೆ ತೆರಳಿದ್ದು, ಮತದಾನ ಕುರಿತು ಗ್ರಾಮದಲ್ಲಿ ಟಾಂಟಾಂ ಮಾಡಲಾಗಿದೆ ಎಂದು ಸಹಾಯಕ ಚುನಾವಣಾಧಿಕಾರಿ ಮಲ್ಲಿಕಾರ್ಜುನ್ ತಿಳಿಸಿದ್ದಾರೆ.

ಕಡಿಮೆ ಮತದಾನ ಸಾಧ್ಯತೆ: ಏ.26ರಂದು ನಡೆದ ಘರ್ಷಣೆಯಿಂದ ಗ್ರಾಮದ 20 ಮಹಿಳೆಯರು ಸೇರಿದಂತೆ 33ಕ್ಕೂ ಹೆಚ್ಚು ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ. ಹೀಗಾಗಿ ಗ್ರಾಮಸ್ಥರು ಭಯಭೀತರಾಗಿದ್ದು, ಬಹುತೇಕ ಮಂದಿ ಗ್ರಾಮ ತೊರೆದಿದ್ದಾರೆ ಎನ್ನಲಾಗಿದೆ. ಮರು ಮತದಾನದಲ್ಲಿ ಮತದಾನ ಪ್ರಮಾಣ ಕಡಿಮೆಯಾಗುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

ನಿಷೇಧಾಜ್ಞೆ: ಮತದಾನ ಕೇಂದ್ರದಲ್ಲಿ ಕಾನೂನು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಏ.28ರ ಮಧ್ಯರಾತ್ರಿ 12 ಗಂಟೆಯಿಂದ ಏ.29ರ ಮಧ್ಯರಾತ್ರಿ 12 ಗಂಟೆ ವರೆಗೆ ಮತಗಟ್ಟೆಯ ಸುತ್ತಲು 100 ಮೀ. ಅಂತರದೊಳಗೆ ಕೆಲ ಷರತ್ತುಗಳನ್ನು ವಿಧಿಸಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಆದೇಶ ಹೊರಡಿಸಿದ್ದಾರೆ.

ಮೆರವಣಿಗೆ ಅಥವಾ 5 ಜನರಿಗಿಂತ ಹೆಚ್ಚು ಜನ ಸೇರುವುದನ್ನು ನಿಷೇಧಿಸಲಾಗಿದೆ. ಯಾವುದೇ ಮಾರಕಾಸ್ತ್ರ, ಶಸ್ತ್ರಾಸ್ತ್ರ, ಸ್ಫೋಟಕ ವಸ್ತುಗಳನ್ನು ಒಯ್ಯುವಂತಿಲ್ಲ. ಪ್ರತಿಕೃತಿ ಪ್ರದರ್ಶನ, ದಹನ ಮಾಡುವುದು ಮತ್ತು ಬಹಿರಂಗ ಘೋಷಣೆ ಇತ್ಯಾದಿಗಳನ್ನು ನಿರ್ಬಂಧಿಸಲಾಗಿದೆ. ಸಾರ್ವಜನಿಕವಾಗಿ ಯಾವುದೇ ವ್ಯಕ್ತಿ ಪ್ರಚೋದನಾತ್ಮಕ ಹಾಗೂ ಉದ್ರೇಕಕಾರಿ ಹಾಡುಗಳು, ಕೂಗಾಡುವುದು, ವ್ಯಕ್ತಿಗಳ ತೇಜೋವಧೆ ಮಾಡುವಂತಹ ಚಿತ್ರಗಳು, ಚಿಹ್ನೆಗಳು ಮುಂತಾದವುಗಳನ್ನು ಪ್ರದರ್ಶಿಸುವುದಾಗಲಿ, ಸಾರ್ವಜನಿಕರ ಗಾಂಭೀರ್ಯ, ನೈತಿಕತೆಗೆ ಭಂಗ ತರುವಂತಹ ಕೃತ್ಯಗಳಲ್ಲಿ ತೊಡಗುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ಕರಾಮುವಿಯಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ಚಾಮರಾಜನಗರ, ಏ.28– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕರ್ನಾಟಕ ಲೋಕ ಸೇವಾ ಆಯೋಗ ನಡೆಸುವ ಕೆಎಎಸ್ ಸೇರಿದಂತೆ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿಯನ್ನು ಮೈಸೂರಿನ ಕರಾಮುವಿ ಕೇಂದ್ರ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದೆ.

ಆಸಕ್ತರು ಏಪ್ರಿಲ್ 30ರ ಬೆಳಗ್ಗೆ 10 ರಿಂದ ಸಂಜೆ 4.30 ಗಂಟೆಯವರೆಗೆ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ದೂ.ಸಂ.0821–2515944 ಅನ್ನು ಸಂಪರ್ಕಿಸಬಹುದು ಎಂದು ಕೊಳ್ಳೇಗಾಲದ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾಲಯ ಪ್ರಾದೇಶಿಕ ನಿರ್ದೇಶಕರ ಕಚೇರಿ ಪ್ರಕಟಣೆ ತಿಳಿಸಿದೆ.

ಮುಂಜಾಗ್ರತಾ ಕ್ರಮ ವಹಿಸಿ

ಚಾಮರಾಜನಗರ: ಬಿಸಿಲಿನ ತಾಪಮಾನ ಅತಿಯಾದ ಶಾಖ ತರಂಗದಿಂದ ಹೀಟ್‌ಸ್ಟ್ರೋಕ್ ನಂತಹ ಆರೋಗದ್ಯ ಸಮಸ್ಯೆ ತಡೆಗೆ ಸಾರ್ವಜನಿಕರು ಅಗತ್ಯ ಮುಂಜಾಗ್ರತಾ ಕ್ರಮ ವಹಿಸುವಂತೆ ಆರೋಗ್ಯ ಇಲಾಖೆ ತಿಳಿಸಿದೆ. ಸಾರ್ವಜನಿಕರು ಬಿಸಿಲಿನ ರಕ್ಷಣೆಗೆ ಟೋಪಿ, ಕೊಡೆ ಸಹಾಯ ಪಡೆಯಬೇಕು. ದ್ರವ ಆಹಾರ, ಹಣ್ಣುಗಳನ್ನು ಸೇವಿಸಬೇಕು. ಹೆಚ್ಚಾಗಿ ನೀರು ಕುಡಿಯಬೇಕುಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಚಿದಂಬರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಣ ಹೊಳೆ ತಡೆಯಲು ಚುನಾವಣಾ ಆಯೋಗ ವಿಫಲ



ಚಾ.ನಗರದ ನಡೆದ ಸುದ್ದಿಗೋಷ್ಠಿಯಲ್ಲಿ ಬಿಎಸ್‌ಪಿ ಅಭ್ಯರ್ಥಿ ಎಂ.ಕೃಷ್ಣಮೂರ್ತಿ ಮಾತನಾಡಿದರು.

ಚಾಮರಾಜನಗರ, ಏ.28–ಲೋಕಸಭಾ ಚುನಾವಣೆಯಲ್ಲಿ ಹಣ ಹಾಗೂ ಹೆಂಡದ ಹೊಳೆ ತಡೆಯಲು ಚುನಾವಣಾ ಆಯೋಗ ವಿಫಲವಾಗಿದೆ ಎಂದು ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಎಸ್ಪಿ ಅಭ್ಯರ್ಥಿ ಎಂ.ಕೃಷ್ಣಮೂರ್ತಿ ಆರೋಪಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಹಣ, ಮದ್ಯದ ಹೊಳೆ ಹರಿದಿದೆ. ಮದ್ಯದ ಪಾಕೆಟ್ ಮೇಲೆ ಕಾಂಗ್ರೆಸ್ ಅಭ್ಯರ್ಥಿಯ ಭಾವಚಿತ್ರ ಹಾಕಿ ವಿತರಿಸಲಾಗಿದೆ. ಆ ಮೂಲಕ ಚುನಾವಣಾ ನೀತಿ ಸಂಹಿತೆಯನ್ನು ಗಾಳಿಗೆ ತೂರಲಾಗಿದೆ. ಚುನಾವಣೆಯಲ್ಲಿ ಹಣ, ಹೆಂಡದ ಹೊಳೆ ತಡೆಯುವ ನಿಟ್ಟಿನಲ್ಲಿ ಚುನಾವಣಾ ಆಯೋಗ ವಿಫಲವಾಗಿದೆ ಎಂದರು.

ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಎಚ್.ಸಿ.ಮಹದೇವಪ್ಪ ಸೇರಿ ಕಾಂಗ್ರೆಸ್‌ನ 7 ಶಾಸಕರಿದ್ದು, ಜೊತೆಗೆ ಸರ್ಕಾರದ 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದರೂ ಕಾಂಗ್ರೆಸ್‌ಗೆ ಸೋಲಿನ ಭೀತಿ ಎದುರಾಗಿದೆ. ನಾನು ಗೆಲ್ಲಲಿ, ಸೋಲಲಿ ಜಿಲ್ಲೆಯ ಅಭಿವೃದ್ಧಿಗೆ ಹೋರಾಡುತ್ತೇನೆ ಎಂದು ಹೇಳಿದರು.

ಈ ಬಾರಿ ಅನಿರೀಕ್ಷಿತವಾಗಿ ಸ್ಪರ್ಧಿಸಿದ್ದು, ಕ್ಷೇತ್ರದಲ್ಲಿ ಪಕ್ಷ ಸಂಘಟಿಸಿ ಮುಂಬರುವ ಗ್ರಾಪಂ, ತಾಪಂ, ಜಿಪಂ, ವಿಧಾನಸಭಾ ಚುನಾವಣೆಗಳಲ್ಲಿ ಶಕ್ತಿ ಮೀರಿ ಕೆಲಸ ಮಾಡುತ್ತೇನೆ. ಇಂಡಿಗನತ್ತ ಸೇರಿದಂತೆ ಇತರೆ ಕಾಡಂಚಿನ ಗ್ರಾಮಗಳಿಗೆ ಮೂಲಸೌಕರ್ಯ ಒದಗಿಸಲು ಜಿಲ್ಲಾಡಳಿತ, ಸರ್ಕಾರದ ಮೇಲೆ ಒತ್ತಡ ಹೇರಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಎಸ್ಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹ.ರಾ.ಮಹೇಶ್, ಜಿಲ್ಲಾಧ್ಯಕ್ಷ ಎನ್.ನಾಗಯ್ಯ, ಉಪಾಧ್ಯಕ್ಷ ಬ್ಯಾಡಮೂಡ್ಲು ಬಸವಣ್ಣ, ಪ್ರಧಾನ ಕಾರ್ಯದರ್ಶಿ ಬ.ಮ.ಕೃಷ್ಣಮೂರ್ತಿ, ಸಂಯೋಜಕ ರಾಜಶೇಖರ್, ಉಸ್ತುವಾರಿ ಅಮಚವಾಡಿ ಪ್ರಕಾಶ್ ಹಾಜರಿದ್ದರು.

ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ: ಅಪರಾಧಿಗೆ 20 ವರ್ಷ ಜೈಲು ಶಿಕ್ಷೆ

ಚಾಮರಾಜನಗರ, ಏ.28–ಅಪ್ರಾಪ್ತೆ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದ ಅಪರಾಧಿಗೆ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ವಿಶೇಷ ಪೋಕ್ಸೋ ನ್ಯಾಯಾಲಯ 20 ವರ್ಷ ಕಠಿಣ ಜೈಲು ಶಿಕ್ಷೆ ಹಾಗೂ 35 ಸಾವಿರ ರೂ. ದಂಡ ವಿಧಿಸಿ ತೀರ್ಪು ನೀಡಿದೆ.

ತಾಲೂಕಿನ ವಡ್ಗಲ್‌ಪುರ ಗ್ರಾಮದ ನಾಗೇಂದ್ರ (22) ಶಿಕ್ಷೆಗೊಳಗಾದ ಅಪರಾಧಿ. ಈತನ ವಿರುದ್ಧ 2021ರ ಜು.20ರಂದು ಚಾ.ನಗರ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಸಂಬಂಧ ತನಿಖಾಧಿಕಾರಿ ಬಿ.ಪುಟ್ಟಸ್ವಾಮಿ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ವಿಚಾರಣೆ ನಡೆದು ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ನ್ಯಾಯಾಧೀಶ ಎನ್.ಆರ್.ಲೋಕಪ್ಪ ನಾಗೇಂದ್ರನಿಗೆ 20 ವರ್ಷ ಕಠಿಣ ಜೈಲು ಶಿಕ್ಷೆ ಹಾಗೂ 35 ಸಾವಿರ ರೂ. ದಂಡ ವಿಧಿಸಿದ್ದಾರೆ. ನೊಂದ ಬಾಲಕಿಗೆ 3 ಲಕ್ಷ ರೂ. ಪರಿಹಾರವನ್ನು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ನೀಡಬೇಕೆಂದು ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಕೆ. ಯೋಗೇಶ್ ವಾದ ಮಂಡಿಸಿದ್ದರು.

ಸಂಭ್ರಮದ ಶ್ರೀರಾಮ ಪಟ್ಟಾಭಿಷೇಕ



ಯಳಂದೂರಿನ ದೇವಾಂಗ ಬೀದಿಯ ಶ್ರೀರಾಮ ಪಟ್ಟಾಭಿಷೇಕದಲ್ಲಿ ಭಕ್ತರಿಗೆ ಪ್ರಸಾದ ವಿನಿಯೋಗಿಸಲಾಯಿತು.

ಯಳಂದೂರು: ಪಟ್ಟಣದ ದೇವಾಂಗ ಬೀದಿಯ ಶ್ರೀರಾಮ ಮಂದಿರದಲ್ಲಿ ಶ್ರೀರಾಮ ಪಟ್ಟಾಭಿಷೇಕ ಮಹೋತ್ಸವ ಭಾನುವಾರ ಸಂಭ್ರಮದಿಂದ ನೆರವೇರಿತು.

ಈ ಶ್ರೀರಾಮಮಂದಿರ ಜಿಲ್ಲೆಯ ಪುರಾತನ ರಾಮಮಂದಿರಗಳಲ್ಲಿ ಒಂದಾಗಿದ್ದು, ನೂರಾರು ವರ್ಷಗಳಿಂದಲೂ ಇಲ್ಲಿ ರಾಮೋತ್ಸವ ಆಚರಿಸುವ ವಾಡಿಕೆ ಇದೆ. ರಾಮನವಮಿಯ ದಿನ ಶ್ರೀರಾಮ ದೇವರ ಪಟವನ್ನಿಟ್ಟು ವಿಶೇಷ ಪೂಜೆ ಮಾಡಿ ಪಟ್ಟಾಭಿಷೇಕ ಮಹೋತ್ಸವ ಹಮ್ಮಿಕೊಳ್ಳುವ ಸಂಪ್ರದಾಯ ಅನಾದಿ ಕಾಲದಿಂದಲೂ ರೂಢಿಯಲ್ಲಿದೆ.

ಈ ದೇಗುಲಕ್ಕೆ ಬೆಂಗಳೂರು, ತಮಿಳುನಾಡು ಸೇರಿದಂತೆ ಹಲವು ಕಡೆಗಳಲ್ಲೂ ಭಕ್ತರಿದ್ದು, ಪಟ್ಟಾಭಿಷೇಕದ ಸಮಯಲ್ಲಿ ಎಲ್ಲರೂ ಬಂದು ಪೂಜೆ ಸಲ್ಲಿಸುವ ವಾಡಿಕೆ ಇದೆ. ಅದರಂತೆ ಭಾನುವಾರ ನಡೆದ ಪಟ್ಟಾಭಿಷೇಕ ಕಾರ್ಯಕ್ರಮಕ್ಕೆ ದೇಗುಲದಲ್ಲಿ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿತ್ತು ದೇಗುಲ ಹಾಗೂ ದೇವಾಂಗ ಬೀದಿಯನ್ನು ತಳಿರು, ತೋರಣದಿಂದ ಸಿಂಗರಿಸಲಾಗಿತ್ತು. ಬೆಳಗ್ಗೆಯಿಂದಲೇ ವಿಶೇಷ ಪೂಜೆ ಹೋಮ ಹವನ ನೆರವೇರಿಸಲಾಯಿತು.

ವಿವಿಧ ಹಣ್ಣು, ದವಸ, ಧಾನ್ಯಗಳನ್ನಿಟ್ಟು ಪೂಜಿಸಲಾಯಿತು. ಮಧ್ಯಾಹ್ನ ಮಹಾಮಂಗಳಾರತಿ ಮಾಡುವ ಮೂಲಕ ಪೂಜಾ ಕಾರ್ಯಕ್ರಮ ಸಂಪನ್ನಗೊಳಿಸಲಾಯಿತು. ನಂತರ ನೆರೆದಿದ್ದ ಭಕ್ತರಿಗೆ ಪ್ರಸಾದ ಹಾಗೂ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ನೂರಾರು ಭಕ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಮೂಲಕ ಭಕ್ತಿ ಮೆರೆದರು.

ಇಂಡಿಗನತ್ತ ಗ್ರಾಮದಲ್ಲಿ ಮತಗಟ್ಟೆ ಧ್ವಂಸ; ಕಾಣದ ಕೈಗಳ ಕೃತ್ಯ

ಮಾಜಿ ಶಾಸಕ ನರೇಂದ್ರ ಆರೋಪ



ಹನೂರು, ಏ.28– ಲೋಕಸಭಾ ಚುನಾವಣೆ ಮತದಾನದ ವೇಳೆ ಹನೂರು ತಾಲೂಕಿನ ಇಂಡಿಗನತ್ತ ಗ್ರಾಮದಲ್ಲಿ ನಡೆದ ಗಲಭೆ ನಿಜಕ್ಕೂ ಬೇಸರದ ಸಂಗತಿ ಎಂದು ಮಾಜಿ ಶಾಸಕ ಆರ್. ನರೇಂದ್ರ ವಿಷಾದ ವ್ಯಕ್ತಪಡಿಸಿದರು.

ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂಡಿಗನತ್ತ ಗ್ರಾಮದಲ್ಲಿ ಲೋಕಸಭಾ ಚುನಾವಣೆಯ ದಿನದಂದು ಅಧಿಕಾರಿಗಳ ಮೇಲೆ ಹಲ್ಲೆ ಮಾಡಿರುವ ಘಟನೆ ಇದುವರೆಗೂ ನಡೆದಿರಲಿಲ್ಲ, ಹನೂರಿನ ರಾಜಕೀಯ ಇತಿಹಾಸದಲ್ಲಿಇದೇ ಮೊದಲು ಇಂಥಾ ಘಟನೆ ನಡೆದಿದೆ. ಕಾಡಂಚಿನ ಗ್ರಾಮಗಳಾದ ತುಳಸಿ ಕೆರೆ, ಮೆಂದಾರೆ, ಮೆದಗನಾಣೆ, ಇಂಡಿಗನತ್ತ, ಪಡಸಲನತ್ತ ಗ್ರಾಮದ ಜನರು ಮುಗ್ಧರಾಗಿದ್ದಾರೆ. ಇವರಿಗೆ ತೊಂದರೆ ಕೊಟ್ಟರೆ ಏನಾಗುತ್ತದೆ ಎಂಬ ಕಾನೂನಿನ ಅರಿವಿಲ್ಲ, ಕೆಲ ಕಾಣದ ಕೈಗಳು ಎತ್ತಿ ಕಟ್ಟಿ ರಾಜಕೀಯ ದಾಳವಾಗಿ ಬಳಸಿಕೊಂಡಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿದರು.

ಹಲವು ವರ್ಷಗಳಿಂದ ಮೂಲ ಸೌಲಭ್ಯಕ್ಕಾಗಿ ಹೋರಾಟ ಮಾಡಿಕೊಂಡು ಬಂದಿರುವ ಇಲ್ಲಿಯ ಜನತೆಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲಾಗಿದೆ. ಇನ್ನು ರಸ್ತೆ ವಿದ್ಯುತ್ ಸಮಸ್ಯೆ ಬಗೆಹರಿಸಬೇಕು. ಪ್ರಸ್ತುತ ಅರಣ್ಯ ಇಲಾಖೆ ಅಧಿಕಾರಿಗಳು ನಾಗಮಲೆಗೆ ಹೋಗುವ ಪಾದಯಾತ್ರಿಗಳಿಗೆ ನಿರ್ಬಂಧ ತಂದು ಜೀಪ್‌ಗಳನ್ನು ಬಿಡದೆ ಇರುವುದರಿಂದ ಈ ಗ್ರಾಮದ ಜನರಿಗೆ ಜೀವನ ನಿರ್ವಹಣೆಗೂ ತೊಂದರೆಯಾಗಿದೆ. ಇದನ್ನೇ ಬಂಡವಾಳ ಮಾಡಿಕೊಂಡಿರುವ ಪ್ರತಿಪಕ್ಷದವರು ಸರಕಾರಕ್ಕೆ ಕೆಟ್ಟ ಹೆಸರು ತರಲು ರಾಜಕೀಯ ದಾಳವನ್ನಾಗಿ ಬಳಸಿಕೊಂಡು ಇಂಡಿಗನತ್ತದ ಚಾಲಕರು ಹಾಗೂ ವ್ಯಾಪಾರಸ್ಥರನ್ನು ಎತ್ತಿ ಕಟ್ಟಿ ಈ ರೀತಿ ಮಾಡುತ್ತಿದ್ದಾರೆ ಎಂದರು.

ಮಾದಪ್ಪನ ಸನ್ನಿಧಿಯಲ್ಲಿ ಇಂತಹ ಅಚಾತುರ್ಯ ಘಟನೆ ನಡೆದಿರುವುದು ಕ್ಷೇತ್ರಕ್ಕೆ ಕಳಂಕ ತಂದಿದೆ. ಯಾರೋ ಮಾಡಿದ ತಪ್ಪಿಗೆ ಮುಗ್ಧ ಗ್ರಾಮಸ್ಥರು ಬಲಿಪಶುಗಳಾಗಿದ್ದಾರೆ. ಈ ಮುಗ್ಧ ಜನರನ್ನು ಇಟ್ಟುಕೊಂಡು ರಾಜಕೀಯ ಮಾಡಿರುವುದು ಸರಿಯಲ್ಲ ಎಂದು ಪಕ್ಷದ ಹೆಸರನ್ನು ಹೇಳದೆ ಮಾಜಿ ಶಾಸಕರು ತರಾಟೆ ತೆಗೆದುಕೊಂಡರು.

ಗ್ರಾಮದಲ್ಲಿ ನೈಜವಾಗಿ ಗಲಾಟೆ ಮಾಡಿರುವವರಿಗೆ ಕಾನೂನಿನಡಿ ಶಿಕ್ಷೆಯಾಗಲಿ, ಆದರೆ ತಪ್ಪೇ ಮಾಡದವರ ಹೆಸರನ್ನು ಸೇರಿಸಿರುವುದು ಗಮನಕ್ಕೆ ಬಂದಿದೆ. ತಪ್ಪು ಮಾಡದವರ ರಕ್ಷಣೆಗೆ ಸದಾ ನಿಂತು ತೊಂದರೆಯಾಗದಂತೆ ಕ್ರಮ ವಹಿಸುತ್ತೇನೆ ಎಂದು ಭರವಸೆ ನೀಡಿದರು. ಈ ವೇಳೆ ಪಪಂ ಸದಸ್ಯ ಗಿರೀಶ್ ಹಾಜರಿದ್ದರು.

ಒಂದನೇ ಪುಟದಿಂದ

ಕೆರೆಯಲ್ಲಿ ಮೀನುಗಳ ಸಾವು

ಕೆಲವೆಡೆ ಸತ್ತ ಮೀನು ಗಳಿಂದ ದುರ್ನಾತ ಬೀರುತ್ತಿದ್ದು, ವಾಯು ವಿಹಾರಿಗಳು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಮೈಸೂರಿನ ಹೃದಯಭಾಗದಲ್ಲಿರುವ ಕುಕ್ಕರಹಳ್ಳಿ ಕೆರೆಯನ್ನು ವಿವಿಧ ಬಗೆಯ ಪಕ್ಷಿ ಸಂಕುಲ ಆವಾಸ ಸ್ಥಾನವಾಗಿ ಅವಲಂಭಿಸಿದ್ದು, ವಿವಿಧೆಡೆಯಿಂದ ಅಪರೂಪದ ಪಕ್ಷಿ ಸಂಕುಲ ಕುಕ್ಕರಹಳ್ಳಿಕೆರೆಗೆ ಆಗಮಿಸುತ್ತವೆ. ಅತ್ಯುತ್ತಮ ಪರಿಸರದ ವಾತಾವರಣವಿರುವ ಕುಕ್ಕರಹಳ್ಳಿ ಕೆರೆಗೆ ಮಳೆಗಾಲದಲ್ಲಿ ಒಳಚರಂಡಿ ನೀರು ಸೇರುತ್ತಿದ್ದು, ಕೆರೆಯನ್ನು ಸಂರಕ್ಷಿಸುವಂತೆ ಕಳೆದ ಹಲವು ವರ್ಷಗಳಿಂದ ಪರಿಸರವಾದಿ ಗಳು ಆಗ್ರಹಿಸುತ್ತಿದ್ದಾರೆ. ಇದರ ನಡುವೆ ಕುಕ್ಕರಹಳ್ಳಿ ಕೆರೆಯಲ್ಲಿ ಪದೇ ಪದೇ ಮೀನುಗಳ ಮಾರಣ ಹೋಮ ನಡೆಯುತ್ತಿರುವುದು ಆತಂಕ ಹೆಚ್ಚಿಸಿದೆ. ಕಳೆದ ಮೂರು ತಿಂಗಳ ಹಿಂದಷ್ಟೇ ಮೀನು ಗಾರಿಕೆಯಿಂದಾಗಿ ಬಲೆಗೆ ಸಿಲುಕಿ ಹಲವು ಮೀನುಗಳು ಮೃತಪಟ್ಟಿದ್ದವು. ಇದೀಗ ಬಿಸಿಲಿನ ಬೇಗೆಗೆ ಮೀನುಗಳು ಸಾವನ್ನಪ್ಪುತ್ತಿರುವುದು ಪರಿಸರವಾದಿ ಹಾಗೂ ವಾಯುವಿಹಾರಿಗಳಲ್ಲಿ ಆತಂಕ ನಿರ್ಮಾಣವಾಗಿದೆ.

ಸತ್ತ ಮೀನುಗಳ ತೆರವು: ವಾಯು ವಿಹಾರಿಗಳು ನೀಡಿದ ದೂರಿನ ಮೇರೆಗೆ ಮೈಸೂರು ವಿಶ್ವವಿದ್ಯಾನಿಲಯದ ತೋಟ ಗಾರಿಕಾ ವಿಭಾಗದ ಸಹಾಯಕ ನಿರ್ದೇಶಕ ಮುಜಾವರ್ ಕುಕ್ಕರಹಳ್ಳಿ ಕೆರೆಗೆ ಆಗಮಿಸಿ, ಸಿಬ್ಬಂದಿಗಳಿಂದ ತೆಪ್ಪದಲ್ಲಿ ಕೆರೆಯಲ್ಲಿ ತೇಲುತ್ತಿದ್ದ ಸತ್ತ ಮೀನುಗಳ ಕಳೆಬರವನ್ನು ತೆರವುಗೊಳಿಸಿದರು. ಸತ್ತ ಮೀನುಗಳು ಕೊಳೆತ ಸ್ಥಿತಿಗೆ ತಲುಪಿದ್ದರಿಂದ ಪಕ್ಷಿಗಳು ಸೇವಿಸಿ ಅನಾರೋಗ್ಯಕ್ಕೀಡಾಗಬಹುದೆಂಬ ಅನುಮಾನ ಕಾಡುತ್ತಿತ್ತು. ಈ ಹಿನ್ನೆಲೆಯಲ್ಲಿ ತೆರವು ಕಾರ್ಯಾಚರಣೆ ತರ್ತಾಗಿ ನಡೆಸಿ ಸತ್ತ ಮೀನುಗಳನ್ನು ಕೆರೆಯಿಂದ ಮೇಲೆತ್ತಿ, ಸುರಕ್ಷಿತ ಸ್ಥಳದಲ್ಲಿ ಹೂಳಲಾಯಿತು.

ಕಾಂಗ್ರೆಸ್ ನುಂಗಿ ನೀರು ಕುಡಿದಿದೆ

ಬಂದರೆ ವರ್ಷಕ್ಕೆ ಒಬ್ಬೊಬ್ಬರು ಪ್ರಧಾನಿ ಆಗುತ್ತಾರೆ. ಆದ್ದರಿಂದ ಈ ಬಾರಿ ಯೋಚಿಸಿ ಮತ ಹಾಕಿ ಎಂದು ಸಲಹೆ ನೀಡಿದ್ದಾರೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಇವರು ರದ್ದು ಮಾಡಿದ್ದಾರೆ. ಇದರಿಂದ ದೇಶದ ಯುವಕರಿಗೆ ನಷ್ಟವಾಗಿದೆ. ನೀರಾವರಿ ಸೇರಿದಂತೆ ಎಲ್ಲಾ ಯೋಜನೆಯನ್ನು ರಾಜ್ಯ ಕಾಂಗ್ರೆಸ್ ಬಂದ್ ಮಾಡಿದೆ. ಬಸವಣ್ಣನವರ ಭೂಮಿಯಲ್ಲಿ ಕಾಂಗ್ರೆಸ್ ತಪ್ಪು ಮಾಡುತ್ತಿದೆ. ಜನತೆಗೆ ಘೋರ ಪಾಪ ಮಾಡಿದೆ ಎಂದು ವಾಗ್ದಾಳಿ ನಡೆಸಿದ್ದಾರೆ. ಅಲ್ಲದೇ ನಿಮ್ಮ ಮಕ್ಕಳ ಮುಂದಿನ ಭವಿಷ್ಯಕ್ಕೆ ಹಣ ಕೂಡಿಡುವ ಹಾಗೆ ಇಲ್ಲ. ಏಕೆಂದರೆ ಕಾಂಗ್ರೆಸ್ ಪಿತ್ರಾರ್ಜಿತ ಆಸ್ತಿ ತೆರಿಗೆ (55%) ಐಡಿಯಾದೊಂದಿಗೆ ಬರುತ್ತಿದೆ. ಅಲ್ಲದೇ ಎಲ್ಲವನ್ನೂ ಉಚಿತವಾಗಿ ಕೊಡಲು ಹೊರಟಿದೆ. ನೀವೇ ಯೋಚನೆ ಮಾಡಿ. ಎಲ್ಲವನ್ನೂ ಉಚಿತವಾಗಿ ಕೊಟ್ಟರೆ, ಯಾರಾದರೂ ಕೆಲಸ ಮಾಡುತ್ತಾರಾ? ಹಾಗಾಗಿ ಅಭಿವೃದ್ಧಿ ಬಯಸುವ ಜನರು ನಮ್ಮೊಂದಿಗೆ ನಿಲ್ಲಬೇಕು ಎಂದು ಕರೆ ಕೊಟ್ಟಿದ್ದಾರೆ. ಇದೇ ವೇಳೆ ದಾವಣಗೆರೆ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ್ ಹಾಗೂ ಹಾವೇರಿಯಿಂದ ಬಸವರಾಜ್ ಬೊಮ್ಮಾಯಿ ಅವರಿಗೆ ಮತ ನೀಡಿ ಗೆಲ್ಲಿಸುವಂತೆ ಮೋದಿ ಮನವಿ ಮಾಡಿದರು.

ಪವಿತ್ರ ಸರಯೂ ನದಿ ನೀರು ಪೂರೈಕೆ!

ಸರ್ಕಾರದ ಕಾರ್ಯವನ್ನು ಅಯೋಧ್ಯ ರಾಮಜನ್ಮಭೂಮಿ ಟ್ರಸ್ಟ್ ಶ್ಲಾಘಿಸಿದ್ದು, ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವಲ್ಲಿ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಬೆಳೆಸುವಲ್ಲಿ ಇದರ ಮಹತ್ವ ಅಧಿಕವಾಗಿದೆ ಎಂದು ಹೇಳಿದೆ.

ಈ ಬಗ್ಗೆ ಮಾತನಾಡಿರುವ ಅಯೋಧ್ಯಾ ತೀರ್ಥ ವಿಕಾಸ ಪರಿಷತ್‌ನ ಸಿಇಒ ಸಂತೋಷ್ ಕುಮಾರ್ ಶರ್ಮಾ ಅವರು, ಶ್ರೀಲಂಕಾದಲ್ಲಿ ಸೀತಾ ಅಮ್ಮನ ದೇವಾಲಯವನ್ನು ನಿರ್ಮಿಸಲಾಗುತ್ತಿದೆ. ದೇವಾಲಯದ ಪ್ರತಿನಿಧಿಯು ಉತ್ತರ ಪ್ರದೇಶ ಸರ್ಕಾರದಿಂದ ಸರಯೂ ನದಿ ನೀರನ್ನು ಕೇಳಿದ್ದಾರೆ. ನಾವು ಪವಿತ್ರ ನೀರನ್ನು ಕಲಶದಲ್ಲಿ ಇಟ್ಟು ರವಾನಿಸುತ್ತೇವೆ. ಮೇ 19 ರಂದು ಧಾರ್ಮಿಕ ಕ್ರಿಯೆಗಳು ನಡೆಯಲಿದ್ದು, ಈ ಕ್ರಿಯೆಗಳಿಗೆ ಇದೇ ಪವಿತ್ರ ಜಲವನ್ನು ಬಳಕೆ ಮಾಡಲಾಗುತ್ತದೆ ಎಂದು ಹೇಳಿದರು.

ಸೀತಾ ಅಮ್ಮನ ದೇವಸ್ಥಾನದಲ್ಲಿ ನಡೆಯುವ ಸಮಾರಂಭವು ಭಾರತ ಮತ್ತು ಶ್ರೀಲಂಕಾ ನಡುವಿನ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಬಾಂಧವ್ಯವನ್ನು ಸಂಕೇತಿಸುವ ಎರಡೂ ರಾಷ್ಟ್ರಗಳ ಹೃದಯಗಳನ್ನು ಒಂದುಗೂಡಿಸುವ ಗುರಿಯನ್ನು ಹೊಂದಿದೆ. ಏತನ್ಮಧ್ಯೆ, ಶ್ರೀಲಂಕಾದ ಸೀತಾ ಅಮ್ಮನ ದೇವಾಲಯವು ಎಲ್ಲಾ ಸನಾತನಿಗಳಿಗೆ ಹೆಮ್ಮೆಯ ವಿಷಯವಾಗಲಿದೆ ಎಂದು ಮಹಂತ್ ಶಶಿಕಾಂತ್ ದಾಸ್ ಪ್ರಧಾನಿ ನರೇಂದ್ರ ಮೋದಿಯವರ ಪ್ರಯತ್ನವನ್ನು ಶ್ಲಾಘಿಸಿದರು. "ಇದು ಎಲ್ಲಾ ಸನಾತನಿಗೆ ಹೆಮ್ಮೆಯ ವಿಷಯವಾಗಿದೆ. ಲಂಕಾದಲ್ಲಿ ಸೀತಾದೇವಿಯು ಅನೇಕ ಕಷ್ಟಗಳನ್ನು ಎದುರಿಸಿದ್ದಾರೆ ಮತ್ತು ಇಂದು ಅದೇ ಲಂಕಾದಲ್ಲಿ ಭವ್ಯವಾದ ದೇವಾಲಯವನ್ನು ನಿರ್ಮಿಸಲಾಗುತ್ತಿದೆ" ಎಂದು ಶಶಿಕಾಂತ್ ದಾಸ್ ಮಹಂತ್ ಹೇಳಿದ್ದಾರೆ.

ಕಾಂಗ್ರೆಸ್ ಪ್ರತಿಭಟನೆ

ಒಕ್ಕೂಟ ವ್ಯವಸ್ಥೆಯಲ್ಲಿ ಪ್ರಕೃತಿ ವಿಕೋಪ ಸಂಭವಿಸಿದಾಗ ಎನ್‌ಡಿಆರ್‌ಎಫ್‌ನಿಂದ ಪರಿಹಾರ ಕೊಡಬೇಕಾಗಿರುವುದು ಕೇಂದ್ರ ಸರ್ಕಾರದ ಕರ್ತವ್ಯ. ನಾವು ಭಿಕ್ಷೆ ಕೇಳುತ್ತಿಲ್ಲ, ರಾಜ್ಯದ 48 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಬರಗಾಲದಿಂದ ನಷ್ಟ ಆಗಿದೆ. 35 ಸಾವಿರ ಕೋಟಿಗೂ ಹೆಚ್ಚು ಬೆಲೆಯ ಬೆಳೆ ನಷ್ಟವಾಗಿದೆ. ನಾವು 18,172 ಕೋಟಿ ಎನ್ ಡಿಆರ್ ಎಫ್ ನಿಯಮ ಪ್ರಕಾರ ಕೇಳಿದೆವು. ಆದರೆ ಸಿಕ್ಕಿದ್ದು ಕೇವಲ 3,454 ಕೋಟಿ ರೂಪಾಯಿ ಶೇಕಡಾ 19ಕ್ಕಿಂತ ಕಡಿಮೆ ನೀಡಿದ್ದಾರೆ. ಕೇಂದ್ರದಿಂದ ಬಂದಿರುವ ಪರಿಹಾರ ಕಡಿಮೆಯಾಗಿದೆ ಎಂದು ಇಂದು ಪ್ರತಿಭಟನೆ ಮಾಡುತ್ತಿದ್ದೇವೆ, ರೈತರಿಗೆ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಅನ್ಯಾಯ ಮಾಡುತ್ತಿದ್ದಾರೆ, ರಾಜ್ಯಕ್ಕೆ ಅನ್ಯಾಯ ಮಾಡುವುದು ಸರಿಯೇ ಎಂದು ಪ್ರಶ್ನಿಸಿದರು.

ಪಾದಯಾತ್ರೆ: ಇಲ್ಲಿ ಪ್ರತಿಭಟನೆ ಮಾಡಿದ ನಂತರ ದೇವರಾಜ ಅರಸು ಪ್ರತಿಮೆ ಬಳಿಗೆ ಪಾದಯಾತ್ರೆ ನಡೆಸುತ್ತೇವೆ ಎಂದು ಸಿಎಂ ಹೇಳಿದರು. ರಾಜ್ಯದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಮಾಡಿಕೊಂಡು ಜನತೆಗೆ ಸುಳ್ಳು ಹೇಳುತ್ತಾ ದ್ರೋಹ ಮಾಡುತ್ತಿದೆ ಎಂದರು. ನರೇಗಾ ಅಡಿ 150 ದಿನಗಳ ಕೂಲಿಯನ್ನು ಕಾರ್ಮಿಕರಿಗೆ ನೀಡಿಲ್ಲ, ಮೋದಿಯವರು ಎಲ್ಲಾ ವಿಷಯದಲ್ಲಿ ನಮಗೆ ಚೊಂಬು ಕೊಟ್ಟಿದ್ದಾರೆ ಎಂದು ಟೀಕಿಸಿದರು. ಈ ವೇಳೆ ಮಾತನಾಡಿದ ಡಿಸಿಎಂ ಡಿ ಕೆ ಶಿವಕುಮಾರ್, ಕಳೆದ ಸೆಪ್ಟೆಂಬರ್ ನಿಂದ ಇಲ್ಲಿಯವರೆಗೆ 50 ಸಾವಿರ ಕೋಟಿ ರೂಪಾಯಿ ಹಾನಿಯಾಗಿದೆ. ಅನೇಕರಿಗೆ ಉದ್ಯೋಗ ಸಿಕ್ಕಿಲ್ಲ. ನರೇಗಾ ವಿಚಾರದಲ್ಲಿ ಕೂಲಿ ಮಾಡಲು ಹಣ ಕೊಟ್ಟಿಲ್ಲ. ನಮ್ಮ ಹಕ್ಕನ್ನು ನಾವು ಕೇಳುತ್ತಿದ್ದೇವೆ. ಸೆಪ್ಟೆಂಬರ್ ತಿಂಗಳಿನಿಂದ ಆಗಿರುವ ನಷ್ಟವನ್ನು ಸೇರಿಸಿ ಕೇಂದ್ರ ಸರ್ಕಾರ ಪರಿಹಾರ ನೀಡಬೇಕು. ನಮ್ಮ ಹೋರಾಟ ಇಲ್ಲಿಗೆ ನಿಲ್ಲುವುದಿಲ್ಲ, ಮುಂದುವರಿಯುತ್ತದೆ ಎಂದರು.

ಮರಳಿ 'ಸುಪ್ರೀಂ' ಮೊರೆ ಹೋಗುತ್ತೇವೆ

ಬರ ಪರಿಹಾರದ ಹಣ ಸಂಪೂರ್ಣವಾಗಿ ಬಿಡುಗಡೆ ಮಾಡುವವರೆಗೂ ಪ್ರಧಾನಿ ಮೋದಿ, ಕೇಂದ್ರ ಸಚಿವ ಅಮಿತ್ ಶಾ ಕರ್ನಾಟಕ್ಕೆ ಬರಬಾರದು. ಲೋಕಸಭೆ ಚುನಾವಣೆಯಲ್ಲಿ ರಾಜ್ಯದ ಜನರ ಬೆಂಬಲ ಕೇಳುವ ಯಾವುದೇ ನೈತಿಕ ಹಕ್ಕು ಹೊಂದಿಲ್ಲ. ಈ ಅನ್ಯಾಯ ನಮ್ಮ ಪಕ್ಷದ ಅಭ್ಯರ್ಥಿಗಳು, ಶಾಸಕರು, ವಿಧಾನಪರಿಷತ್ ಸದಸ್ಯರು ಜನತಾ ನ್ಯಾಯಾಲಯಕ್ಕೆ ಒಯ್ಯುತ್ತಾರೆ. ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಗೆ ಏನು ಮಾಡಬೇಕೆಂಬುದನ್ನೂ ನಿರ್ಧರಿಸುತ್ತಾರೆ ಎಂದು ಹೇಳಿದರು.

ಮೈಸೂರಿಗೆ ಆಗಮಿಸಿದ ಜೈನ ಮುನಿಗಳಿಗೆ ಪೂರ್ಣಕುಂಭ ಸ್ವಾಗತ; ನಂದಿ ಧ್ವಜ, ಡೊಳ್ಳು ಕುಣಿತ, ಕಂಸಾಳೆಯೊಂದಿಗೆ ಮೆರವಣಿಗೆ

ಮೈಸೂರಲ್ಲಿ ಮೂರು ದಿನ ವಾಸ್ತವ್ಯ ಹೂಡಿ, ಪ್ರವಚನ





ಮೈಸೂರಿಗೆ ಆಗಮಿಸಿದ ಆಚಾರ್ಯ 108 ಶ್ರೀ ಅಂತರ್ಮನ ಪ್ರಸನ್ನ ಸಾಗರ್ ಮಹಾರಾಜ್ ಮತ್ತು ಅವರ ಪರಿವಾರದವರನ್ನು ಪೂರ್ಣಕುಂಭ ಸ್ವಾಗತ ನೀಡಿ ಬರಮಾಡಿಕೊಳ್ಳಲಾಯಿತು. ಮತ್ತೊಂದು ಚಿತ್ರದಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ಶ್ರೀವತ್ಸ ಮತ್ತು ಹಿರಿಯ ವಕೀಲ ಹರೀಶ್ ಹೆಗ್ಡೆ ಅವರು ಮುನಿಗಳ ಆಶೀರ್ವಾದ ಪಡೆದುಕೊಂಡರು.

ಮೈಸೂರು, ಏ.28(ಜಿಎ)–ಮೈಸೂರಿಗೆ ಆಗಮಿಸಿದ ಆಚಾರ್ಯ 108 ಶ್ರೀ ಅಂತರ್ಮನ ಪ್ರಸನ್ನ ಸಾಗರ್ ಮಹಾರಾಜ್ ಮತ್ತು ಅವರ ಪರಿವಾರದವರನ್ನು ನಗರದ ಫೌಂಟನ್ ಸರ್ಕಲ್ ಬಳಿ ಜೈನ ಸಮುದಾಯದವರು ಪೂರ್ಣಕುಂಭ ಸ್ವಾಗತ ನೀಡಿ ಬರಮಾಡಿಕೊಂಡರು.

ಶ್ರವಣಬೆಳಗೊಳದಿಂದ ಮೈಸೂರು ನಗರಕ್ಕೆ ಧರ್ಮ ಜಾಗೃತಿಗಾಗಿ ಆಗಮಿಸಿದ ಆಚಾರ್ಯ 108 ಶ್ರೀ ಅಂತರ್ಮನ ಪ್ರಸನ್ನ ಸಾಗರ್ ಮಹಾರಾಜ್ ಮತ್ತು ಅವರ ಪರಿವಾರದವರನ್ನು ಜೈನ್ ಸಮುದಾಯದ ಮುಖಂಡರು ಹಾಗೂ ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ ಅವರು ಫೌಂಟನ್ ವೃತ್ತದಿಂದ ಬೆಳಗ್ಗೆ 7.30ಕ್ಕೆ ಅದ್ದೂರಿ ಸ್ವಾಗತ ಕೋರಿದರು.

ಆಚಾರ್ಯ 108 ಶ್ರೀ ಪ್ರಸನ್ನ ಸಾಗರ ಮಹಾರಾಜ್ ಅಥವಾ ಅಂತರ್ಮನ ಆಚಾರ್ಯ ಎಂದೂ ಕರೆಯಲ್ಪಡುವ ಇವರು ದಿಗಂಬರ ಜೈನ ಮುನಿಗಳಾಗಿದ್ದು, ಅವರು ಏಪ್ರಿಲ್ 18, 1989ರಂದು ರಾಜಸ್ಥಾನದ ಪ೦ರ್ತಾಪ್ತದಲ್ಲಿ ಆಚಾ೦ರ್ಯ ವಿದ್ಯಾಸಾಗರ್ ಜಿ ಅವರಿಂದ ದಿಗಂಬರ ಸನ್ಯಾಸಿಯಾಗಿ ದೀಕ್ಷೆ ಪಡೆದಿದ್ದಾರೆ.

ಮುನಿಗಳು ಫೌಂಟನ್ ಸರ್ಕಲ್‌ಗೆ ಆಗಮಿಸುತ್ತಿದ್ದಂತೆ ನಂದಿ ಧ್ವಜ, ಡೊಳ್ಳು ಕುಣಿತ ಮತ್ತು ಕಂಸಾಳೆ ಮೂಲಕ ಸ್ವಾಗತ ಕೋರಿ, ಅವರನ್ನು ಅಶೋಕ ರಸ್ತೆಯಿಂದ ಮೆರವಣಿಗೆ ಮೂಲಕ ಅರಮನೆ ಮುಂಭಾಗದ ಕೋಟೆ ಆಂಜನೇಯ ದೇವಸ್ಥಾನ ತಲುಪಿ ನಂತರ ಚಂದ್ರಗುಪ್ತ ರಸ್ತೆಯಲ್ಲಿರುವ ಶ್ರೀಪಾರ್ಶ್ವನಾಥ ದಿಗಂಬರ ಜೈನ ಮಂದಿರಕ್ಕೆ ಕರೆತರಲಾಯಿತು. ಈ ವೇಳೆ ಭಕ್ತಾಧಿಗಳು ಪುಷ್ಪ ವೃಷ್ಟಿ ಸುರಿಸಿ ಮಂದಿರದ ಮುಂಭಾಗ ಪಾದಪೂಜೆ ಸಲ್ಲಿಸಿ ಮಂದಿರಕ್ಕೆ ಬರಮಾಡಿಕೊಂಡರು.

ಇದಕ್ಕೂ ಮೊದಲು ಅಶೋಕ ರಸ್ತೆಯಲ್ಲಿ ಶಾಸಕ ಜಿ.ಟಿ.ದೇವೇಗೌಡ ಅವರು ಭಕ್ತಿ ಪೂರ್ವಕವಾಗಿ ಮುನಿಗಳನ್ನು ಸ್ವಾಗತಿಸಿ, ಆಶೀರ್ವಾದ ಪಡೆದು ಮಾತನಾಡಿ, ಮೈಸೂರಿಗೆ ದಿಗಂಬರ ಮಹಾರಾಜರು ಆಗಮಿಸಿರುವುದು ಸೌಭಾಗ್ಯ. ಇವರ ಪಾದಸ್ಪರ್ಶದಿಂದ ನಾಡಿನಲ್ಲಿ ಮಳೆಯಾಗಿ ಉತ್ತಮ ಬೆಳೆ ಬರಲಿ. ಇದರಿಂದ ಜನರು ಮನಸ್ಸಿನಲ್ಲಿ ಶಾಂತಿಯಿಂದ ಇರಲಿ ಎಂದು ತಿಳಿಸಿದರು.

ಶಾಸಕ ಶ್ರೀವತ್ಸ ಮಾತನಾಡಿ, ಮುನಿಗಳು ಕಠಿಣ ಉಪವಾಸ, ಮೌನವ್ರತ ಮಾಡಿ ಸಾಂಸ್ಕೃತಿಕ ನಗರಿ ಮೈಸೂರಿಗೆ ಆಗಮಿಸಿರುವುದರಿಂದ ಅದರ ಫಲವಾಗಿ ಮೈಸೂರು ಸೇರಿದಂತೆ ರಾಜ್ಯದಲ್ಲಿ ಉತ್ತಮ ಮಳೆಯಾಗಲಿ. ರೈತರಿಗೆ ಸಮೃದ್ಧಿಯನ್ನು ಉಂಟುಮಾಡಲಿ ಎಂದು ಅವರಲ್ಲಿ ಸ್ಮರಿಸಿಕೊಳ್ಳುತ್ತೇನೆ ಎಂದರು.

ಮೈಸೂರಿನಲ್ಲಿ ಮೂರು ದಿನ ವಾಸ್ತವ ಹೂಡಲಿರುವ ಅವರು ಪ್ರತಿ ದಿನ ವಿಶೇಷ ಪ್ರವಚನ ನೀಡಲಿದ್ದಾರೆ. ನಾಳೆ(ಏ.29) ಗಣಪತಿ ಸಚ್ಚಿದಾನಂದ ಆಶ್ರಮಕ್ಕೆ ಭೇಟಿ ನೀಡಿ ಗಣಪತಿ ಶ್ರೀಗಳನ್ನು ಭೇಟಿ ಮಾಡಲಿದ್ದಾರೆ ಎಂದು ಮುಖಂಡರಾದ ಸುನೀಲ್ ಕುಮಾರ್ ಜೈನ್ ತಿಳಿಸಿದರು. ಈ ವೇಳೆ ಮುಖಂಡರಾದ ಹಿರಿಯ ವಕೀಲ ಹರೀಶ್ ಹೆಗ್ಡೆ, ಭರತ್ ರಾಜ್, ಬಿ.ಎಸ್.ಸಂತೋಷ್, ಬಿ.ಎಸ್.ಪ್ರಕಾಶ್, ಸೀಮಂತಿನಿ, ಭರತ್.ವಿ, ಲಕ್ಷ್ಮೀಶ್ ಬಾಬು, ಜೀನೇಂದ್ರ ಪ್ರಕಾಶ್, ಧರಣೇಂದ್ರ ಮತ್ತಿತರರು ಪಾಲ್ಗೊಂಡಿದರು.

ನಮ್ಮ ಪರಂಪರೆ ಅನುಭವಿಸುವ ವಾತಾವರಣದಿಂದ ಮಕ್ಕಳಲ್ಲಿ ಬೌದ್ಧಿಕ ಪ್ರಜ್ಞೆ ವಿಕಸಿತ

● ರಂಗಾಯಣ ಉಪನಿರ್ದೇಶಕಿ ನಿರ್ಮಲಮಠಪತಿ ● 'ನೈಪುಣ್ಯ ಬೇಸಿಗೆ ಬಂಡಿ' ಶಿಬಿರಕ್ಕೆ ತೆರೆ





ಮೈಸೂರು,ಏ.28(ಪಿಎಂ)– ಮಕ್ಕಳಲ್ಲಿ ಬೌದ್ಧಿಕ ಪ್ರಜ್ಞೆ ವಿಕಸಿತಗೊಳ್ಳಲು ಅವರಿಗೆ ನಮ್ಮ ಪರಂಪರೆ ಅನುಭವಿಸುವ ವಾತಾವರಣ ಕಲ್ಪಿಸುವುದು ಅಗತ್ಯ. ಈ ನಿಟ್ಟಿನಲ್ಲಿ ಮಕ್ಕಳಿಗೆ ನಮ್ಮ ಗ್ರಾಮೀಣರ ಜಾನಪದ ಸೊಗಡು ಪರಿಚಯಿಸಬೇಕಿದೆ ಎಂದು ರಂಗಾಯಣ ಉಪ ನಿರ್ದೇಶಕಿ ನಿರ್ಮಲ ಮಠಪತಿ ಅಭಿಪ್ರಾಯಪಟ್ಟರು.

ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ 'ಬೇಸಿಗೆ ಬಂಡಿ' ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಕೂಡು ಕುಟುಂಬಗಳ ಮರೆಯಾಗುವಿಕೆ ಮತ್ತು ನಗರೀಕರಣದಿಂದ ಮಕ್ಕಳು ಸಹಜ ಬಾಲ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ಇಂತಹ ಸಹಜ ಬಾಲ್ಯವು ಮಕ್ಕಳ ಬೆಳವಣಿಗೆಗೆ ಗಟ್ಟಿತನ ನೀಡಲಿದೆ. ಈ ನಿಟ್ಟಿನಲ್ಲಿ ಮಕ್ಕಳಿಗೆ ನಮ್ಮ ಗ್ರಾಮೀಣ ಸೊಗಡು ಪರಿಚಯಿಸುವ, ಅನುಭವಿಸುವ ಅವಕಾಶ ಕಲ್ಪಿಸಬೇಕಿದೆ ಎಂದರು.

ಮಾನಸಿಕವಾಗಿ ಸಧೃಢವಾಗಲು ಮತ್ತು ಬೌದ್ಧಿಕ ಪ್ರಜ್ಞೆ ವಿಕಸಿತಗೊಳ್ಳಲು ನಮ್ಮ ತಲೆಮಾರುಗಳ ಪರಂಪರೆಯನ್ನು ಮಕ್ಕಳು ಅನುಭವಿಸಬೇಕು. ಆದರೆ ನಗರೀಕರಣದ ಕಾರಣಕ್ಕೆ ಮಕ್ಕಳು ಇದರಿಂದ ವಂಚಿತರಾಗುತ್ತಿದ್ದಾರೆ. ವೇಗವಾಗಿ ಓಡುತ್ತಿರುವ ಆಧುನಿಕ ಜಗತ್ತಿನಲ್ಲಿ ನಮ್ಮ ಮಕ್ಕಳು ಬಾಲ್ಯಸುಖ ಕಳೆದುಕೊಂಡು ಏಕಾಂಗಿತನ ಅನುಭವಿಸುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಆಧುನಿಕ ತಂತ್ರಜ್ಞಾನವನ್ನೂ ಒಳಗೊಂಡ ಗುಣಮಟ್ಟದ ಶಿಕ್ಷಣವನ್ನು ನೀಡಬೇಕು. ಶಿಕ್ಷಣದಲ್ಲಿ ನಿರಂತರವಾಗಿ ಹೊಸ ಪ್ರಯತ್ನ ಮಾಡುತ್ತಿರುವ ನೈಪುಣ್ಯ ಸಂಸ್ಥೆಯ ಸಂಸ್ಥಾಪಕರೂ ಆದ ಶಿಕ್ಷಣ ತಜ್ಞ ಆರ್.ರಘು ಅವರಿಂದ ಈ ಕಾರ್ಯ ವ್ಯವಸ್ಥಿತವಾಗಿ ವಿಸ್ತರಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ತಾಯಂದಿರು ಮಕ್ಕಳಿಗೆ ನೀತಿ ಕಥೆ ಹೇಳಬೇಕು: ಸಂಸ್ಥೆಯ ಅಧ್ಯಕ್ಷ ಆರ್.ರಘು ಕೌಟಿಲ್ಯ ಮಾತನಾಡಿ, ನಮ್ಮ ಪರಂಪರೆ ಇನ್ನೂ ತನ್ನ ಗಟ್ಟಿತನ ಉಳಿಸಿಕೊಂಡಿದೆ. ನಾವು ಮಕ್ಕಳನ್ನು ನಮ್ಮ ಆಚಾರ–ವಿಚಾರ, ಸಂಸ್ಕೃತಿಗಳ ಅನುಭವದೊಂದಿಗೆ ಬೆಳೆಸಿದರೆ ಅವರು ಗಟ್ಟಿಯಾಗುತ್ತಾರೆ. ಮಕ್ಕಳು ಗಟ್ಟಿಯಾಗಿ ರೂಪುಗೊಳ್ಳಲು ಅವರಿಗೆ ಯಾವುದೇ ನಿರ್ಬಂಧ ವಿಧಿಸದೇ ಅವರ ಆಸಕ್ತಿಯನ್ನು ಗ್ರಹಿಸಿ ಉತ್ತೇಜಿಸಬೇಕು. ತಾಯಂದಿರು ಟಿವಿ ಧಾರಾವಾಹಿಗಳಿಂದ ಅಂತರ ಕಾಯ್ದುಕೊಂಡು ಕಥೆಗಳನ್ನು ಓದಬೇಕು. ಮಕ್ಕಳಿಗೆ ದಿನಕ್ಕೊಂದು ನೀತಿ ಕಥೆಗಳನ್ನು ಹೇಳಿದರೆ, ಅದು ಮಕ್ಕಳ ಮೇಲೆ ಪ್ರಭಾವ ಬೀರಲಿದೆ ಎಂದು ಹೇಳಿದರು.

ಇದೇ ವೇಳೆ ಶಿಬಿರದ ಸಂಯೋಜಕಿ ದೇಚಮ್ಮ ಅವರನ್ನು ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಶಿಬಿರದ ಮಕ್ಕಳು ವಿವಿಧ ಪ್ರಕಾರಗಳ ನೃತ್ಯ ಪ್ರದರ್ಶನ ನೀಡಿದರು. ಅಲ್ಲದೆ ಡಾ.ಚಂದ್ರಶೇಖರ ಕಂಬಾರರ 'ಪುಷ್ಪರಾಣಿ' ನಾಟಕವನ್ನೂ ಪ್ರದರ್ಶಿಸಿದರು. ಸಂಸ್ಥೆಯ ಅಕಾಡೆಮಿಕ್ ಡೀನ್ ವಿಜಯಾ ಅಯ್ಯರ್ ಮತ್ತಿತರರು ಹಾಜರಿದ್ದರು.

ಫ್ಯಾನ್, ಕೂಲರ್, ಎಸಿ ಜೊತೆಗೆ ಪ್ಲಾಸ್ಟಿಕ್ ಬೀಸಣಿಗೆ ಭರಾಟೆ ನಡುವೆ

ಬಡವರ ಬಿದಿರಿನ ಬೀಸಣಿಗೆ ಪೈಪೋಟಿ



●ಪವನ್ ಮೂರ್ತಿ ಎಂ.ಬಿ.

ಮೈಸೂರು, ಏ.28– ಲೋಕಸಭಾ ಚುನಾವಣೆ ಕಾವು ರಾಜಕೀಯ ವಲಯದಲ್ಲಿ ನೆತ್ತಿಗೇರುತ್ತಿದ್ದರೆ, ಬೇಸಿಗೆಯ ತಾಪವು ಎಲ್ಲರ ಮೈಯಲ್ಲಿ ಬೆವರಿಳಿಸುತ್ತಿದೆ. ತಾಪದಿಂದ ತಪ್ಪಿಸಿಕೊಳ್ಳಲು ವಿದ್ಯುತ್‌ಚಾಲಿತ ಫ್ಯಾನ್, ಹವಾನಿಯಂತ್ರಣ ವ್ಯವಸ್ಥೆ ಬಳಕೆಯಲ್ಲಿದ್ದರೂ ಬಿದಿರು ಬೀಸಣಿಗೆ ತನ್ನ ಅಸ್ತಿತ್ವ ಉಳಿಸಿಕೊಂಡಿದೆ.

ಹೌದು, ಮೈಸೂರು ನಗರದಲ್ಲಿ ಬಿದಿರು ಬೀಸಣಿಗೆಗೆ ಬೇಡಿಕೆ ಕುಗ್ಗಿಲ್ಲ. ಬಿದಿರಿನ ಸಾಮಗ್ರಿಗಳ ಜಾಗವನ್ನು ಪ್ಲಾಸ್ಟಿಕ್ ಕಬಳಿಸುತ್ತಿದೆ. ಮೊರ, ಕುಕ್ಕೆ, ಬುಟ್ಟಿ, ಚಾಪೆ ಸೇರಿದಂತೆ ಮೊದಲಾದ ಗೃಹೋಪಯೋಗಿ ಸಾಮಗ್ರಿಗಳು ಬಿದಿರಿನಲ್ಲೇ ಸಿದ್ಧಗೊಂಡು ಪರಿಸರ ಸ್ನೇಹಿಯಾಗಿ ಬಳಕೆಯಾಗುತ್ತಿದ್ದವು. ಆದರೆ ಈಗ ಈ ಎಲ್ಲಾ ಸಾಮಗ್ರಿಗಳಿಗೂ ಪ್ಲಾಸ್ಟಿಕ್ ಆವರಿಸಿಕೊಂಡಿದೆ. ಈ ಎಲ್ಲಾ ವಿಧದ ಸಾಮಗ್ರಿಗಳು ಪ್ಲಾಸ್ಟಿಕ್‌ನಲ್ಲಿ ಸಿದ್ಧಗೊಂಡು ಎಲ್ಲರ ಮನೆಗಳಲ್ಲಿ ಈಗ ಬಹುತೇಕ ಅವುಗಳದ್ದೇ ಕಾರುಬಾರು.

ಇದೇನೆ ಇದ್ದರೂ ಬಿದಿರು ತನ್ನ ಗತ್ತು ಗಮ್ಮತ್ತು ಉಳಿಸಿಕೊಂಡಿದೆ. ಮದುವೆ ಕಾರ್ಯಗಳು, ಗೌರಿ–ಗಣೇಶ ಹಬ್ಬದಲ್ಲಿ ಬಿದಿರಿನ ಮೊರಕ್ಕೆ ಬೇಡಿಕೆ ಇದ್ದೇ ಇದೆ. ಸಾಂಪ್ರದಾಯಿಕ ಬಿದಿರು ಮೊರಗಳಲ್ಲಿ ಎಲ್ಲಾ ಸಾಂಪ್ರದಾಯಿಕ ವಿಧಿವಿಧಾನ ನೆರವೇರಿಸುವುದೇ ಶ್ರೇಷ್ಠ ಎಂಬ ನಂಬಿಕೆಯೇ ಬಿದಿರು ಮೊರ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಕಾರಣ ಎನ್ನಬಹುದು.

ಇನ್ನು ಬೇಸಿಗೆಯಲ್ಲಿ ವಿದ್ಯುತ್ ಕೈಕೊಟ್ಟಾಗ ಬೀಸಣಿಗೆ ಮೊರೆ ಹೋಗುವುದು ಸಾಮಾನ್ಯ. ಅದರಲ್ಲೂ ಬಿದಿರು ಬೀಸಣಿಗೆಯೇ ಅಚ್ಚುಮೆಚ್ಚು. ಪ್ರಮುಖವಾಗಿ ಮೈಸೂರಿನ ನೂರೊಂದು ಗಣಪತಿ ದೇವಸ್ಥಾನ ಬಳಿಯ ಅರಳೀಕಟ್ಟೆ ಆವರಣ ಹಾಗೂ ತಿಲಕನಗರದ ಸಯ್ಯಾಜಿರಾವ್ ರಸ್ತೆಯ ಬದಿಯಲ್ಲಿ ಬಿದಿರಿನ ಸಾಮಗ್ರಿ ಹೆಣೆಯುವ ಕಾಯಕದಲ್ಲಿ ಮೇದರ ಸಮುದಾಯದ ಕುಶಲಕರ್ಮಿಗಳು ತೊಡಗಿಸಿಕೊಂಡಿದ್ದಾರೆ. ಮೊರ, ಬುಟ್ಟಿ, ತಿಂಡಿ ಬುಟ್ಟಿ, ಬೀಸಣಿಗೆ, ಕೋಳಿ ಗೂಡು, ಕುಕ್ಕೆ, ಪೂಜಾ ಸಾಮಗ್ರಿ ಬುಟ್ಟಿ, ಪಂಜರ, ಏಣಿ ಸೇರಿದಂತೆ ಮೊದಲಾದ ಸಾಮಗ್ರಿಗಳನ್ನು ಹೆಣೆಯುವ ಕಲೆ ಕರಗತ ಮಾಡಿಕೊಂಡಿರುವ ಇವರು, ಈಗ ಬಿದಿರಿನ ಬೀಸಣಿಗೆ ಹೆಣೆಯಲು ಮೊದಲ ಆದ್ಯತೆ ನೀಡಿದ್ದಾರೆ.

ಬಿದಿರು ಹೆಣೆದು ಗೃಹೋಪಯೋಗಿ ಸಾಮಗ್ರಿ ಸೇರಿದಂತೆ ಇನ್ನಿತರ ಕೆಲಸ ಕಾರ್ಯಗಳಿಗೆ ಅಗತ್ಯವಾದ ಪರಿಕರ ಸಿದ್ಧಪಡಿಸುವುದು ಮೇದರ ಸಮುದಾಯದ ಸಾಂಪ್ರದಾಯಿಕ ಕುಲಕಸುಬು. ಈ ಸಮುದಾಯದ ಸಾಕಷ್ಟು ಮಂದಿ ಇಂದಿಗೂ ಕುಲಕಸುಬು ನಂಬಿಯೇ ಜೀವನ ನಡೆಸುತ್ತಿದ್ದಾರೆ. ಇವರಿಗೆ 'ಬಿದಿರೇ ಬದುಕು'.

ನೂರೊಂದು ಗಣಪತಿ ದೇವಸ್ಥಾನ ಬಳಿಯ ಅರಳೀಕಟ್ಟೆ ಆವರಣದಲ್ಲಿ ವರ್ಷಪೂರ್ತಿ ಮೂರ್‍ನಾಲ್ಕು ಮಂದಿ ಕುಶಲಕರ್ಮಿಗಳು ಬಿದಿರಿನ ಸಾಮಗ್ರಿ ಹೆಣೆಯುವ ಕಾಯಕ ಮಾಡುತ್ತಿದ್ದು, ಈ ಪೈಕಿ ಕುಶಲಕರ್ಮಿ ಸಿದ್ದು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ತಮ್ಮ ಕಾಯಕ ಹಾಗೂ ಬಿದಿರಿನ ಬೀಸಣಿಗೆಗೆ ಇರುವ ಬೇಡಿಕೆ ಬಗ್ಗೆ ಮಾಹಿತಿ ನೀಡಿದರು.

'ನಾವು ಮೂಲತಃ ನಂಜನಗೂಡಿನವರು. ವರ್ಷಪೂರ್ತಿ ಇದೇ ನೂರೊಂದು ಗಣಪತಿ ದೇವಸ್ಥಾನದ ಬಳಿಯಲ್ಲೇ ನನ್ನ ಪತ್ನಿ (ಮಂಜುಳಾ) ಮತ್ತು ನಾನು ಬಿದಿರಿನ ಸಾಮಗ್ರಿ ಹೆಣೆಯುವ ಕೆಲಸ ಮಾಡುತ್ತೇವೆ. ಗೌರಿ ಹಬ್ಬದ ಸಂದರ್ಭದಲ್ಲಿ ನಂಜನಗೂಡಿನಿಂದ ನಮ್ಮವರು ಹೆಚ್ಚಿನ ಜನ ಬಂದು ಮೊರ ಹೆಣೆಯುವ ಕಾಯಕದಲ್ಲಿ ತೊಡಗಿಕೊಳ್ಳುತ್ತಾರೆ. ಬೇಸಿಗೆ ಹಿನ್ನೆಲೆಯಲ್ಲಿ ಬಿದಿರಿನ ಬೀಸಣಿಗೆಗೆ ಈಗ ಬೇಡಿಕೆ ಇದೆ. ಎರಡು ವಿಧದ ಬೀಸಣಿಗೆ ಹೆಣೆಯುತ್ತಿದ್ದು, ಸಣ್ಣ ಕಡ್ಡಿಯ ಬೀಸಣಿಗೆ ಒಂದಕ್ಕೆ 40 ರೂ., ದಪ್ಪ ಕಡ್ಡಿ ಬೀಸಣಿಗೆ ಒಂದಕ್ಕೆ 30 ರೂ.ನಂತೆ ಮಾರಾಟ ಮಾಡುತ್ತಿದ್ದೇವೆ' ಎಂದು ಹೇಳಿದರು.

'ಬಣ್ಣದ ವಿನ್ಯಾಸದಲ್ಲಿ ಹೆಣೆದಿರುವ ಬೀಸಣಿಗೆ ಒಂದಕ್ಕೆ 50 ರೂ. ನಿಗದಿಪಡಿಸಿದ್ದೇವೆ. ದಿನಕ್ಕೆ 15ಕ್ಕೂ ಹೆಚ್ಚು ಬೀಸಣಿಗೆ ಮಾರಾಟವಾಗುತ್ತಿವೆ. ದಿನಕ್ಕೆ ಇಷ್ಟೇ ಬೀಸಣಿಗೆ ಹೆಣೆಯಬೇಕೆಂದು ನಿಗದಿ ಮಾಡಿ ಕೊಂಡಿಲ್ಲ. ಹಿಂದಿನಂತೆ ಬಿದಿರು ಸಾಮಗ್ರಿಗಳ ವ್ಯಾಪಾರ ಜೋರಿಲ್ಲ. ಮದುವೆ ಸೇರಿದಂತೆ ಶುಭ' ಸಮಾರಂಭಗಳು ಹಾಗೂ ಧಾರ್ಮಿಕ ವಿಧಿ ವಿಧಾನಗಳಿಗೆ ಬಿದಿರು ಸಾಮಗ್ರಿಗಳನ್ನು ಖರೀದಿ ಮಾಡುತ್ತಾರೆ. ಪ್ಲಾಸ್ಟಿಕ್ ಸಾಮಗ್ರಿ ಹಾವಳಿಯಿಂದ ಬಿದಿರಿನ ಸಾಮಗ್ರಿಗಳ ಮೇಲೆ ಹೊಡೆತ ಬಿದ್ದಿದೆ. ಆದರೆ ಈಗಲೂ ಹಿರಿಯರು ಮಾತ್ರ ಬಿದಿರಿನ ಸಾಮಗ್ರಿಗಳಿಗೆ ಆದ್ಯತೆ ನೀಡುತ್ತಾರೆ' ಎನ್ನುತ್ತಾರೆ ಅವರು. ಮೈಸೂರಿನ ತಿಲಕ ನಗರದ ಸಯ್ಯಾಜಿರಾವ್ ರಸ್ತೆಯ ಬದಿಯಲ್ಲೂ ಮೇದಾರ ಸಮುದಾಯದ ಕುಶಲ ಕರ್ಮಿಗಳು ಬಿದಿರಿನ ಸಾಮಗ್ರಿಗಳನ್ನು ಹೆಣೆದು ಮಾರಾಟ ಮಾಡುತ್ತಿದ್ದು, ಇಲ್ಲಿಯೂ ಬಿದಿರು ಬೀಸಣಿಗೆ ಮಾರಾಟಗೊಳ್ಳುತ್ತಿವೆ.



ಜಯನಗರದಲ್ಲಿ ಬಿದಿರು ಸಾಮಗ್ರಿ ಕಣಜ!

ಮೈಸೂರಿನ ಜಯನಗರದ ಚಿನ್ನಗಿರಿಕೊಪ್ಪಲಿನ ಪೈಲ್ವಾನ್ ಬಸವಯ್ಯನಗರದ 10ನೇ ಕ್ರಾಸ್‌ನ 6ನೇ ಮೇನ್‌ನಲ್ಲಿ ಮೇದರ ಸಮುದಾಯದ ಸುಮಾರು 40 ಕುಟುಂಬಗಳು ಬಿದಿರು ಸಾಮಗ್ರಿ ಹೆಣೆಯುವ ತಮ್ಮ ಕುಲಕಸುಬಿನಲ್ಲಿ ನಿರತವಾಗಿವೆ. ಬಣ್ಣಗಳ ವಿನ್ಯಾಸದಲ್ಲಿ ಬಿದಿರಿನ ಬೀಸಣಿಗೆ ಹೆಣೆಯುವುದು ಇಲ್ಲಿನ ವಿಶೇಷ. ಜೊತೆಗೆ ಇಲ್ಲಿನ ಕುಶಲಕರ್ಮಿಗಳು ಸಗಟು ರೀತಿಯಲ್ಲಿ ತಮ್ಮ ಸಾಮಗ್ರಿಗಳನ್ನು ತಿಂಗಳಿಗೊಮ್ಮೆ ಮಾರಾಟ ಮಾಡುತ್ತಾರೆ.

ಇಲ್ಲಿನ ಕುಶಲಕರ್ಮಿ ಕುಮಾರಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ತಿಂಗಳೀಡೀ ಬಿದಿರಿನ ಸಾಮಗ್ರಿಗಳನ್ನು ಹೆಣೆದು ತಿಂಗಳ ಕೊನೆಯಲ್ಲಿ ಸಗಟು ರೀತಿಯಲ್ಲಿ ಮಾರಾಟ ಮಾಡುತ್ತೇವೆ. ಸುಮಾರು 8 ಸಾವಿರ ಮೌಲ್ಯದ ಸಾಮಗ್ರಿಗಳನ್ನು ಸಗಟಾಗಿ ಮಾರಾಟ ಮಾಡುತ್ತಿದ್ದೇವೆ. ಇಲ್ಲಿನ ಎಲ್ಲಾ ಕುಟುಂಬಗಳಲ್ಲಿ ಬಿದಿರು ಸಾಮಗ್ರಿ ಹೆಣೆಯುವ ಕಾಯಕ ಮಾಡುತ್ತಾರಾದರೂ ಈಗಿನ ಪೀಳಿಗೆಯ ಬಹುತೇಕ ಮಂದಿ ನಮ್ಮ ಕುಲಕಸುಬಿನಿಂದ ದೂರವಾಗುತ್ತಿರುವುದೇ ಹೆಚ್ಚು ಎಂದು ಹೇಳಿದರು.

ಬೇಸಿಗೆಯಲ್ಲಿ ಬೀಸಣಿಗೆ ಹೆಣೆಯಲು ಹೆಚ್ಚು ಆದ್ಯತೆ ನೀಡುತ್ತೇವೆ. ಗೌರಿ–ಗಣೇಶ ಹಬ್ಬದ ಸಂದರ್ಭದಲ್ಲಿ ಬಾಗಿನ ನೀಡಲು ಮೊರಗಳಿಗೆ ಬೇಡಿಕೆ ಬರುವ ಹಿನ್ನೆಲೆಯಲ್ಲಿ ಅವುಗಳನ್ನೇ ಹೆಚ್ಚಾಗಿ ಸಿದ್ಧಪಡಿಸುತ್ತೇವೆ. ಅಂತೆಯೇ ಆಯಾಯ ಋತುಗಳಿಗೆ ತಕ್ಕಂತೆ ಬಿದಿರು ಸಾಮಗ್ರಿ ಹೆಣೆಯುತ್ತೇವೆ. ಮದುವೆ ಋತುವಿನಲ್ಲಿ ಬಿದಿರಿನ ಬುಟ್ಟಿ ಬೊಕ್ಕೆಗಳ ತಯಾರಿಕೆಯಲ್ಲಿ ಹೆಚ್ಚು ತೊಡಗಿಕೊಳ್ಳುತ್ತೇವೆ. ಮದುವೆ ಸಮಾರಂಭಗಳಿಗಾಗಿ ವಿವಿಧ ವಿನ್ಯಾಸದ ಬೀಸಣಿಗೆ ಹಾಗೂ ಮೊರ ಹೆಣೆಯಲು ಬೆಂಗಳೂರು ಸೇರಿದಂತೆ ಮೊದಲಾದ ಕಡೆಗಳಿಂದಲೂ ನಮಗೆ ಆರ್ಡರ್ ಸಿಗುತ್ತವೆ ಎಂದು ಅವರು ತಿಳಿಸಿದರು.



ನೂರೊಂದು ಗಣಪತಿ ದೇವಸ್ಥಾನ ಬಳಿಯ ಅರಳೀಕಟ್ಟೆ ಆವರಣದಲ್ಲಿ ಬಿದಿರು ಸಾಮಗ್ರಿ ಹೆಣೆಯುವುದರಲ್ಲಿ ನಿರತರಾದ ಕುಶಲಕರ್ಮಿಗಳು.



ಚಿನ್ನಗಿರಿಕೊಪ್ಪಲಿನ ಪೈಲ್ವಾನ್ ಬಸವಯ್ಯನಗರದ ಬಿದಿರು ಕುಶಲಕರ್ಮಿಗಳು ಕಾಯಕನಿರತರಾಗಿರುವುದು.



ವಿಲ್ ಜ್ಯಾಕ್ಸ್ ಘರ್ಜನೆ: ಆರ್‌ಸಿಬಿಗೆ ಅಮೋಘ ಗೆಲುವು

ಟೂರ್ನಿಯಲ್ಲಿ 500 ರನ್ ಸಿಡಿಸಿದ ಕಿಂಗ್ ಕೊಹ್ಲಿ



ವಿಲ್ ಜ್ಯಾಕ್ಸ್ (100*)

ಅಹಮದಾಬಾದ್, ಏ.28– ವಿಲ್ ಜ್ಯಾಕ್ಸ್ ಅವರ ಸಿಡಿಲಬ್ಬರದ ಶತಕ ಹಾಗೂ ವಿರಾಟ್ ಕೊಹ್ಲಿ ಅವರ ಸಮಯೋಚಿತ ಅರ್ಧಶತಕದ ನೆರವಿನಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಗುಜರಾತ್ ಟೈಟಾನ್ಸ್ ವಿರುದ್ಧ 9 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.

ಇದರೊಂದಿಗೆ ಐಪಿಎಲ್ ಟೂರ್ನಿಯಲ್ಲಿ ಆರ್‌ಸಿಬಿ ತನ್ನ ಮೂರನೇ ಹಾಗೂ ಸತತ ಗೆಲುವಿನ ನಗೆ ಬೀರಿದೆ. ಆಡಿದ 10 ಪಂದ್ಯಗಳಿಂದ 6 ಅಂಕಗಳನ್ನು ಕಲೆಹಾಕಿರುವ ಆರ್‌ಸಿಬಿ ಅಂಕಪಟ್ಟಿಯ ಕೊನೆ ಸ್ಥಾನದಲ್ಲೇ ಉಳಿದಿದೆ. ಪ್ಲೇ ಆಫ್ ತಲುಪಲು ಉಳಿದೆಲ್ಲಾ ಪಂದ್ಯಗಳನ್ನು ಗೆದ್ದು ಒಟ್ಟು 14 ಅಂಕಗಳೊಂದಿಗೆ ಅದೃಷ್ಟ ಕೈ ಹಿಡಿಯಲಿ ಎಂದು ಪ್ರಾರ್ಥನೆ ಮಾಡಬೇಕಿದೆ. ಮತ್ತೊಂದೆಡೆ ಗುಜರಾತ್ ಟೈಟನ್ಸ್ ಆಡಿದ 10 ಪಂದ್ಯಗಳಲ್ಲಿ 4 ಜಯದ ಜೊತೆಗೆ 6 ಸೋಲುಂಡು ಅಂಕಪಟ್ಟಿಯಲ್ಲಿ 7ನೇ ಸ್ಥಾನದಲ್ಲಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಟಾಸ್ ಸೋತು ಮೊದಲು ಫೀಲ್ಡಿಂಗ್ ಆಯ್ದುಕೊಂಡ ಆರ್‌ಸಿಬಿ ಬ್ಯಾಟಿಂಗ್ ಮಾಡುವ ಅವಕಾಶವನ್ನು ಗುಜರಾತ್ ತಂಡಕ್ಕೆ ಬಿಟ್ಟುಕೊಟ್ಟಿತು.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಟೈಟಾನ್ಸ್ ನಿಗದಿತ 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 200 ರನ್ ಬಾರಿಸಿತ್ತು. 201 ರನ್‌ಗಳ ಬೃಹತ್ ಗೆಲುವಿನ ಗುರಿ ಬೆನ್ನತ್ತಿದ್ದ ಆರ್‌ಸಿಬಿ ಕೇವಲ 16 ಓವರ್‌ಗಳಲ್ಲೇ 1 ವಿಕೆಟ್ ನಷ್ಟಕ್ಕೆ 206 ರನ್ ಗಳಿಸಿ ಭರ್ಜರಿ ಗೆಲುವು ಸಾಧಿಸಿತು.

ಕಠಿಣ ಗುರಿ ಬೆನ್ನತ್ತಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಆರಂಭಿಕರಾದ ಫಾಫ್ ಡು ಪ್ಲೆಸಿಸ್ ಹಾಗೂ ವಿರಾಟ್ ಕೊಹ್ಲಿ ಸ್ಫೋಟಕ ಆರಂಭ ನೀಡಿದರು. ಆದರೆ ತಂಡದ ಮೊತ್ತ 3.5 ಓವರ್‌ಗಳಲ್ಲಿ 40 ರನ್ ಆಗಿದ್ದ ವೇಳೆ ನಾಯಕ ಫಾಫ್ ಡು ಪ್ಲೆಸಿಸ್ 12 ಎಸೆತಗಳಲ್ಲಿ 1 ಬೌಂಡರಿ, 3 ಸಿಕ್ಸರ್ ಒಳಗೊಂಡ 24 ರನ್ ಬಾರಿಸಿ ಸಾಯಿ ಕಿಶೋರ್‌ಗೆ ವಿಕೆಟ್ ಒಪ್ಪಿಸಿದರು.

ಜ್ಯಾಕ್ಸ್, ಕೊಹ್ಲಿ ಆರ್ಭಟ: ಡುಪ್ಲೆಸಿಸ್ ವಿಕೆಟ್ ಪತನದ ಬಳಿಕ ಜೊತೆಯಾದ ವಿಲ್ ಜ್ಯಾಕ್ಸ್ ಹಾಗೂ ವಿರಾಟ್ ಕೊಹ್ಲಿ ಆರ್ಭಟಕ್ಕೆ ಗುಜರಾತ್ ಭಸ್ಮವಾಯಿತು. ಒಂದೆಡೆ ಕೊಹ್ಲಿ ಸ್ಫೋಟಕ ಬ್ಯಾಟಿಂಗ್ ನಡೆಸುವ ವೇಳೆ ಜ್ಯಾಕ್ಸ್ ಎಚ್ಚರಿಕೆಯ ಬ್ಯಾಟಿಂಗ್ ನಡೆಸಿದರು. ಮೊದಲ 17 ಎಸೆತಗಳಲ್ಲಿ 17 ರನ್ ಸಿಡಿಸಿದ್ದ ಜ್ಯಾಕ್ಸ್ ಬಳಿಕ ಮಿಂಚಿನ ಬ್ಯಾಟಿಂಗ್ ನಡೆಸಿ 24 ಎಸೆತಗಳಲ್ಲಿ 83 ರನ್ ಗಳಿಸುವ ಮೂಲಕ ಚೊಚ್ಚಲ ಶತಕ ಸಿಡಿಸಿ ತಂಡಕ್ಕೆ ಜಯ ತಂದುಕೊಡುವಲ್ಲಿ ಯಶಸ್ವಿಯಾದರು. ಕೊನೆವರೆಗೂ ಕ್ರೀಸ್‌ನಲ್ಲಿ ಉಳಿದ ವಿಲ್ ಜಾಕ್ಸ್ 41 ಎಸೆತಗಳಲ್ಲಿ 10 ಸಿಕ್ಸರ್, 5 ಬೌಂಡರಿ ಒಳಗೊಂಡ 100 ರನ್ ಸಿಡಿಸಿದರೆ ಜ್ಯಾಕ್ಸ್‌ಗೆ ಉತ್ತಮ ಸಾಥ್ ನೀಡಿದ ವಿರಾಟ್ ಕೊಹ್ಲಿ 44 ಎಸೆತಗಳಲ್ಲಿ 3 ಸಿಕ್ಸರ್, 6 ಬೌಂಡರಿ ಒಳಗೊಂಡ 70 ರನ್ ಸಿಡಿಸಿದರು. ಇದರೊಂದಿಗೆ 17ನೇ ಆವೃತ್ತಿಯ ಐಪಿಎಲ್‌ನಲ್ಲಿ 500 ರನ್ ಪೂರೈಸಿದ ಮೊದಲ ಬ್ಯಾಟರ್ ಎನಿಸಿಕೊಂಡರು. ಅಂತಿಮವಾಗಿ ವಿರಾಟ್ ಕೊಹ್ಲಿ ಮತ್ತು ವಿಲ್ ಜ್ಯಾಕ್ಸ್ 2ನೇ ವಿಕೆಟ್‌ಗೆ 74 ಎಸೆತಗಳಲ್ಲಿ 166 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡವನ್ನು ಗೆಲುವಿನ ದಡ ಸೇರಿಸಿದರು. ಗುಜರಾತ್ ಪರ ರವಿ ಶ್ರೀನಿವಾಸನ್ ಸಾಯಿ ಕಿಶೋರ್ 1 ವಿಕೆಟ್ ಉರುಳಿಸಿದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ಟೈಟಾನ್ಸ್ ತಂಡದ ಮೊತ್ತ 45 ರನ್ ಆಗುವಷ್ಟರಲ್ಲೇ 6 ರನ್ ಗಳಿಸಿದ್ದ ವೃದ್ಧಿಮಾನ್ ಸಾಹ, 16 ರನ್ ಗಳಿಸಿದ್ದ ನಾಯಕ ಶುಭ್‌ಮನ್ ಗಿಲ್ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಜೊತೆಯಾದ ಸಾಯಿ ಸುದರ್ಶನ್ ಹಾಗೂ ಶಾರುಕ್ ಖಾನ್ 3ನೇ ವಿಕೆಟ್‌ಗೆ 86 ರನ್ ಜೊತೆಯಾಟವಾಡುವ ಮೂಲಕ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಪಂದ್ಯದಲ್ಲಿ ಮಿಂಚಿನ ಬ್ಯಾಟಿಂಗ್ ಮಾಡಿದ ಶಾರುಕ್ ಖಾನ್ 30 ಎಸೆತಗಳಲ್ಲಿ 5 ಸಿಕ್ಸರ್, 3 ಬೌಂಡರಿ ಒಳಗೊಂಡ 50 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಇನ್ನಿಂಗ್ಸ್ ಕೊನೆವರೆಗೂ ಕ್ರೀಸ್‌ನಲ್ಲಿದ್ದ ಸಾಯಿ ಸುದರ್ಶನ್ 49 ಎಸೆತಗಳಲ್ಲಿ 4 ಸಿಕ್ಸರ್, 8 ಬೌಂಡರಿ ಒಳಗೊಂಡ 84 ರನ್ ಗಳಿಸಿ ಅಜೇಯರಾಗಿ ಉಳಿದರು. ಉಳಿದಂತೆ ಡೇವಿಡ್ ವಾರ್ನರ್ 19 ಎಸೆತಗಳಲ್ಲಿ 2 ಬೌಂಡರಿ, 1 ಸಿಕ್ಸರ್ ಒಳಗೊಂಡ 26 ರನ್ ಗಳಿಸಿದರು.

ಆರ್‌ಸಿಬಿ ಪರ ಗ್ಲೆನ್ ಮ್ಯಾಕ್ಸ್‌ವೆಲ್, ಸ್ವಪ್ನಿಲ್ ಸಿಂಗ್, ಮೊಹಮ್ಮದ್ ಸಿರಾಜ್ ತಲಾ ಒಂದೊಂದು ವಿಕೆಟ್ ಕಿತ್ತರು. ಬೆಂಗಳೂರು ಪರ ವಿಲ್ ಜ್ಯಾಕ್ಸ್ ಪಂದ್ಯಶ್ರೇಷ್ಠ ಪ್ರಶಸ್ತಿ ಭಾಜನರಾದರು.





ವಿರಾಟ್ ಕೊಹ್ಲಿ (70*)

ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ರಾಜಸ್ಥಾನ್	9	8	1	0	16
ಕೋಲ್ಕತ್ತಾ	8	5	3	0	10
ಚೆನ್ನೈ	9	5	4	0	10
ಹೈದರಾಬಾದ್	9	5	4	0	10
ಲಕ್ನೋ	9	5	4	0	10
ಡೆಲ್ಲಿ	10	5	5	0	10
ಗುಜರಾತ್	10	4	6	0	8
ಪಂಜಾಬ್	9	3	6	0	6
ಮುಂಬೈ	9	3	3	0	6
ಬೆಂಗಳೂರು	10	3	7	0	6

ಹೈದರಾಬಾದ್ ವಿರುದ್ಧ ಜಯ: ಗೆಲುವಿನ ಹಳಿಗೆ ಮರಳಿದ ಚೆನ್ನೈ

ಚೆನ್ನೈ, ಏ.28– ಋತುರಾಜ್ ಗಾಯಕ್ವಾಡ್ ಅವರ ಭರ್ಜರಿ ಶತಕ ಹಾಗೂ ತುಷಾರ್ ದೇಶ್‌ಪಾಂಡೆ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್, ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ 78 ರನ್‌ಗಳ ಜಯ ಗಳಿಸಿದೆ.

ಇದರೊಂದಿಗೆ ಕಳೆದೆರಡು ಪಂದ್ಯಗಳಲ್ಲಿ ಸೋಲು ಅನುಭವಿಸಿದ್ದ ಚೆನ್ನೈ ಗೆಲುವಿನ ಹಳಿಗೆ ಮರಳಿದ್ದು, ಆಡಿರುವ 9 ಪಂದ್ಯಗಳಲ್ಲಿ 5 ಗೆಲುವು 4 ಸೋಲಿನೊಂದಿಗೆ 10 ಅಂಕ ಗಳಿಸಿ ಅಂಕಪಟ್ಟಿಯಲ್ಲಿ 3ನೇ ಸ್ಥಾನ ಅಲಂಕರಿಸಿದೆ.

ಇಲ್ಲಿನ ಎಂ.ಎ.ಚಿದಂಬರಂ ಸ್ಟೇಡಿಯಂನಲ್ಲಿ ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ಸೂಪರ್ ಕಿಂಗ್ಸ್ 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 212ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಅಜಿಂಕ್ಯಾ ರಹಾನೆ 1 ಬೌಂಡರಿ ಒಳಗೊಂಡ 9 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ಜೊತೆಯಾದ ನಾಯಕ ಋತುರಾಜ್ ಗಾಯಕ್ವಾಡ್ ಹಾಗೂ ಡೆರಿಲ್ ಮಿಚೆಲ್ 2ನೇ ವಿಕೆಟ್‌ಗೆ 107 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಕಳೆದ ಲಕ್ನೋ ವಿರುದ್ಧದ ಪಂದ್ಯದಲ್ಲಿ ಅಮೋಘ ಶತಕ ಸಿಡಿಸಿ ಮಿಂಚಿದ್ದ ಗಾಯಕ್ವಾಡ್ ಸನ್‌ರೈಸರ್ಸ್ ವಿರುದ್ಧವೂ ಅಬ್ಬರಿಸಿದರು. ಆದರೆ 54 ಎಸೆತಗಳಲ್ಲಿ 10 ಬೌಂಡರಿ, 3 ಸಿಕ್ಸರ್ ಒಳಗೊಂಡ 98 ರನ್ ಗಳಿಸಿ ಕೇವಲ 2 ರನ್‌ಗಳಿಂದ ಶತಕದಿಂದ ವಂಚಿತರಾದರು. ಮತ್ತೊಂದೆಡೆ ನಾಯಕನಿಗೆ ಉತ್ತಮ ಸಾಥ್ ನೀಡಿದ ಡೆರಿಲ್ ಮಿಚೆಲ್ 32 ಎಸೆತಗಳಲ್ಲಿ 7 ಬೌಂಡರಿ, 1 ಸಿಕ್ಸರ್ ಒಳಗೊಂಡ 52 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದಂತೆ ಮತ್ತೊಮ್ಮೆ ಮಿಂಚಿನ ಬ್ಯಾಟಿಂಗ್ ನಡೆಸಿದ ಶಿವಂ ದುಬೆ 20 ಎಸೆತಗಳಲ್ಲಿ 1 ಬೌಂಡರಿ, 4 ಸಿಕ್ಸರ್ ಒಳಗೊಂಡ 39 ರನ್ ಗಳಿಸಿದರೆ, ಮಹೇಂದ್ರ ಸಿಂಗ್ ಧೋನಿ 5 ರನ್ ಗಳಿಸಿ ಅಜೇಯರಾಗಿ ಉಳಿದರು. ಹೈದರಾಬಾದ್ ಪರ ಭುವನೇಶ್ವರ್ ಕುಮಾರ್, ಟಿ.ನಟರಾಜನ್ ಹಾಗೂ ಜಯದೇವ್ ಉನಾದ್ಗಟ್ ತಲಾ ಒಂದೊಂದು ವಿಕೆಟ್ ಪಡೆದರು.

ಚೆನ್ನೈ ಸೂಪರ್ ಕಿಂಗ್ಸ್ ನೀಡಿದ 213 ರನ್‌ಗಳ ಬೃಹತ್ ಗೆಲುವಿನ ಗುರಿ ಬೆನ್ನತ್ತಿದ ಸನ್‌ರೈಸರ್ಸ್ ಹೈದರಾಬಾದ್ ಆರಂಭದಿಂದಲೇ ವಿಕೆಟ್ ಕಳೆದುಕೊಳ್ಳುತ್ತಾ ಸಾಗಿತು. ಸಿಕ್ಸರ್–ಬೌಂಡರಿ ಸಿಡಿಸುತ್ತಿದ್ದ ಅಗ್ರ ಕ್ರಮಾಂಕದ ಟಾಪ್ ಆಟಗಾರರು ಅಲ್ಪ ಮೊತ್ತಕ್ಕೆ ನೆಲ ಕಚ್ಚಿದರು. ಇದು ಚೆನ್ನೈ ತಂಡಕ್ಕೆ ಲಾಭವಾಯಿತು. ಟ್ರಾವಿಸ್ ಹೆಡ್, ಅಭಿಷೇಕ್ ಶರ್ಮಾ, ಏಡನ್ ಮಾರ್ಕ್ರಮ್ ಬ್ಯಾಕ್ ಟು ಬ್ಯಾಕ್ ಪೆವಿಲಿಯನ್ ಪರೇಡ್ ನಡೆಸಿದರು. ಹಾಗಾಗಿ ಸಹಜವಾಗಿಯೇ ಗೆಲುವು ಚೆನ್ನೈ ತಂಡದ ಪಾಲಾಯಿತು.

ಹೈದರಾಬಾದ್ ಪರ ಟ್ರಾವಿಸ್ ಹೆಡ್ 13, ಅಭಿಷೇಕ್ ಶರ್ಮಾ 15, ಏಡನ್ ಮಾರ್ಕ್ರಮ್ 32, ನಿತೀಶ್ ಕುಮಾರ್ ರೆಡ್ಡಿ 15, ಹೆನ್ರಿಕ್ ಕ್ಲಾಸೆನ್ 20, ಅಬ್ದುಲ್ ಸಮದ್ 19, ಪ್ಯಾಟ್ ಕಮ್ಮಿನ್ಸ್ 5, ಶಹಬಾಜ್ 7, ಜಯದೇವ್ ಉನದ್ಕಟ್ 1 ರನ್ ಗಳಿಸಿದರೆ ಭುವನೇಶ್ವರ್ ಕುಮಾರ್ 4 ರನ್ ಗಳಿಸಿ ಕ್ರೀಸ್‌ನಲ್ಲಿ ಉಳಿದರು.

ಚೆನ್ನೈ ಸೂಪರ್ ಕಿಂಗ್ಸ್ ಪರ ತುಷಾರ್ ದೇಶಪಾಂಡೆ 4, ಮುಸ್ತಫಿಜಾರ್ ರೆಹಮಾನ್, ಮತೀಶ ಪತಿರಾಣ ತಲಾ 2, ಶಾರ್ದೂಲ್ ಠಾಕೂರ್ ಹಾಗೂ ರವೀಂದ್ರ ಜಡೇಜಾ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಇನ್ನು ಸಿಎಸ್‌ಕೆ ಪರ ನಾಯಕ ಋತುರಾಜ್ ಗಾಯಕ್ವಾಡ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.





ಮೈಸೂರು ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ / ಚಿತ್ರ	
ಪದ್ಮ ಚಿತ್ರಮಂದಿರ	(ದೂ: 2521923)
ರತ್ನಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರತ್ನಂ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ರುಸ್ಲಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ರತ್ನಂ (ತ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ರೂಬನ್ (ತ)	4 ಪ್ರದರ್ಶನಗಳು
ಸಂಗಂ	
ಅವತಾರ ಪುರುಷ 2 (ಕ)	4 ಪ್ರದರ್ಶನಗಳು
ಲಿಡೋ	
ಮ್ಯಾಟ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ರತ್ನಂ (ತ)	4 ಪ್ರದರ್ಶನಗಳು
ಪ್ರಭಾ	
ಇತ್ಯಾದಿ (ಕ)	2 ಪ್ರದರ್ಶನಗಳು
ಆತ್ಮ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕುಂಗ್ ಫೂ ಪಾಂಡ 4 (3ಡಿ) (ಇಂ): ಬೆ.11.30ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.30ಕ್ಕೆ, ಗಿಲ್ಲಿ (ತ): ಮ.3.50ಕ್ಕೆ, ಆವೇಶಂ (ಮ): ರಾ.7ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ಇತ್ಯಾದಿ (ಕ): ಬೆ.11.30ಕ್ಕೆ, O2 (ಕ): ಮ.1.55ಕ್ಕೆ, ದಾಸವರೇಣ್ಯ ಶ್ರೀ ವಿಜಯದಾಸರು (ಕ): ಸಂ.4.15ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ರಾ.7ಕ್ಕೆ, ಪವಿ ಕೇರ್‌ಟೇಕರ್ (ಮ): ರಾ.10.10ಕ್ಕೆ,
ಸ್ಕ್ರೀನ್ 3	ರತ್ನಂ (ತ): ಮ.1.10ಕ್ಕೆ, ಸಂ.4.10ಕ್ಕೆ, ಯುವ (ಕ): ರಾ.7.10ಕ್ಕೆ, ರುಸ್ಲಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಮಂಜುಮ್ಮೆಲ್ ಬಾಯ್ಸ್ (ಮ): ಮ.1.45ಕ್ಕೆ, ಘೋಸ್ಟ್‌ಬಸ್ಟರ್ಸ್ ಫ್ರೋಜನ್ ಎಂಪೈರ್ (ಇಂ): ಸಂ.4.50ಕ್ಕೆ, ರಾ.7.20ಕ್ಕೆ, ರಾ.9.50ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.25ಕ್ಕೆ, ರಾ.10ಕ್ಕೆ, ಯುವ (ಕ): ಮ.1ಕ್ಕೆ, ಸಂ.4.15ಕ್ಕೆ, O2 (ಕ): ರಾ.7.30ಕ್ಕೆ.
ಸ್ಕ್ರೀನ್ 2	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.45ಕ್ಕೆ, ಸಂ.5.55ಕ್ಕೆ, ಮೈದಾನ್ (ಹಿಂ): ಮ.2.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.9.20ಕ್ಕೆ.
ಸ್ಕ್ರೀನ್ 3	ಯುವ (ಕ): ಬೆ.10.10ಕ್ಕೆ, O2 (ಕ): ಮ.1.25ಕ್ಕೆ, ಪಾರಿಜಾತ ಪರ್ವಂ (ತೆ): ಮ.3.55ಕ್ಕೆ, ಆವೇಶಂ (ಮ): ಸಂ.6.50ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಮೈದಾನ್ (ಹಿಂ): ಬೆ.11.25ಕ್ಕೆ, ರಾ.9.50ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ಮ.3.10ಕ್ಕೆ, ಯುವ (ಕ): ಸಂ.6.35ಕ್ಕೆ.

ಮೈಸೂರು ವಿಷನ್ ಸಿನಿಮಾ

MVC

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್,

2ನೇ ಮಹಡಿ, ಮೊ.ನಂ: 8951357139

ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

ಗರುಡ ಮಾಲ್,

1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬಣ್ಣಾರಿ ಮಾರಮ್ಮನವರ ಪೂಜಾ ಮಹೋತ್ಸವ ಆರಂಭ

ತಿ.ನರಸೀಪುರ, ಏ.28– ಪಟ್ಟಣದ ಶ್ರೀಬಣ್ಣಾರಿ ಮಾರಮ್ಮ ದೇವಾಲಯದಲ್ಲಿ 79ನೇ ವಾರ್ಷಿಕೋತ್ಸವದ ಅಂಗವಾಗಿ ವಿಶೇಷ ಪೂಜಾ ಕೈಂಕರ್ಯಗಳು ಆರಂಭವಾಗಿದೆ. ಭಾನುವಾರ ಸಂಜೆ ತ್ರಿವೇಣಿ ಸಂಗಮದಿಂದ ಉತ್ಸವ ಮೂರ್ತಿಗಳ ಮೆರವಣಿಗೆ ಹಾಗೂ ಸಪ್ತಕನಿಕೆ ದೇವತೆಗಳ ಮಹೋತ್ಸವದೊಂದಿಗೆ ಬಣ್ಣಾರಿ ಮಾರಮ್ಮನವರ ಪೂಜಾ ಮಹೋತ್ಸವ ಆರಂಭಗೊಂಡಿತು.



ಸೋಮವಾರ ಬೆಳಗ್ಗೆ 9 ಗಂಟೆಗೆ ತೀರ್ಥ ಕೊಡ ಉತ್ಸವ, 12 ಗಂಟೆಗೆ ಮಹಾ ಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 7 ಗಂಟೆಗೆ ಗಣಪತಿ ಹೋಮ, ರಾತ್ರಿ 8ಕ್ಕೆ ಶ್ರೀಶಕ್ತಿಯ ಆಹ್ವಾನ ಹಾಗೂ ಕೊಂಡಕ್ಕೆ ಕೃತಕಾಗ್ನಿ ಪ್ರವೇಶ ಕಾರ್ಯಕ್ರಮ ನಡೆಯಲಿದೆ. ಏ.30 ರಂದು ಮುಂಜಾನೆ ಅದಕ್ಕೆ ಹೊತ್ತು ಭಕ್ತರಿಂದ ಕೊಂಡ ಹಾಯುವುದು, ಚಂಡಿ ಹೋಮ ಹಾಗೂ ಮಧ್ಯಾಹ್ನ 12 ಗಂಟೆಗೆ ತಂಬಿಟ್ಟಿನ ಆರತಿ, ಪ್ರಸಾದ ವಿನಿಯೋಗ ಮಹಾಮಂಗಳಾರತಿ ಕಾರ್ಯಕ್ರಮಗಳು ನಡೆಯಲಿದೆ.

ಮೇ 1 ರಂದು ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಾಲಯದ ಮುಂಭಾಗ ಹರಕೆ ಹೊತ್ತ ಭಕ್ತರು ಬಾಯಿಗೆ ಬೀಗ ಧರಿಸುವ ಭಕ್ತರ ಜೊತೆ ಪಟ್ಟಣದ ಪ್ರಮುಖ ಬೀದಿಯಲ್ಲಿ ಉತ್ಸವ ಮೂರ್ತಿ ಮೆರವಣಿಗೆ ನಡೆಸಲಿದ್ದಾರೆ. ಮಧ್ಯಾಹ್ನ 12 ಗಂಟೆಗೆ ಮಹಾ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ, ಸಂಜೆ 6 ಗಂಟೆಗೆ ಶ್ರೀ ಓಂ ಶಕ್ತಿ ದೀಪದ ಪೂಜಾ ಮಹೋತ್ಸವ ಜರುಗಲಿದೆ. ಮೇ 2ರಂದು ಬೆಳಗ್ಗೆ ಅಗ್ನಿಕೊಂಡ ಸಮೇತ ಉತ್ಸವ ಮೂರ್ತಿ ಮೆರವಣಿಗೆ ಪಟ್ಟಣದಲ್ಲಿ ನಡೆಯಲಿದೆ. ಮಧ್ಯಾಹ್ನ 12 ಗಂಟೆಗೆ ಮಹಾಮಂಗಳಾರತಿ ಪ್ರಸಾದ ವಿನಿಯೋಗ, ಸಂಜೆ ಅಮ್ಮನವರ ಉತ್ಸವ ಮೂರ್ತಿ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ನೆರವೇರಲಿದೆ. ಸಾರ್ವಜನಿಕರು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಶ್ರೀ ಬಣ್ಣಾರಿ ಮಾರಮ್ಮನವರ ಪೂಜೆ ಮಹೋತ್ಸವದಲ್ಲಿ ಭಾಗಿಯಾಗುವಂತೆ ದೇವಾಲಯದ ಟ್ರಸ್ಟ್ ತಿಳಿಸಿದೆ.

ಸೂಡಾನ್‌ನಲ್ಲಿ ಸಾವನ್ನಪ್ಪಿದ್ದ ಮಹಿಳೆ ಶವ ಹುಣಸೂರಿಗೆ

ಹನಗೋಡು, ಏ.28– ವ್ಯಾಪಾರಕ್ಕಾಗಿ ಈಶಾನ್ಯ ಆಫ್ರಿಕಾದ ಸೂಡನ್‌ಗೆ ತೆರಳಿ ಸಾವನ್ನಪ್ಪಿದ್ದ ಅಲೆಮಾರಿ (ಹಕ್ಕಿಪಿಕ್ಕಿ) ಜನಾಂಗದ ಮಹಿಳೆಯ ಪಾರ್ಥಿವ ಶರೀರ ಭಾನುವಾರ ಸ್ವಗ್ರಾಮ ಪಕ್ಷರಾಜಪುರಕ್ಕೆ ಆಗಮಿಸಿತು.



ತಾಲೂಕಿನ ಹನಗೋಡು ಹೋಬಳಿ ಪಕ್ಷಿರಾಜಪುರ 2ನೇ ಕಾಲೋನಿಯ ಅಲೆಮಾರಿ ಜನಾಂಗದ ನಂದಿನಿ ಎಂಬಾಕೆ ಕಳೆದ 2 ವರ್ಷಗಳ ಹಿಂದೆ ತಮ್ಮ ಪತಿಯೊಂದಿಗೆ ಸೂಡಾನ್‌ಗೆ ವ್ಯಾಪಾರಕ್ಕಾಗಿ ತೆರಳಿದ್ದರು. ಆದರೆ ಅನಾರೋಗ್ಯದಿಂದ ಏ.14ರಂದು ಸಾವನ್ನಪ್ಪಿದ್ದರು. ಈ ವೇಳೆ ಆಕೆ ಶವವನ್ನು ಸ್ವಗ್ರಾಮಕ್ಕೆ ತರುವಂತೆ ಪಕ್ಷರಾಜಪುರದ ನಿವಾಸಿಗಳು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಅವರನ್ನು ಭೇಟಿ ಮಾಡಿ ಮನವಿ ಮಾಡಿಕೊಂಡಿದ್ದರು.



ಇದಕ್ಕೆ ಸ್ಪಂದಿಸಿದ್ದ ಮಂಜುನಾಥ್ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಅವರನ್ನು ಸಂಪರ್ಕಿಸಿ, ಶವವನ್ನು ಭಾರತಕ್ಕೆ ತರಲು ಕ್ರಮ ಕೈಗೊಂಡಿದ್ದರು. ಈ ವೇಳೆ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಅವರು ಸೂಡಾನ್ ನಲ್ಲಿರುವ ಭಾರತದ ರಾಯಭಾರ ಕಚೇರಿ ಅಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿ ನಂದಿನಿ ಶವ ತರಲು ಎಲ್ಲಾ ರೀತಿಯ ವ್ಯವಸ್ಥೆ ಮಾಡಿದ್ದರು. ಅದರಂತೆ ನಂದಿನಿ ಶವ ಸೂಡಾನ್‌ನಿಂದ ವಿಮಾನದ ಮೂಲಕ ಶನಿವಾರ ಬೆಳಗ್ಗೆ ಮುಂಬೈಗೆ ತಲುಪಿದ್ದು, ಅಲ್ಲಿಂದ ಆಂಬುಲೆನ್ಸ್ ಮೂಲಕ ಭಾನುವಾರ ಮಧ್ಯಾಹ್ನ ವೇಳೆಗೆ ಪಕ್ಷಿರಾಜಪುರಕ್ಕೆ ತಲುಪಿತು. ಸಂಜೆ ಮೃತರ ಅಂತ್ಯಕ್ರಿಯೆ ನೆರವೇರಿತು. ಈ ವೇಳೆ ಮೈಸೂರು ಜಿಲ್ಲಾ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ಇಲಾಖೆ ಅಧಿಕಾರಿ ಮಲ್ಲೇಶ್ ಹಾಗೂ ತಾಲೂಕು ಅಧಿಕಾರಿಗಳು ಇದ್ದರು.

ಕೃತಜ್ಞತೆ ಸಲ್ಲಿಕೆ: ಸೂಡಾನ್‌ನಿಂದ ನಂದಿನಿ ಶವವನ್ನು ಭಾರತಕ್ಕೆ ತರಲು ಸಹಕರಿಸಿದ ಮಾಜಿ ಶಾಸಕ ಮಂಜುನಾಥ್ ಹಾಗೂ ಕರ್ನಾಟಕ ಸರ್ಕಾರಕ್ಕೆ ನಂದಿನಿ ಕುಟುಂಬದವರು ಹಾಗೂ ಗ್ರಾಮಸ್ಥರು ಕೃತಜ್ಞತೆ ಸಲ್ಲಿಸಿದ್ದಾರೆ.

ಕೆರೆಯಲ್ಲಿ ಮುಳುಗುತ್ತಿದ್ದ ಬಸವನ ರಕ್ಷಣೆ



ತಿ.ನರಸೀಪುರ, ಏ.28– ಕೆರೆಯಲ್ಲಿ ಮುಳುಗುತ್ತಿದ್ದ ಬಸವನನ್ನು ರಕ್ಷಿಸಿರುವ ಘಟನೆ ತಾಲೂಕಿನ ಆಲಗೂಡು ಗ್ರಾಮದಲ್ಲಿ ನಡೆದಿದೆ.

ತಿ.ನರಸೀಪುರ ಪುರಸಭೆ ವ್ಯಾಪ್ತಿಯ ಆಲಗೂಡು ಗ್ರಾಮದ ಸಿದ್ದೇಶ್ವರ ದೇವಸ್ಥಾನದ ಮುಂಭಾಗದ ಕೊಳೆಗೆರೆ(ಕೆರೆ)ಯಲ್ಲಿ ಕಳೆದ ರಾತ್ರಿ ಬಸವ ಸಿಲುಕಿ ಹೊರಬರಲಾಗದೇ ಪರಿತಪಿಸುತ್ತಿತ್ತು. ಇಂದು ಬೆಳಗ್ಗೆ ಇದನ್ನು ಕಂಡ ಸಾರ್ವಜನಿಕರು ಪುರಸಭೆ ಗಮನಕ್ಕೆ ತಂದು, ಜೆಸಿಬಿ ಮೂಲಕ ಬಸವನನ್ನು ರಕ್ಷಣೆ ಮಾಡಲಾಯಿತು. ಈ ವೇಳೆ ಸ್ಥಳದಲ್ಲಿದ್ದ ಅಗ್ನಿಶಾಮಕ ದಳದ ಸಿಬ್ಬಂದಿ ಬಸವನನ್ನು ಕೆರೆಯಿಂದ ಮೇಲೆತ್ತಲು ಸಾರ್ವಜನಿಕರಿಗೆ ಸಹಕಾರ ನೀಡಿದರು.

ಚುನಾವಣೆಯಲ್ಲಿ ಬಾಲರಾಜ್ ಗೆಲುವು ಖಚಿತ


ಸರಗೂರು, ಏ.28– ಚುನಾವಣೆಯಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿ ಎಸ್.ಬಾಲರಾಜ್ ಗೆಲುವು ಖಚಿತ ಎಂದು ಬಿಜೆಪಿ ಜಿಲ್ಲಾ ಗ್ರಾಮಾಂತರ ಕಾರ್ಯದರ್ಶಿ ಎಂ.ಪಿ.ಮಂಜುನಾಥ್ ವಿಶ್ವಾಸ ವ್ಯಕ್ತಪಡಿಸಿದರು.



ಪಟ್ಟಣದಲ್ಲಿ ಮಾತನಾಡಿದ ಅವರು, ಸರಳ ಸಜ್ಜನಿಕೆ ವ್ಯಕ್ತಿಯಾದ ಬಾಲರಾಜ್ ಅವರಿಗೆ ತಾಲೂಕಿನ ಜನತೆ ಹೆಚ್ಚಿನ ಮತ ನೀಡಿದ್ದಾರೆ. ಬಿಜೆಪಿ, ಜೆಡಿಎಸ್ ಕಾರ್ಯಕರ್ತರು ಎಲ್ಲರೂ ಒಗ್ಗೂಡಿ ಶ್ರಮಿಸಿದ್ದಾರೆ. ಹೀಗಾಗಿ ಬಾಲರಾಜ್ ಅವರ ಗೆಲುವು ಖಚಿತವಾಗಿದೆ. ಚುನಾವಣೆಯಲ್ಲಿ ಬಾಲರಾಜ್ ಗೆಲುವಿಗೆ ಶ್ರಮಿಸಿದ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ವಿಶ್ವ ಮಟ್ಟದಲ್ಲಿ ಪ್ರಖ್ಯಾತಿ, ಗೌರವ ತಂದು ಕೊಟ್ಟ ವಿಶ್ವ ನಾಯಕ ಮೋದಿ ಅವರು ಮತ್ತೊಮ್ಮೆ ಪ್ರಧಾನಿಯಾಗಲಿದ್ದಾರೆ. ಹೀಗಾಗಿ ಸರಳ ಸಜ್ಜನಿಕೆಯ ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜ್ ಅವರಿಗೆ ಮತದಾರರು ಆಶೀರ್ವಾದ ಮಾಡಲಿದ್ದು, ಅವರ ಗೆಲುವು ಖಚಿತ ಎಂದರು. ಈ ವೇಳೆ ಲಂಕೆ ಗ್ರಾಪಂ ಮಾಜಿ ಅಧ್ಯಕ್ಷರಾದ ರಮೇಶ್, ಕರಿಸ್ವಾಮಿ, ಉಪಾಧ್ಯಕ್ಷ ಮಹೇಶ್, ಮುಖಂಡರಾದ ಸೋಮೇಶ್, ನಂದೀಶ್ ಸೇರಿದಂತೆ ಪಕ್ಷದ ಕಾರ್ಯಕರ್ತರು ಹಾಜರಿದ್ದರು.

ಐಶ್ವರ್ಯ ನಿಧನ



ಸರಗೂರು, ಏ.28–ಪಟ್ಟಣದ 3ನೇ ವಾರ್ಡ್ ನಿವಾಸಿ ಐಶ್ವರ್ಯ (19) ಭಾನುವಾರ ನಿಧನರಾದರು. ಮೃತರು ತಾಯಿ, ಅಣ್ಣ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಪಟ್ಟಣದ ಮಾದಿಗ ಜನಾಂಗದ ರುದ್ರಭೂಮಿಯಲ್ಲಿ ನಡೆಯಲಿದೆ.

ಮಧುಮೇಹ, ರಕ್ತದೊತ್ತಡ ನಿವಾರಣೆಗೆ ಆಧುನಿಕ ಚಿಕಿತ್ಸಾ ವಿಧಾನ ಅನುಸರಿಸಿ

ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಸಲಹೆ



ಸುಯೋಗ್ ಆಸ್ಪತ್ರೆಯ ವತಿಯಿಂದ ನಡೆದ ಗ್ರಾಮೀಣ ವೈದ್ಯರುಗಳಿಗೆ ಪುನರ್ ಶಿಕ್ಷಣ ಕಾರ್ಯಾಗಾರವನ್ನು ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಉದ್ಘಾಟಿಸಿದರು. ಎಂಡಿ ಡಾ.ಸುಯೋಗ್ ಯೋಗಣ್ಣ, ವೈದ್ಯರಾದ ಡಾ.ಅಭಿಷೇಕ್ ಹಾಗೂ ಡಾ.ಅಭಿಲಾಶ್ ಚಿತ್ರದಲ್ಲಿದ್ದಾರೆ.

ಮೈಸೂರು,ಏ.28(ಎಸ್‌ಬಿಡಿ)–ಮಧುಮೇಹ ಹಾಗೂ ರಕ್ತದೊತ್ತಡ ನಿಯಂತ್ರಣಕ್ಕೆ ಆಧುನಿಕ ಚಿಕಿತ್ಸಾ ವಿಧಾನ ಅನುಸರಿಸುವಂತೆ ಮೈಸೂರಿನ ಸುಯೋಗ್ ಆಸ್ಪತ್ರೆ ಅಧ್ಯಕ್ಷ ವೈದ್ಯ ಸಾಹಿತಿ ಡಾ.ಎಸ್.ಪಿ. ಯೋಗಣ್ಣ ವೈದ್ಯರಿಗೆ ಸಲಹೆ ನೀಡಿದರು.

ಸುಯೋಗ್ ಆಸ್ಪತ್ರೆ ವತಿಯಿಂದ ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಗ್ರಾಮೀಣ ವೈದ್ಯರಿಗೆ ಪುನರ್ ಶಿಕ್ಷಣ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿ, ಜಗತ್ತಿನಲ್ಲಿ ಮಧುಮೇಹ (ಸಕ್ಕರೆ ಕಾಯಿಲೆ) ಹಾಗೂ ಅಧಿಕ ರಕ್ತದೊತ್ತಡ ಬಾಧಿತರ ಸಂಖ್ಯೆ ಹೆಚ್ಚುತ್ತಿದೆ. ಈ ಎರಡೂ ಕಾಯಿಲೆಗಳ ನಿಯಂತ್ರಣಕ್ಕೆ ವೈದ್ಯರು ಆಧುನಿಕ ಚಿಕಿತ್ಸಾ ವಿಧಾನ ಅನುಸರಿಸಬೇಕು ಎಂದರು.

ಈ ಎರಡು ಕಾಯಿಲೆಗಳ ಚಿಕಿತ್ಸೆ ಬಗ್ಗೆ ನಿರಂತರ ಸಂಶೋಧನೆ ನಡೆಯುತ್ತಿದ್ದು, ಪರಿಣಾಮಕಾರಿ ಕ್ರಮಗಳು ಲಭ್ಯವಿವೆ. ಇದರ ಬಗ್ಗೆ ಎಲ್ಲಾ ವೈದ್ಯರಿಗೆ ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಅಭ್ಯಾಸ ಮಾಡುವ ವೈದ್ಯರಿಗೆ ಮನದಟ್ಟು ಮಾಡುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಸುಯೋಗ್ ಆಸ್ಪತ್ರೆ ವತಿಯಿಂದ ಆಗಾಗ್ಗೆ ಪುನರ್ ಶಿಕ್ಷಣ ಕಾರ್ಯಾಗಾರ ಆಯೋಜಿಸಿ, ತಜ್ಞವೈದ್ಯರ ಮೂಲಕ ಮಾಹಿತಿ ಹಂಚಲಾಗುತ್ತಿದೆ ಎಂದು ತಿಳಿಸಿದರು.

ಸಕ್ಕರೆ ಕಾಯಿಲೆಯನ್ನು ಸಂಪೂರ್ಣವಾಗಿ ಗುಣಪಡಿಸುತ್ತೇವೆ ಎಂಬ ಸುಳ್ಳು ಜಾಹೀರಾತುಗಳಿಗೆ ಜನ ಮಾರುಹೋಗಬಾರದು. ಈ ಬಗ್ಗೆ ರೋಗಿಗಳಿಗೆ ವೈದ್ಯರು ಅರಿವು ಮೂಡಿಸಬೇಕು. ಇವೆರಡೂ ಕಾಯಿಲೆಗಳನ್ನು ಉತ್ತಮ ಆಹಾರ ಕ್ರಮ, ಜೀವನ ಶೈಲಿ ಹಾಗೂ ಸೂಕ್ತ ಚಿಕಿತ್ಸೆಯಿಂದ ನಿಯಂತ್ರಣದಲ್ಲಿಡಬಹುದೇ ಹೊರತು ಸದ್ಯಕ್ಕೆ ಸಂಪೂರ್ಣವಾಗಿ ವಾಸಿ ಮಾಡಲು ಸಾಧ್ಯವಿಲ್ಲ ಎಂಬ ವೈಜ್ಞಾನಿಕ ಸತ್ಯವನ್ನು ಮನವರಿಕೆ ಮಾಡಿಕೊಡಬೇಕು ಎಂದು ಕಿವಿಮಾತು ಹೇಳಿದರು.

ಆಸ್ಪತ್ರೆಯ ಫಿಜಿಷಿಯನ್ ಡಾ.ಅಭಿಷೇಕ್ ಮಾತನಾಡಿ, ಅಧಿಕ ರಕ್ತ ಒತ್ತಡಕ್ಕೆ ಆಯ್ಕೆ ಮಾಡಿಕೊಳ್ಳಬೇಕಾದ ಔಷಧ, ಪ್ರಮಾಣ, ಅದರಿಂದ ಮೆದುಳು, ಹೃದಯ, ಕಿಡ್ನಿ ಮತ್ತು ರಕ್ತನಾಳಗಳ ಮೇಲಾಗುವ ಪರಿಣಾಮವನ್ನು ಪರೀಕ್ಷೆಗಳ ಮೂಲಕ ತಿಳಿದುಕೊಂಡು ಸೂಕ್ತ ಚಿಕಿತ್ಸಾ ಕ್ರಮ ಮುಂದುವರೆಸುವುದು ಉತ್ತಮ ಎಂದರು.

ಸಕ್ಕರೆ ಕಾಯಿಲೆ ತಜ್ಞ ಡಾ.ಅಭಿಲಾಶ್ ಮಾತನಾಡಿ, ಸಕ್ಕರೆ ಕಾಯಿಲೆಯನ್ನು ನಿಯಂತ್ರಿಸದಿದ್ದಲ್ಲಿ ಬಹು ಅಂಗಾಂಗಗಳಿಗೆ ತೊಂದರೆಯಾಗಿ ಮೆದುಳಿನ ಸ್ಟ್ರೋಕ್, ಹೃದಯಾಘಾತ, ಕಿಡ್ನಿ ವಿಫಲತೆ, ಗ್ಯಾಂಗ್ರಿನ್ ಇನ್ನಿತರ ಗಂಭೀರ ಸಮಸ್ಯೆ ಸೃಷ್ಟಿಯಾಗಬಹುದು. ಇದನ್ನು ತಡೆಯುವಲ್ಲಿ ವೈದ್ಯರ ಪಾತ್ರ ಬಹಳ ಮುಖ್ಯ ಎಂದರು. ಕಾರ್ಯಾಗಾರದಲ್ಲಿ ಗ್ರಾಮೀಣ ಪ್ರದೇಶದ ನೂರಕ್ಕೂ ಹೆಚ್ಚು ವೈದ್ಯರು ಪಾಲ್ಗೊಂಡಿದ್ದರು. ಸುಯೋಗ್ ಆಸ್ಪತ್ರೆಯ ಉಪ ವೈದ್ಯಕೀಯ ಅಧೀಕ್ಷಕ ಡಾ.ಯೋಗೇಶ್, ವ್ಯವಸ್ಥಾಪಕ ನಿರ್ದೇಶಕ ಡಾ.ಸುಯೋಗ್ ಯೋಗಣ್ಣ, ಪ್ರಧಾನ ವ್ಯವಸ್ಥಾಪಕ ಅರುಣ್‌ಕುಮಾರ್ ಮತ್ತಿತರರಿದ್ದರು.

ಚುನಾವಣಾಧಿಕಾರಿಗಳು, ಮತದಾರರಿಗೆ ಸಂದೇಶ್ ಸ್ವಾಮಿ ಅಭಿನಂದನೆ



ಮೈಸೂರು, ಏ.28(ಎಸ್‌ಬಿಡಿ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಶಾಂತಿಯುತ ಮತದಾನವಾದ ಹಿನ್ನೆಲೆಯಲ್ಲಿ ಮೈಸೂರಿನ ಬಿಜೆಪಿ ಮುಖಂಡರಾದ ಮಾಜಿ ಮೇಯರ್ ಸಂದೇಶ್ ಸ್ವಾಮಿ ಚುನಾವಣಾಧಿಕಾರಿಗಳು ಹಾಗೂ ಮತದಾರರಿಗೆ ಅಭಿನಂದನೆ ತಿಳಿಸಿದ್ದಾರೆ.

ಲೋಕಸಭಾ ಚುನಾವಣೆ ಅತ್ಯಂತ ಶಾಂತಿಯುತವಾಗಿ ನಡೆದಿದೆ. ಅದರಲ್ಲೂ ಮೈಸೂರಿನಲ್ಲಿ ಸಣ್ಣ ಗಲಾಟೆಯೂ ನಡೆದಿಲ್ಲ. ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ಎರಡು–ಮೂರು ದಶಕಗಳಲ್ಲೇ ಅತೀ ಹೆಚ್ಚು ಶೇ.65ರಷ್ಟು ಮತದಾನವಾಗಿದೆ. ಮತದಾರರು ಅತ್ಯುತ್ಸಾಹದಿಂದ ಪ್ರಜಾಪ್ರಭುತ್ವ ಹಬ್ಬದಲ್ಲಿ ಭಾಗವಹಿಸಿದ್ದು ಅಭಿನಂದನೀಯ. ಶಾಂತಿಯುತವಾಗಿ ಯಶಸ್ವಿ ಮತದಾನ ನಡೆಸಿದ್ದಕ್ಕೆ ಜಿಲ್ಲಾಧಿಕಾರಿಗಳು ಸೇರಿದಂತೆ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ಹಾಗೂ ಎಲ್ಲಾ ಮತದಾರರಿಗೆ ಧನ್ಯವಾದ ಸಲ್ಲಿಸಿದ್ದಾರೆ.

ಬಿಜೆಪಿಗೆ ಗೆಲುವು: ಮೈಸೂರು ರಾಜ ಮಹಾರಾಜರ ಕೊಡುಗೆಗಳು ಹಾಗೂ ಪ್ರಧಾನಿ ಮೋದಿ ಆಡಳಿತ ಮತ್ತು ಜನಪರ ಯೋಜನೆಗಳ ಮನಗಂಡ ಮತದಾರರು ಬಿಜೆಪಿ ಬೆಂಬಲಿಸಿದ್ದಾರೆ. ಯದುವೀರ್ ಅವರು ಅತೀಹೆಚ್ಚು ಮತಗಳ ಅಂತರದಿಂದ ಗೆಲುವು ಸಾಧಿಸಲಿದ್ದಾರೆ. ಚುನಾವಣೆಯಲ್ಲಿ ಅವಿರತವಾಗಿ ಶ್ರಮಿಸಿದ ನರಸಿಂಹರಾಜ ಕ್ಷೇತ್ರದ ಬಿಜೆಪಿ ಪದಾಧಿಕಾರಿಗಳು, ಮುಖಂಡರು ಹಾಗೂ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಪ್ರಕಟಣೆಯಲ್ಲಿ ಸಂದೇಶ್ ಸ್ವಾಮಿ ತಿಳಿಸಿದ್ದಾರೆ.

ರಸ್ತೆ ದಾಟುತ್ತಿದ್ದ ವೃದ್ಧೆ ಮಾಂಗಲ್ಯ ಸರ ಅಪಹರಣ

ಮೈಸೂರು, ಏ.28(ಎಸ್‌ಬಿಡಿ)– ರಸ್ತೆ ದಾಟುತ್ತಿದ್ದ ವೃದ್ಧೆಯ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮೈಸೂರಿನ ಅಗ್ರಹಾರದಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

ಇಲ್ಲಿನ ತ್ಯಾಗರಾಜ ರಸ್ತೆ 2ನೇ ಕ್ರಾಸ್ ನಿವಾಸಿ ರಾಮಾನುಜನ್ ಪತ್ನಿ ಎಂ.ವಿ.ಚಂಪಕವಲ್ಲಿ(68) ಅವರ ಸುಮಾರು 5 ಲಕ್ಷ ರೂ. ಮೌಲ್ಯದ 130 ಗ್ರಾಂ ಚಿನ್ನದ ಮಾಂಗಲ್ಯ ಸರ ಕಳ್ಳನ ಪಾಲಾಗಿದೆ.

ಚಂಪಕವಲ್ಲಿ ಅವರು ಹಣ್ಣು–ತರಕಾರಿ ತರಲೆಂದು ಸೊಸೆ ಲಕ್ಷ್ಮೀ ಅವರೊಂದಿಗೆ ಶುಕ್ರವಾರ ರಾತ್ರಿ 9 ಗಂಟೆ ಸಮಯದಲ್ಲಿ 3ನೇ ಕ್ರಾಸ್‌ನಲ್ಲಿರುವ ಅಂಗಡಿಗೆ ಹೋಗಿದ್ದರು. ಅವರು ಅಂಗಡಿಯಲ್ಲಿ ಖರೀದಿಸಿಕೊಂಡು ದ್ವಿಚಕ್ರ ವಾಹನದಲ್ಲಿದ್ದ ಸೊಸೆ ಬಳಿ ಹೋಗಲು ರಸ್ತೆ ದಾಟುವಾಗ ವಾಣಿ ವಿಲಾಸ ಜೋಡಿ ರಸ್ತೆ ಕಡೆಯಿಂದ ಬೈಕ್‌ನಲ್ಲಿ ಬಂದ ಖದೀಮ ಚಂಪಕವಲ್ಲಿ ಅವರ ಸರ ಕಿತ್ತುಕೊಂಡು ಚಾಮರಾಜ ಜೋಡಿ ರಸ್ತೆಯಲ್ಲಿ ರಾಮಸ್ವಾಮಿ ವೃತ್ತದ ಕಡೆಗೆ ಪರಾರಿಯಾಗಿದ್ದಾನೆ. ಈ ವೇಳೆ ಲಕ್ಷ್ಮೀ ಅವರು ಕೂಗಿಕೊಂಡಿದ್ದರಿಂದ ಸ್ಥಳೀಯರು ಕಳ್ಳನ ಬೆನ್ನತ್ತಿದರಾದರೂ ಪ್ರಯೋಜನವಾಗಿಲ್ಲ. ನಂಬರ್ ಪ್ಲೇಟ್ ಇಲ್ಲದ ಆರ್‌ಟಿಆರ್ ಬೈಕ್‌ನಲ್ಲಿ ಬಂದಿದ್ದ ಕಳ್ಳ, ಹೆಲ್ಮೆಟ್ ಧರಿಸಿದ್ದ ಎಂದು ಸಾರ್ವಜನಿಕರು ತಿಳಿಸಿದ್ದಾಗಿ ಚಂಪಕವಲ್ಲಿ ಅವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಕೃಷ್ಣರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ನಂಜನಗೂಡು ತಾಲೂಕಿನ ಬಂಚಳ್ಳಿಹುಂಡಿ ಗ್ರಾಮದ ಮತಗಟ್ಟೆಯಲ್ಲಿ ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು ಅವರು ಮತದಾನ ಮಾಡಿದರು.

ನಕಲಿ ದಾಖಲೆ ಸಲ್ಲಿಸಿ ಬ್ಯಾಂಕ್‌ನಿಂದ ಸಾಲ ಪಡೆದು ವಂಚನೆ; ದಂಪತಿ ವಿರುದ್ಧ ಪ್ರಕರಣ ದಾಖಲು

ಮೈಸೂರು,ಏ.28(ಎಸ್‌ಪಿಎನ್)– ನಕಲಿ ದಾಖಲೆ ನೀಡಿ ಬ್ಯಾಂಕಿನಲ್ಲಿ 1.25 ಕೋಟಿ ರೂ.ಸಾಲ ಪಡೆದ ದಂಪತಿ ವಿರುದ್ಧ ಜಯಲಕ್ಷ್ಮೀಪುರಂ ಠಾಣೆಯಲ್ಲಿ ವಂಚನೆ ಪ್ರಕರಣ ದಾಖಲಾಗಿದೆ. ನಗರದ ವಿನಾಯಕನಗರ ನಿವಾಸಿ ಕಲಾ ಹಾಗೂ ಬಿ.ಸುಂದರೇಶ್ ದಂಪತಿ ವಿರುದ್ಧ ಐಡಿಬಿಐ ಬ್ಯಾಂಕಿನ ಮ್ಯಾನೇಜರ್ ಸವಿತಾ ಉಮಾಮಣಿ ಜಯಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಕಲಾ ಹಾಗೂ ಸುಂದರೇಶ್, ನಮ್ಮ ಬ್ಯಾಂಕಿನಲ್ಲಿ ಜಂಟಿ ಖಾತೆ ತೆರೆದಿದ್ದರು. 2023ರಲ್ಲಿ ಅವರು ನಕಲಿ ದಾಖಲಾತಿಗಳನ್ನು ನೀಡಿ ಎರಡು ಹಂತಗಳಲ್ಲಿ 1.25 ಕೋಟಿ ರೂ. ಸಾಲ ಪಡೆದಿದ್ದರು. ಕೆಲ ತಿಂಗಳು ಕಂತನ್ನು ಪಾವತಿಸಿದ್ದರು. ನಂತರ ಕಂತು ಪಾವತಿಸಿರಲಿಲ್ಲ. ಹೀಗಾಗಿ ಬ್ಯಾಂಕ್ ಸಿಬ್ಬಂದಿ ಸ್ಥಳ ಪರಿಶೀಲನೆಗೆಂದು ತೆರಳಿದ ವೇಳೆ ಅವರು ಮನೆಯ ದಾಖಲಾತಿಗಳನ್ನು ಬೇರೊಂದು ಬ್ಯಾಂಕಿಗೆ ಅಡಮಾನವಿಟ್ಟು ಸಾಲ ಪಡೆದಿದ್ದ ಹಿನ್ನೆಲೆಯಲ್ಲಿ ಆ ಬ್ಯಾಂಕಿನವರು ಮುಟ್ಟುಗೋಲು ಹಾಕಿಕೊಂಡಿರುವುದು ಬೆಳಕಿಗೆ ಬಂದಿದೆ. ಸುಂದರೇಶ್ ಅವರು ನೀಡಿದ್ದ ದಾಖಲೆಗಳನ್ನು ಪರಿಶೀಲಿಸಿದ ವೇಳೆ ಅವುಗಳು ನಕಲಿ ಎಂಬುದು ದೃಢಪಟ್ಟಿದ್ದು, ಅವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಬ್ಯಾಂಕಿನ ಮ್ಯಾನೇಜರ್ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.